ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಸೆಪ್ಟೆಂಬರ್ 20 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 155 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕನ್ನಡ ಜನೋತ್ಸವವಾಗಿ ಕರ್ನಾಟಕ ಸುವರ್ಣ ಸಂಭ್ರಮ ಸಮಾರೋಪ

ಈ ಸಲ 69 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ

ಸೆ.30ರವರೆಗೆ ಅರ್ಜಿ ಸಲ್ಲಿಕೆಗೆ ಅವಕಾಶ

● ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ ● ವಿಧಾನಸೌಧದ ಮುಂಭಾಗ ಅದ್ಧೂರಿ ಸಮಾರಂಭ ● ಮನೆ ಮನೆಯಲ್ಲಿ ಕನ್ನಡ ಬಾವುಟ; ನಾಡು–ನುಡಿ, ಹಿರಿಮೆ ಸಾರುವ ನಿರ್ಧಾರ



ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯೋತ್ಸವ ಪ್ರಶಸ್ತಿ ಕುರಿತು ಪೂರ್ವಭಾವಿ ಸಭೆ ನಡೆಸಿದರು.

ಬೆಂಗಳೂರು, ಸೆ.19(ಕೆಎಂಶಿ)– ಕರ್ನಾಟಕ ಸುವರ್ಣ ಸಂಭ್ರಮ–50 ಸಮಾರೋಪವನ್ನು ಕನ್ನಡ ಜನೋತ್ಸವವಾಗಿ ಆಚರಿಸಲು ನಿರ್ಧರಿಸಲಾಗಿದೆ. ಈ ಬಾರಿ 69 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 30ರವರೆಗೆ ಅವಕಾಶವಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಅಧ್ಯಕ್ಷತೆಯಲ್ಲಿ ಪ್ರಶಸ್ತಿ ಆಯ್ಕೆ ಸಮಿತಿ ರಚಿಸಲಾಗಿದೆ.

ಮನೆ ಮನೆಯಲ್ಲಿ ಕನ್ನಡ ಬಾವುಟ ಹಾರಿಸಲು ಮನವಿ ಮಾಡಲಾಗುವುದು, ಕನ್ನಡ ಭಾಷೆ, ಸಂಸ್ಕೃತಿ, ಸಂಗೀತ, ಸಾಹಿತ್ಯ, ಜನಪದ, ಚರಿತ್ರೆ ಎಲ್ಲದರ ಮಹತ್ವ ಸಾರಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಕರ್ನಾಟಕ ಸುವರ್ಣ ಸಂಭ್ರಮ–50 ಸಮಾರೋಪ ವಿಧಾನಸೌಧದ ಮುಂಭಾಗದಲ್ಲಿ ನಡೆಯಲಿದೆ, ರಾಜ್ಯೋತ್ಸವ ಪ್ರಶಸ್ತಿ ಪ್ರದಾನವನ್ನೂ ಇದೇ ಸಂದರ್ಭದಲ್ಲಿ ಮಾಡಲಾಗುವುದು ಎಂದರು.

ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕರ್ನಾಟಕ ಸುವರ್ಣ ಸಂಭ್ರಮ ಸಮಾರೋಪ ಕುರಿತ ಪೂರ್ವಭಾವಿ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಕನ್ನಡ ಚಳವಳಿ, ಕನ್ನಡತನದ ವಿಸ್ತಾರ, ಕನ್ನಡದ ಅರಿವು ವಿಸ್ತರಿಸಿದ ಮಾದರಿಗಳು, ಹೋರಾಟದ ಹಾದಿ, ರೂಪುಗೊಂಡ ಕನ್ನಡ ಚರಿತ್ರೆಯನ್ನು ಇಂದಿನ ಯುವಸಮೂಹಕ್ಕೆ ತಲುಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಎಲ್ಲಾ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಕರ್ನಾಟಕ ಸುವರ್ಣ ಸಂಭ್ರಮ ನಡೆಯುತ್ತಿದ್ದು, ಹಂಪಿಯಿಂದ ಆರಂಭವಾದ ಕನ್ನಡ ರಥಯಾತ್ರೆ ಈಗಾಗಲೇ 28 ಜಿಲ್ಲೆಗಳಲ್ಲಿ ಸಾಗಿದೆ, ರಥಯಾತ್ರೆಯ ಸಮಾರೋಪ ಸಮಾರಂಭ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ನಡೆಯಲಿದೆ.

ಮೈಸೂರು ಜಿಲ್ಲೆಯ ನೂತನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಪ್ರತಿಮೆ ಸ್ಥಾಪನೆ ಕಾಮಗಾರಿ ಪ್ರಗತಿಯಲ್ಲಿದೆ, ಬಳ್ಳಾರಿಯಲ್ಲಿ ರಂಜಾನ್ ಸಾಬ್ ಸ್ಮಾರಕ ನಿರ್ಮಾಣ ನಡೆಯುತ್ತಿದೆ, ಧಾರವಾಡದಲ್ಲಿ ಅದರಗುಂಚಿ ಶಂಕರಗೌಡ ಸ್ಮಾರಕ ನಿರ್ಮಿಸಲು ಅಂದಾಜು ವೆಚ್ಚ ಸಲ್ಲಿಸಲಾಗಿದೆ, ಗದಗದಲ್ಲಿ ಅಂದಾನಪ್ಪ ದೊಡ್ಡಮೇಟಿ ಸ್ಮಾರಕ ನಿರ್ಮಿಸಲಾಗುತ್ತಿದೆ.

ಸಾಧಕ 50 ಮಹಿಳೆಯರ ಕುರಿತ 100 ಪುಟಗಳ 50 ಕೃತಿಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮುದ್ರಿಸಲಿದೆ, ವಿಧಾನಸೌಧದ ಆವರಣದಲ್ಲಿ 25 ಅಡಿ ಎತ್ತರದ ಭುವನೇಶ್ವರಿ ದೇವಿ ಕಂಚಿನ ಪ್ರತಿಮೆ ಸ್ಥಾಪನೆ ಕಾಮಗಾರಿ ಪ್ರಗತಿಯಲ್ಲಿದ್ದು, ನವೆಂಬರ್ 1ರಂದು ■6ನೇ ಪುಟಕ್ಕೆ

ಮುನಿರತ್ನ ವಿರುದ್ಧ ಅತ್ಯಾಚಾರ, ಹನಿಟ್ರ್ಯಾಪ್ ಕೇಸ್ ದಾಖಲು

ಈತನೊಂದಿಗೆ ಇನ್ನಿತರ ಆರು ಮಂದಿ ಶಾಮೀಲು ಆರೋಪ



ಮುನಿರತ್ನ

ರಾಮನಗರ, ಸೆ.19– ಗುತ್ತಿಗೆದಾರನೊಬ್ಬನಿಗೆ ಜಾತಿನಿಂದನೆ ಹಾಗೂ ಜೀವ ಬೆದರಿಕೆ ಹಾಕಿದ ಆರೋಪದ ಮೇಲೆ ಜೈಲು ಸೇರಿರುವ ರಾಜರಾಜೇಶ್ವರಿ ನಗರದ ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ಅತ್ಯಾಚಾರ ಹಾಗೂ ಹನಿಟ್ರ್ಯಾಪ್‌ಗೆ ಮಹಿಳೆಯರನ್ನು ಬಳಸಿಕೊಂಡಿರುವ ಆರೋಪದ ಮೇರೆಗೆ ದೂರು ದಾಖಲಾಗಿದೆ.

ಬುಧವಾರ ತಡರಾತ್ರಿ ಸಂತ್ರಸ್ತ ಮಹಿಳೆ ಕಗ್ಗಲಿಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಗುಹಾಂತರ ರೆಸಾರ್ಟ್‌ನಲ್ಲಿ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಹನಿಟ್ರ್ಯಾಪ್ ಸೇರಿದಂತೆ ವಿವಿಧ ಕೃತ್ಯಗಳನ್ನು ಎಸಗಿರುವುದಾಗಿ ಶಾಸಕ ಮುನಿರತ್ನ ಸೇರಿದಂತೆ 7 ಮಂದಿಯ ವಿರುದ್ಧ ಮಹಿಳೆ ಆರೋಪ ಮಾಡಿದ್ದಾರೆ. ಮಹಿಳೆಯ ದೂರನ್ನು ಆಧರಿಸಿ ಕಗ್ಗಲಿಪುರ ಪೊಲೀಸರು ಶಾಸಕ ಮುನಿರತ್ನ, ಆತನ ಗನ್‌ಮ್ಯಾನ್ ವಿಜಯಕುಮಾರ್, ಸುಧಾಕರ, ಕಿರಣ್ ಕುಮಾರ್, ಲೋಹಿತ್ ಗೌಡ, ಮಂಜುನಾಥ ಹಾಗೂ ಲೋಕಿ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ.

ಸಮಾಜ ಸೇವಕಿಯಾಗಿ ಗುರುತಿಸಿಕೊಂಡು ಬಿಜೆಪಿಯಲ್ಲೂ ಸಕ್ರಿಯವಾಗಿರುವ ರಾಜರಾಜೇಶ್ವರಿ ನಗರದ ಸುಮಾರು 40 ವರ್ಷದ ಮಹಿಳೆ ದೂರು ಕೊಟ್ಟಿದ್ದಾರೆ. ದೂರು ನೀಡುವ ಸಲುವಾಗಿ ಮಹಿಳೆ ಬುಧವಾರ ಮಧ್ಯಾಹ್ನ ರಾಮನಗರದಲ್ಲಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಬಂದಿದ್ದರು. ಮಹಿಳೆಯನ್ನು ವಿಚಾರಿಸಿ ಮಾಹಿತಿ ಪಡೆದ ಪೊಲೀಸರು, ಕೃತ್ಯ ನಡೆದ ಸ್ಥಳ ಕಗ್ಗಲಿಪುರ ಪೊಲೀಸ್ ಠಾಣೆ ವ್ಯಾಪ್ತಿಗೆ ■6ನೇ ಪುಟಕ್ಕೆ

ಬಿಜೆಪಿ ಶಾಸಕ ಮುನಿರತ್ನಗೆ ಜಾತಿ ನಿಂದನೆ ಕೇಸಿನಲ್ಲಿ ಜಾಮೀನು ಮಂಜೂರು

ಬೆಂಗಳೂರು, ಸೆ.19– ಬಿಬಿಎಂಪಿ ಗುತ್ತಿಗೆದಾರನಿಗೆ ಜಾತಿ ನಿಂದನೆ, ಜೀವ ಬೆದರಿಕೆ ಹಾಗೂ ವಂಚನೆ ಪ್ರಕರಣದಲ್ಲಿ ಬಂಧನವಾಗಿದ್ದ ಬಿಜೆಪಿ ಶಾಸಕ ಮುನಿರತ್ನಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಲಾಗಿದೆ.

ಬೆಂಗಳೂರಿನ ಬಿಬಿಎಂಪಿ ಗುತ್ತಿಗೆದಾರನೊಬ್ಬನಿಗೆ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿ, ದಲಿತರಿಗೆ ಜಾತಿ ನಿಂದನೆ ಮಾಡಿದ್ದರು. ಜೊತೆಗೆ, ಇದೇ ವ್ಯಕ್ತಿಯ ಮೇಲೆ ಜೀವ ಬೆದರಿಕೆ ಹಾಗೂ ವಂಚನೆಯನ್ನೂ ಮಾಡಿದ್ದಾರೆ ಎಂದು ಕೇಸ್ ದಾಖಲಿಸಲಾಗಿತ್ತು. ಈ ಬಗ್ಗೆ ಆಡಿಯೋ ಸಮೇತ ದೂರು ನೀಡಿದ್ದ ಆಧಾರದಲ್ಲಿ ಪೊಲೀಸರು ಶಾಸಕ ಮುನಿರತ್ನ ಅವರನ್ನು ಬಂಧಿಸಿದ್ದರು. ಎರಡು ದಿನಗಳ ಕಾಲ ಪೊಲೀಸ್ ಕಸ್ಟಡಿಯಲ್ಲಿ ವಿಚಾರಣೆ ಮಾಡಿದ್ದ ಪೊಲೀಸರು ನಂತರ ಕೋರ್ಟ್ ಮುಂದೆ ಹಾಜರುಪಡಿಸಿದ್ದರು. ಇನ್ನು ಕಳೆದೆರಡು ದಿನಗಳ ಹಿಂದೆ ಜಾಮೀನು ಅರ್ಜಿ ಮುಂದೂಡಿಕೆ ಮಾಡಿ 14 ದಿನಗಳ ಕಾಲ ನ್ಯಾಯಾಂಗ ಬಂಧನ ವಿಧಿಸಲಾಗಿತ್ತು. ಆದರೆ, ನಿನ್ನೆ ಜಾಮೀನು ಅರ್ಜಿ ವಿಚಾರಣೆ ಮಾಡಿದ್ದ ನ್ಯಾಯಾಲಯದಿಂದ ಆದೇಶವನ್ನು ಇಂದಿಗೆ ಕಾಯ್ದಿರಿಸಲಾಗಿತ್ತು. ಇಂದು ಜಾಮೀನು ಅರ್ಜಿ ಕುರಿತು ಆದೇಶ ನೀಡಿದ ಕೋರ್ಟ್ ಕಳೆದ ಎರಡು ದಿನಗಳಿಂದ ಜೈಲಿನಲ್ಲಿದ್ದ ರಾಜರಾಜೇಶ್ವರಿ ನಗರದ ಬಿಜೆಪಿ ■6ನೇ ಪುಟಕ್ಕೆ

ಮಾಜಿ ಸಿಎಂಗಳಾದ ಕುಮಾರಸ್ವಾಮಿ, ಯಡಿಯೂರಪ್ಪ ನೂರು ಕೋಟಿ ಮೌಲ್ಯದ ಆಸ್ತಿ ಲೂಟಿ ಆರೋಪ

● ಸಿದ್ದರಾಮಯ್ಯ ಸಂಪುಟದ ಸಚಿವರಾದ ಕೃಷ್ಣಭೈರೇಗೌಡ, ದಿನೇಶ್ ಗುಂಡೂರಾವ್, ಸಂತೋಷ್‌ಲಾಡ್ ಗಂಭೀರ ಆರೋಪ ● ಬೆಂಗಳೂರು ಹೃದಯ ಭಾಗ ಗಂಗಾನಗರದಲ್ಲಿನ 1.11 ಎಕರೆ ಭೂಮಿ ಡಿ–ನೋಟಿಫಿಕೇಷನ್ ಅಕ್ರಮ ● ಕುಮಾರಸ್ವಾಮಿ ಚಾಲನೆ ನೀಡಿದರೆ, ಯಡಿಯೂರಪ್ಪ ಅಂಕಿತ ಹಾಕಿದ ಆರೋಪ

ಬೆಂಗಳೂರು, ಸೆ.19(ಕೆಎಂಶಿ)– ನಗರದ ಹೃದಯ ಭಾಗದಲ್ಲಿ ನೂರು ಕೋಟಿ ರೂ. ಬೆಲೆಯ ಆಸ್ತಿಯನ್ನು ಹಾಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಲಪಟಾಯಿಸಿದ್ದಾರೆಂದು ಸಿದ್ದರಾಮಯ್ಯ ಸಂಪುಟದ ಸಚಿವರುಗಳು ಇಂದಿಲ್ಲಿ ಆರೋಪಿಸಿದ್ದಾರೆ.

ಸಚಿವರಾದ ಕೃಷ್ಣಭೈರೇಗೌಡ, ದಿನೇಶ್ ಗುಂಡೂರಾವ್ ಹಾಗೂ ಸಂತೋಷ್ ಲಾಡ್ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಗಂಗಾನಗರದಲ್ಲಿರುವ 1.11 ಎಕರೆಗೆ ಸಂಬಂಧಿಸಿದಂತೆ ಡಿ–ನೋಟಿಫಿಕೇಷನ್ ಪ್ರಕರಣದಲ್ಲಿ ಈ ಇಬ್ಬರು ಭಾಗಿಯಾಗಿ, ಲೂಟಿ ಹೊಡೆದಿದ್ದಾರೆ. ತಾವು ಮಾಡಿರುವ ಆರೋಪಕ್ಕೆ ಉಭಯ ನಾಯಕರು ತತ್‌ಕ್ಷಣ ಸ್ಪಷ್ಟನೆ ಕೊಡಬೇಕು.



ಕುಮಾರಸ್ವಾಮಿ



ಯಡಿಯೂರಪ್ಪ

ಇಲ್ಲದಿದ್ದರೆ, ಕುಮಾರಸ್ವಾಮಿ ಕೇಂದ್ರ ಸಚಿವ ಸ್ಥಾನಕ್ಕೂ, ಯಡಿಯೂರಪ್ಪ ತಾವು ಹೊಂದಿರುವ ವಿವಿಧ ಹುದ್ದೆಗಳಿಗೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಈ ಹಗರಣ ಲೋಕಾಯುಕ್ತದ ಮುಂದಿದ್ದು ಪ್ರಕರಣವನ್ನು ತ್ವರಿತಗತಿಯಲ್ಲಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. 1976ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಈ 1.11 ಎಕರೆ ಭೂಮಿಯನ್ನು ಸ್ವಾಧೀನ ಮಾಡಿಕೊಂಡು 1988ರಲ್ಲಿ ಅದರ ಪ್ರಕ್ರಿಯೆ ಪೂರ್ಣಗೊಳಿಸಿದೆ. ಭೂಸ್ವಾಧೀನಗೊಂಡ ಜಮೀನನ್ನು ಡಿ–ನೋಟಿಫೈ ಮಾಡುವಂತೆ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಭೂಮಿ ಒಡೆತನದ 21 ಮಂದಿ ಹಾಗೂ ಅದನ್ನು ಜಿಪಿಎ ಮಾಡಿಸಿಕೊಂಡಿದ್ದ ಅವರ ಅತ್ತೆ ವಿಮಲಾ ಅವರು, ಸರ್ಕಾರಕ್ಕೆ ಅರ್ಜಿ ಸಲ್ಲಿಸುತ್ತಾರೆ. ಅರ್ಜಿ ಪರಿಶೀಲಿಸಿದ ಕುಮಾರಸ್ವಾಮಿ ಅವರು, ಈ ಬಗ್ಗೆ ಕಾನೂನು ರೀತ್ಯ ಕ್ರಮ ಕೈಗೊಳ್ಳಿ ಎಂದು ಸಂಬಂಧಪಟ್ಟ ಇಲಾಖೆಗೆ ಬರೆಯುತ್ತಾರೆ. ■6ನೇ ಪುಟಕ್ಕೆ

ಆಂಧ್ರದ ಹಿಂದಿನ ಜಗನ್ ಸರ್ಕಾರದಲ್ಲಿ ತಿರುಪತಿ ಲಡ್ಡು ತಯಾರಿಕೆಗೆ ಪ್ರಾಣಿ ಕೊಬ್ಬು ಬಳಕೆ

ಹಾಲಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಗಂಭೀರ ಆರೋಪಕ್ಕೆ ಲ್ಯಾಬ್ ರಿಪೋರ್ಟ್ ಪುಷ್ಟಿ



ವಿಜಯವಾಡ, ಸೆ.19– ಹಿಂದಿನ ವೈಎಸ್.ಜಗನ್ ಮೋಹನ್‌ರೆಡ್ಡಿ ನೇತೃತ್ವದ ವೈಎಸ್‌ಆರ್ ಸರ್ಕಾರದ ವಿರುದ್ಧ ಹಾಲಿ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಗಂಭೀರ ಆರೋಪ ಮಾಡಿದ್ದು, ಭಾರಿ ಸಂಚಲನ ಮೂಡಿಸಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ತಿರುಪತಿಯ ಲಡ್ಡು ಪ್ರಸಾದದಲ್ಲಿ ತುಪ್ಪದ ಬದಲು ಪ್ರಾಣಿಗಳ ಕೊಬ್ಬನ್ನು ಬಳಸುತ್ತಿದ್ದರು ಎಂದು ದೂರಿದ್ದಾರೆ. ಎನ್‌ಡಿಎ ಸಮ್ಮಿಶ್ರ ಸರ್ಕಾರ ರಚನೆಯಾಗಿ 100 ದಿನ ಪೂರೈಸಿದ ಹಿನ್ನೆಲೆಯಲ್ಲಿ ಮಂಗಳಗಿರಿಯ ಸಿಕೆ ಕನ್ವೆನ್ಷನ್ ಹಾಲ್‌ನಲ್ಲಿ ಎನ್‌ಡಿಎ ಮೈತ್ರಿಕೂಟದ ಶಾಸಕರು, ಸಂಸದರು ಮತ್ತು ಎಂಎಲ್‌ಸಿಗಳ ಸಭೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಮಾತನಾಡಿರುವ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಹಿಂದಿನ ಜಗನ್ ಸರ್ಕಾರ ತಿರುಮಲ ■6ನೇ ಪುಟಕ್ಕೆ

ಬಿವಿಬಿಯಲ್ಲಿ ನಾಳೆ ನಾಟ್ಯಾಚಾರ್ಯ ಮಿಥುನ್ ಶ್ಯಾಮ್ ಶಿಷ್ಯರಿಂದ ಭರತನಾಟ್ಯ ಪ್ರದರ್ಶನ



ನಾಟ್ಯಾಚಾರ್ಯ ಮಿಥುನ್ ಶ್ಯಾಮ್ ಶಿಷ್ಯರ ಭರತನಾಟ್ಯ ಪ್ರದರ್ಶನದ ಒಂದು ದೃಶ್ಯ

ಮೈಸೂರು,ಸೆ.19(ಪಿಎಂ)– ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಮತ್ತು ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಸಂಯುಕ್ತಾಶ್ರಯದಲ್ಲಿ 136ನೇ ಸಾಂಸ್ಕೃತಿಕ ಕಾರ್ಯಕ್ರಮದಡಿ ಸೆ.21 ರಂದು ನಾಟ್ಯಾಚಾರ್ಯ ಮಿಥುನ್ ಶ್ಯಾಮ್ ಶಿಷ್ಯರಿಂದ ಭರತನಾಟ್ಯ ಪ್ರದರ್ಶನ ಏರ್ಪಡಿಸಲಾಗಿದೆ. ಮೈಸೂರಿನ ವಿಜಯ ನಗರದ ಒಂದನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದ (ಬಿವಿಬಿ) ಸಭಾಂಗಣದಲ್ಲಿ ಅಂದು ಸಂಜೆ 6ಕ್ಕೆ ಭರತನಾಟ್ಯ ಪ್ರದರ್ಶನ ಆಯೋಜಿಸಿದ್ದು, ಕು.ಅನನ್ಯಾ ಸಂತೋಷ್, ಕು.ಗಾಯತ್ರಿ ಗುರುಪ್ರಸಾದ್, ಕು.ಕಾವ್ಯ ಕಾಶಿನಾಥನ್, ಕು.ಸಾಕ್ಷಿ ಅಶೋಕ್, ಚಿ.ಹರ್ಷವರ್ಧನ್ ಕೆ, ಚಿ.ಶಶಾಂಕ್ ಕಿರಣ್ ನಾಯರ್ ಪ್ರದರ್ಶನ ನೀಡಲಿದ್ದಾರೆ.

ವೈಷ್ಣವಿ ತಂಡದ ಪರಿಚಯ: ಬೆಂಗಳೂರಿನ ಬಸವನಗುಡಿಯ ವೈಷ್ಣವಿ ನಾಟ್ಯಶಾಲಾದ ತಂಡದ ಕಲಾವಿದರು ನಾಟ್ಯಾಚಾರ್ಯ ಮಿಥುನ್‌ಶ್ಯಾಮ್ ಅವರ ನೇತೃತ್ವದಲ್ಲಿ ಕಲೆ ಕರಗತ ಮಾಡಿಕೊಂಡಿದ್ದಾರೆ. ವೈಷ್ಣವಿ ನಾಟ್ಯಶಾಲಾದ ಸಂಸ್ಥಾಪಕರು ಹಾಗೂ ನಿರ್ದೇಶಕ ನಾಟ್ಯಾಚಾರ್ಯ ಮಿಥುನ್‌ಶ್ಯಾಮ್ ಅವರು ಭರತನಾಟ್ಯದ ಕಂಪನ್ನು ಸೂಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಇವರ ತಂಡದ ಪ್ರತಿಯೊಬ್ಬ ಕಲಾವಿದರು ದಶಕದಿಂದ ತರಬೇತಿ ಪಡೆದ ಅನುಭವ ಹೊಂದಿದ್ದು, ದೇಶಾದ್ಯಂತ ವಿವಿಧ ಪ್ರತಿಷ್ಠಿತ ಉತ್ಸವಗಳಲ್ಲಿ ತಮ್ಮ ಕಲಾ ಪ್ರದರ್ಶನ ಅನಾವರಣಗೊಳಿಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಆ ಮೂಲಕ ವೈಷ್ಣವಿ ನಾಟ್ಯಶಾಲಾ ಹೆಸರನ್ನು ಉತ್ತುಂಗಕ್ಕೇರಿಸಿದ್ದಾರೆ.

ಬೆಂಗಳೂರಿನ ಕಿಂಕಿಣಿ ನೃತ್ಯೋತ್ಸವ, ಹೊಸೂರಿನ ಹೊಸೂರು ನಾಟ್ಯಾಂಜಲಿ, ಮೈಸೂರು ದಸರಾದ ಅರಮನೆ ಸಾಂಸ್ಕೃತಿಕ ಕಾರ್ಯಕ್ರಮ, ಬೆಂಗಳೂರಿನ ಸಾಯಿ ನೃತ್ಯೋತ್ಸವ, ಶಂಕರಮಣ 2022 ಉತ್ಸವ ಹಾಗೂ ಕೊಯಮತ್ತೂರು ಉತ್ಸವಗಳಲ್ಲಿ ಈ ತಂಡ ಪ್ರದರ್ಶನ ನೀಡಿದ ಹಿರಿಮೆ ಹೊಂದಿದೆ. ಜೊತೆಗೆ ಚಿದಂಬರಂನಲ್ಲಿರುವ ತಿಲ್ಲೈ ನಟರಾಜ ದೇವಾಲಯ, ತಿರುಚ್ಚಿಯ ಜಂಬುಕೇಶ್ವರ ದೇವಾಲಯ, ಮಧುರೈನ ಮೀನಾಕ್ಷಿ ದೇವಾಲಯ, ತಿರುಪಾರಕುಂದ್ರಂನ ಮುರುಗನ್ ದೇವಾಲಯ, ಗುರುವಾಯೂರು ಶ್ರೀಕೃಷ್ಣ ದೇವಾಲಯ ಸೇರಿದಂತೆ ಹಲವಾರು ದೇವಾಲಯಗಳಲ್ಲಿ ಕಾರ್ಯಕ್ರಮ ನೀಡಿದ ಖ್ಯಾತಿಯನ್ನು ಈ ತಂಡ ಹೊಂದಿದೆ. ಸದರಿ ತಂಡದ ಕಲಾವಿದರು ಕರ್ನಾಟಕ ಪ್ರಾಥಮಿಕ ಪರೀಕ್ಷಾ ಮಂಡಳಿಯು ನಡೆಸಿದ ಹಿರಿಯ ಶ್ರೇಣಿ ಮತ್ತು ವಿದ್ವತ್ ಗ್ರೇಡ್ ಪರೀಕ್ಷೆಗಳನ್ನು ಡಿಸ್ಟಿಂಕ್ಷನ್‌ನೊಂದಿಗೆ ಪೂರ್ಣಗೊಳಿಸಿದ್ದಾರೆ. ಹಲವು ಹಿರಿಯ ಗುರುಗಳ ನಿರ್ಮಾಣದಲ್ಲಿ ಮೂಡಿಬಂದ ಕಾರ್ಯಕ್ರಮಗಳಲ್ಲಿ ಪ್ರದರ್ಶನ ನೀಡಿದ ಹಿರಿಮೆ ಹೊಂದಿದ್ದಾರೆ. ಪದ್ಮಶ್ರೀ ಗುರು ಆನಂದ ಶಂಕರ್ ಜಯಂತ್, ಪದ್ಮಶ್ರೀ ಪ್ರತಿಭಾ ಪ್ರಹ್ಲಾದ್, ಕೃತಿಕಾ ಸುಬ್ರಮಣಿಯನ್, ಗುರು ವೀಣಾ ಮೂರ್ತಿ ವಿಜಯ್ ಮತ್ತು ಗಾಯತ್ರಿ ಕೃಷ್ಣವೇಣಿ ಲಕ್ಷ್ಮಣನ್ ಅವರಿಂದ ಆಯೋಜನೆಗೊಂಡ ಕಾರ್ಯಕ್ರಮಗಳಲ್ಲಿ ಈ ಕಲಾವಿದರು ಪ್ರದರ್ಶನ ನೀಡಿ ಗಮನ ಸೆಳೆಸಿದ್ದಾರೆ.

ಸೋಸಲೆ ಶ್ರೀ ಎಂಟನೇ ಚಾತುರ್ಮಾಸ್ಯಕ್ಕೆ ಮಂಗಳ

ಜ್ಞಾನ ಇದ್ದ ಕಡೆಗೆ ಗೌರವ, ಸನ್ಮಾನ ಹುಡುಕಿಕೊಂಡು ಬರುತ್ತವೆ

ಮೈಸೂರು,ಸೆ.19(ಪಿಎಂ)–ಜ್ಞಾನ ಇದ್ದ ಕಡೆಗೆ ಗೌರವ ಮತ್ತು ಸನ್ಮಾನ ಹುಡುಕಿಕೊಂಡು ಬರುತ್ತವೆ ಎಂದು ಸೋಸಲೆ ಶ್ರೀ ವ್ಯಾಸರಾಜರ ಮಹಾಸಂಸ್ಥಾನ ಮಠದ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಹೇಳಿದರು.

ಸೋಸಲೆ ಗ್ರಾಮದ ಶ್ರೀ ಮಠದಲ್ಲಿ ಬುಧವಾರ ಆಯೋಜಿಸಿದ್ದ ಶ್ರೀಗಳ 8ನೇ ಚಾತುರ್ಮಾಸ್ಯ ವ್ರತದ ಸಮಾರೋಪದಲ್ಲಿ ದರ್ಬಾರ್ ನಡೆಸಿದ ನಂತರ ಅವರು ಆಶೀರ್ವಚನ ನೀಡಿದರು.



ಎಂಟನೇ ವರ್ಷದ ಚಾತುರ್ಮಾಸ್ಯ ವ್ರತ ಸಮಾರೋಪ ಸಮಾರಂಭದಲ್ಲಿ ಸೋಸಲೆ ಶ್ರೀಗಳಿಗೆ ವಿಶೇಷ ತುಲಾಭಾರ ಸೇವೆ ನಡೆಯಿತು.

ಶ್ರೀ ವಿದ್ಯಾಶ್ರೀಶತೀರ್ಥ ಸ್ವಾಮೀಜಿ

ಪ್ರಪಂಚದಲ್ಲಿ ಜ್ಞಾನಕ್ಕಿಂತ ಮಿಗಿಲಾದ ಸಂಪತ್ತು ಬೇರೆ ಇಲ್ಲ. ವಿಜಯನಗರದ ವೀರ ಸಿಂಹಾಸನವನ್ನು ಆಳಿದಂತಹ ಶ್ರೀ ವ್ಯಾಸರಾಜ ಯತಿಗಳು ರಚನೆ ಮಾಡಿದ ವ್ಯಾಸ ತ್ರಯಗಳು ಮತ್ತು ತರ್ಕ ತಾಂಡವ ಮಹಾ ಗ್ರಂಥಗಳನ್ನು ಆಧರಿಸಿಯೇ ಎಲ್ಲ ಮಹತ್ವ ಗ್ರಂಥಗಳ ವ್ಯಾಖ್ಯಾನ ಮತ್ತು ಸಂಶೋಧನೆಗಳು ಮಧ್ವ ಶಾಸ್ತ್ರದಲ್ಲಿ ಸಾಗಿವೆ. ಬದುಕಿನಲ್ಲಿ ವಿದ್ವತ್ತನ್ನು ಗಳಿಸಲು ಆದ್ಯ ಗಮನವನ್ನು ನೀಡಿದಾಗ ಮಾತ್ರ ಸಾರ್ಥಕತೆ ಕಂಡುಕೊಳ್ಳಲು ಸಾಧ್ಯ ಎಂದರು.

ಕೃಷ್ಣಾವತಾರದ ಬಗ್ಗೆ ವಿಶೇಷ ವ್ಯಾಖ್ಯಾನ ನೀಡಿದ ಅವರು, ದಶಾವತಾರಗಳಲ್ಲಿ ಶ್ರೀ ಕೃಷ್ಣನ ಅವತಾರವೊಂದೇ ಸಮರ್ಥವಾಗಿ ಜ್ಞಾನಪ್ರಸಾರಕ್ಕೂ ಮತ್ತು ರಾಜ್ಯ ನಿರ್ವಹಣಾ ವಿಷಯಕ್ಕೂ ಆದ್ಯತೆ ನೀಡಿದೆ. ದುಷ್ಟ ಸಂಹಾರವನ್ನು ಮಾಡಿದ ಕೃಷ್ಣ ಜ್ಞಾನಿಗಳ ಮತ್ತು ಸಜ್ಜನರ ರಕ್ಷಣೆಗೂ ಬದ್ಧತೆಯನ್ನು ತೋರಿದ. ಅಂತಹ ಕೃಷ್ಣನೇ ನಮ್ಮ ಸಂಸ್ಥಾನದ ಉಪಾಸ್ಯ ಮೂರ್ತಿ ಆಗಿರುವುದು ಬಹಳ ವಿಶೇಷ ಎಂದು ಉಲ್ಲೇಖಿಸಿದರು.

ಗ್ರಾಮಗಳಲ್ಲೇ ಉನ್ನತ ಅಧ್ಯಯನವಾಗಲಿ: ಹಿರಿಯ ವಿದ್ವಾಂಸ ಡಾ.ಎ.ವಿ. ನಾಗಸಂಪಿಗೆ ಅವರು ಪ್ರಧಾನ ಭಾಷಣ ಮಾಡಿ, ಸೋಸಲೆ ಶ್ರೀಗಳು ಚಾತುರ್ಮಾಸ್ಯ ವ್ರತಕ್ಕೆ ಕುಗ್ರಾಮವನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣ ಎಂದರೆ ಅಧ್ಯಯನ ಮತ್ತು ಧಾರ್ಮಿಕ ಸೇವಾ ಕಾರ್ಯಗಳ ಮೂಲಕ ಚಿಕ್ಕ ಚಿಕ್ಕ ಊರಿನಲ್ಲೇ ಜಾಗೃತಿ ಆಗಬೇಕೆಂಬುದಾಗಿದೆ. ಪ್ರಶಾಂತವಾಗಿರುವ ತಾಣದಲ್ಲಿ ಅಧ್ಯಯನ ಗುಣಮಟ್ಟ ಶ್ರೇಷ್ಠವಾಗಿರುತ್ತದೆ ಎಂದರು.

ಪೀಠಾಧಿಪತಿಗಳು ಗ್ರಾಮೀಣ ಪ್ರದೇಶದಲ್ಲೇ ಸಮಸ್ತ ಜನರಿಗೆ ಧರ್ಮ ಬೋಧನೆಯನ್ನು ಮತ್ತು ಸಮಾಜ ಸೇವಾ ಚಟುವಟಿಕೆಗಳನ್ನು ನೀಡುವ ಮೂಲಕ ತಳಮಟ್ಟದಿಂದಲೇ ಸನಾತನ ಧರ್ಮದ ಜಾಗೃತಿ ಆಗಬೇಕೆಂಬ ಸಂದೇಶವನ್ನು ಸಾರಿದ್ದಾರೆ ಎಂದು ಶ್ಲಾಘಿಸಿದರು.

ಚೆನ್ನೈ ಶ್ರೀ ವ್ಯಾಸರಾಜರ ಮಠದ ವ್ಯವಸ್ಥಾಪಕ ರಾಮಕೃಷ್ಣ ಆಚಾರ್ಯ ಮಾತನಾಡಿ, ಚಾತುರ್ಮಾಸ ಪರ್ಯಂತ ಮಠದಲ್ಲಿ ನೂರಾರು ಜ್ಞಾನ ಕಾರ್ಯ, ಸಮಾಜಮುಖಿ ಚಟುವಟಿಕೆಗಳು, ವಿಶೇಷ ಉಪನ್ಯಾಸಗಳು ಧರ್ಮ ಜಾಗೃತಿ, ಯುವಕರಿಗೆ ತರಬೇತಿ ಶಿಬಿರಗಳು ಮತ್ತು ಮಾತೆಯರಿಗೆ ಪಾಠ ಪ್ರವಚನಗಳು ಸಾಂಗವಾಗಿ ನಡೆದಿದೆ. ಇದಕ್ಕೆ ಗುರುಗಳ ಮಹಾ ಸಂಕಲ್ಪವೇ ಕಾರಣ ಎಂದು ಹೇಳಿದರು.

ತುಲಾಭಾರ: ಎಂಟನೇ ಚಾತುರ್ಮಾಸವನ್ನು ಪೂರ್ಣಗೊಳಿಸಿ, ಧರ್ಮ ಜಾಗೃತಿ ಮೂಡಿಸಿದ ಶ್ರೀಗಳಿಗೆ ಭಕ್ತರು ದವಸ, ಧಾನ್ಯ ಮತ್ತು ನಾಣ್ಯಗಳಿಂದ ತುಲಾಭಾರ ಮಾಡಿ, ಭಕ್ತಿಭಾವ ಸಮರ್ಪಣೆ ಮಾಡಿದರು. ವಿಶೇಷ ಉಡುಪಿನಲ್ಲಿ ದರ್ಬಾರ್ ನಡೆಸಿದ ಶ್ರೀಗಳು ಭಕ್ತರಿಗೆ ಫಲ, ಮಂತ್ರಾಕ್ಷತೆ ನೀಡಿದರು. ಜೊತೆಗೆ ಶ್ರೀಮಠಕ್ಕೆ ವಿಶೇಷ ಸೇವೆ ಸಲ್ಲಿಸಿದ ಗಣ್ಯರನ್ನು ಸನ್ಮಾನಿಸಿದರು. ಮಠದ ವ್ಯವಸ್ಥಾಪಕ ಶ್ರೀಧರ, ತುಲಾಭಾರ ರಘೋತ್ತಮ, ನಾಗೇಂದ್ರ, ಗುರುರಾಜ ಆಚಾರ್ಯ ಇತರರು ಹಾಜರಿದ್ದರು.

ಸೆ.22, ನಟನದಲ್ಲಿ 'ಮತ್ತೆ ಮುಖ್ಯಮಂತ್ರಿ'



ಮೈಸೂರು, ಸೆ.19–ಮೈಸೂರಿನ ರಾಮಕೃಷ್ಣನಗರದ ನಟನ ರಂಗಶಾಲೆಯಲ್ಲಿ ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಸೆ.22ರಂದು ಸಂಜೆ 6.30ಕ್ಕೆ ಬೆಂಗಳೂರಿನ ಕಲಾ ಗಂಗೋತ್ರಿ ಕಲಾವಿದರಿಂದ ರಾಜಕೀಯ ನಾಟಕ 'ಮತ್ತೆ ಮುಖ್ಯಮಂತ್ರಿ' ಪ್ರದರ್ಶನಗೊಳ್ಳಲಿದೆ. ಹಿರಿಯ ಕಲಾವಿದರು, ಚಿಂತಕರು, ನಾಡು ನುಡಿಯ ಬಗ್ಗೆ ಕಾಳಜಿ ಇಟ್ಟುಕೊಂಡು ಮಾತನಾಡುವ ಮುಖ್ಯಮಂತ್ರಿ ಚಂದ್ರು ಪ್ರಧಾನ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ನಾಟಕದ ರಚನೆ ಡಾ.ಕೆ.ವೈ.ನಾರಾಯಣ ಸ್ವಾಮಿ ಹಾಗೂ ನಿರ್ದೇಶನ ಡಾ.ಬಿ.ವಿ.ರಾಜಾರಾಂ ಅವರದ್ದಾಗಿದೆ. ಹೆಚ್ಚಿನ ಮಾಹಿತಿಗೆ 7259537777, 9480468327, 9845595505 ಸಂಪರ್ಕಿಸಬಹುದು.

ನೇರ ಸಂದರ್ಶನಕ್ಕೆ ಆಹ್ವಾನ

ಮೈಸೂರು,ಸೆ.19–ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಷಯಗಳ (ಖಾಯಂ ಅಧ್ಯಾಪಕರ ಬೋಧನಾ ಕಾರ್ಯಭಾರ ಹೊರತುಪಡಿಸಿ) ಹೆಚ್ಚುವರಿ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಲು ನೇರ ಸಂದರ್ಶನ ಏರ್ಪಡಿಸಲಾಗಿದೆ. ಸಂದರ್ಶನವು ಸೆ.24, 25 ಮತ್ತು ಅ.5ರಂದು ನಡೆಯಲಿದೆ. ಈ ಬಗ್ಗೆ ಮಾಹಿತಿಗೆ www.uni-mysore.ac.in ಸಂಪರ್ಕಿಸಬಹುದು ಎಂದು ಮೈಸೂರು ವಿವಿ ಉಪಕುಲಸಚಿವರು(ಸಿಬ್ಬಂದಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕಲಿ ನೋಟು ಚಲಾವಣೆ ಯತ್ನ; ಆರೋಪಿಗೆ 11 ವರ್ಷದ ಹಿಂದೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಶಿಕ್ಷೆ ಎತ್ತಿ ಹಿಡಿದ ಹೈಕೋರ್ಟ್

ಮೈಸೂರು,ಸೆ.19(ಆರ್‌ಕೆ)–ನಕಲಿ ನೋಟು ಚಲಾವಣೆಗೆ ಯತ್ನಿಸಿದ್ದ ಆರೋಪಿಗೆ 11 ವರ್ಷಗಳ ಹಿಂದೆ ಮೈಸೂರಿನ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯನ್ನು ರಾಜ್ಯ ಹೈಕೋರ್ಟ್ ಎತ್ತಿ ಹಿಡಿದಿದೆ.

ಐದು ವರ್ಷಗಳ ಕಾರಾಗೃಹ ಶಿಕ್ಷೆಗೊಳಗಾಗಿದ್ದ ಟಿ.ಎನ್.ಕುಮಾರ್ ಕೋರ್ಟ್ ಆದೇಶ ರದ್ದುಗೊಳಿಸುವಂತೆ ಕೋರಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ನೇತೃತ್ವದ ಪೀಠವು, ಮೇಲ್ಮನವಿ ವಜಾಗೊಳಿಸಿ, ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು 2013ರ ಜನವರಿ 3ರಂದು ಆರೋಪಿಗೆ ವಿಧಿಸಿದ್ದ ಶಿಕ್ಷೆಯನ್ನು ಬುಧವಾರ ಎತ್ತಿ ಹಿಡಿದಿದೆ.



ಅಪರಾಧಿಯು ತಕ್ಷಣ ವಿಚಾರಣಾ ನ್ಯಾಯಾಲಯಕ್ಕೆ ಶರಣಾಗಬೇಕು. ನ್ಯಾಯಾಲಯವು ಆತನನ್ನು ವಶಕ್ಕೆ ಪಡೆದು ಕಾನೂನಿನ ಪ್ರಕಾರ ಸೆರೆಮನೆಗೆ ಕಳುಹಿಸಬೇಕು ಎಂದು ಹೈಕೋರ್ಟ್ ಆದೇಶಿಸಿದೆ. ಆರೋಪಿ ಬಳಿ ಸಿಕ್ಕಿದ್ದ ಕರೆನ್ಸಿ ನೋಟುಗಳು ನಕಲಿ ಎಂದು ಸಾಬೀತಾಗಿದೆಯಾದರೂ, ಆ ನೋಟುಗಳು ಹೇಗೆ ಬಂದವು ಎಂಬುದಕ್ಕೆ ಆತ ಯಾವುದೇ ವಿವರಣೆ ನೀಡಿಲ್ಲ ಎಂದು ಪೀಠ ಹೇಳಿದೆ.


ದಾಳಿ ಸಂದರ್ಭ ಪೊಲೀಸರನ್ನು ಕಂಡು ಕುಮಾರ ತಪ್ಪಿಸಿಕೊಳ್ಳಲೆತ್ನಿಸಿರುವುದು, ಆತನ ಬಳಿ ಇರುವುದು ನಕಲಿ ನೋಟುಗಳೆಂಬ ಅರಿವು ಆತನಿಗಿತ್ತು ಎಂಬುದನ್ನು ಸಾಬೀತುಪಡಿಸುತ್ತದೆ ಎಂದಿರುವ ನ್ಯಾಯಮೂರ್ತಿಗಳು, ವಶಪಡಿಸಿಕೊಂಡಿರುವ ಎಲ್ಲಾ ನೋಟುಗಳೂ ಒಂದೇ ಸರಣಿ ಸಂಖ್ಯೆ ಹೊಂದಿವೆ. ಒಂದು ಅಸಲಿ ನೋಟಿನಿಂದ ಬಣ್ಣದ ಹಲವು ಫೋಟೋ ಕಾಪಿ ತೆಗೆದಿರುವುದು ಬರಿಗಣ್ಣಿಗೇ ಕಾಣಿಸುತ್ತದೆ. ಇದರಿಂದಾಗಿ ಆತನಿಗಿದ್ದ ಅಪರಾಧಿಕ ಉದ್ದೇಶ ಸಾಬೀತಾಗಿದ್ದು, ವಿಚಾರಣಾ ನ್ಯಾಯಾಲಯ ಕೈಗೊಂಡಿರುವ ತೀರ್ಪು ಸೂಕ್ತ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಏನಿದು ಪ್ರಕರಣ: 2010ರ ಮಾರ್ಚ್ 3ರಂದು ಗಸ್ತಿನಲ್ಲಿದ್ದ ಲಕ್ಷ್ಮೀಪುರಂ ಪೊಲೀಸರ ಕಂಡು ವ್ಯಾಪ್ತಿಯ ಕಾಲೇಜೊಂದರ ಬಳಿ ಓಡಿ ತಪ್ಪಿಸಿಕೊಳ್ಳಲೆತ್ನಿಸಿದ್ದ ಕುಮಾರನನ್ನು ಬೆನ್ನತ್ತಿ ಹಿಡಿಯಲಾಗಿತ್ತು. ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ಆತನ ಬಳಿ ಒಂದೇ ಸರಣಿ ಸಂಖ್ಯೆಯ 500 ರೂ. ಮುಖಬೆಲೆಯ 30 ನಕಲಿ ನೋಟುಗಳು ಪತ್ತೆಯಾಗಿದ್ದವು.

ಅವು ನಕಲಿ ಎಂದು ಗೊತ್ತಿದ್ದರೂ, ಅವುಗಳನ್ನು ಅಸಲಿ ನೋಟುಗಳ ಸೋಗಿನಲ್ಲಿ ಚಲಾವಣೆ ಮಾಡಲು ಪ್ರಯತ್ನಿಸುತ್ತಿದ್ದ. ಆತನ ವಿರುದ್ಧ ಐಪಿಸಿ ಸೆಕ್ಷನ್ 489 ಸಿ (ಖೋಟಾ ಅಥವಾ ನಕಲಿ ನೋಟುಗಳನ್ನು ಹೊಂದುವುದು) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ಲಕ್ಷ್ಮೀಪುರಂ ಠಾಣೆ ಪೊಲೀಸರು, ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿ ವಾದ–ಪ್ರತಿವಾದ ಆಲಿಸಿದ ಮೈಸೂರಿನ ನ್ಯಾಯಾಲಯವು, ಜೊತೆಗೆ ಸಾಕ್ಷ್ಯಾಧಾರಗಳ ಆಧರಿಸಿ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗೆ ಐದು ವರ್ಷ ಕಾರಾಗೃಹ ಶಿಕ್ಷೆ ಹಾಗೂ ಮೂರು ಸಾವಿರ ರೂ. ದಂಡ ವಿಧಿಸಿ, ತೀರ್ಪು ನೀಡಿತ್ತು. ಈ ಆದೇಶ ಪ್ರಶ್ನಿಸಿ ಕುಮಾರ ಹೈಕೋರ್ಟ್ ಮೊರೆ ಹೋಗಿದ್ದ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಸೆ.19– ವಿದ್ಯುತ್ ಸ್ವೀಕರಣ ಕೇಂದ್ರ ಹಂಪಾಪುರದಲ್ಲಿ ಕಾಮಗಾರಿ ನಿಮಿತ್ತ ಸೆ.20ರಂದು ಬೆಳಗ್ಗೆ 10ರಿಂದ ಸಂಜೆ 6 ರವರೆಗೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಕೆ.ಆರ್‌ನಗರ ಉಪ–ವಿಭಾಗ ವ್ಯಾಪ್ತಿಯ ಚಂದಗಾಲು, ಹಂಪಾಪುರ, ಅಡಗೂರು, ಅರ್ಜುನಹಳ್ಳಿ, ಹೆಬ್ಬಾಳು, ಸಿದ್ದಾಪುರ, ಬ್ಯಾಡರಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಿಂಧುಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಹೆಚ್.ಆರ್.ಉಮಾ ಅವರ ಮಾರ್ಗದರ್ಶನದಲ್ಲಿ ಎನ್.ಆರ್.ಸಿಂಧು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಎಸ್.ಆರ್.ರವಿಕುಮಾರ್ ಅವರಿಗೆ ಹುಟ್ಟುಹಬ್ಬದ ಶುಭಾಶಯ...



ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್.ರವಿಕುಮಾರ್ ಅವರಿಗೆ ನಗರಪಾಲಿಕೆ ಮಾಜಿ ಸದಸ್ಯ ಸಿ.ಮಹದೇಶ್ ಶುಭ ಕೋರಿದರು. ಈ ವೇಳೆ ಯುವ ಮುಖಂಡ ಮದನ್ ಮಾದೇಶ್, ಕೃಷ್ಣ, ಕೆ.ಪಡುವಾರಹಳ್ಳಿ ಪಾಪಣ್ಣ, ರಮೇಶ್, ಪ್ರದೀಪ್, ಕೃಷ್ಣೇಗೌಡ, ನಾಗು, ವೆಂಕಟೇಶ್ ಇನ್ನಿತರರಿದ್ದರು.

ಪಶ್ಚಿಮ ಘಟ್ಟದ 16,114 ಚ.ಕಿ.ಮೀ. ಪರಿಸರ ಸೂಕ್ಷ್ಮ ಪ್ರದೇಶ ಮಿತಿ ಸೂಕ್ತ

11 ಜಿಲ್ಲೆಗಳ ಜನಪ್ರತಿನಿಧಿಗಳ ಸಭೆ ನಂತರ ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿಕೆ

ಬೆಂಗಳೂರು, ಸೆ.19– ರಾಜ್ಯದ ವಿವಿಧ ಅರಣ್ಯ ಮತ್ತು ವನ್ಯಜೀವಿ ತಾಣಗಳ ಸುತ್ತ 16,114 ಚ.ಕಿ.ಮೀ ಪರಿಸರ ಸೂಕ್ಷ್ಮ ಪ್ರದೇಶವನ್ನು ಈಗಾಗಲೇ ಸಂರಕ್ಷಿಸಲಾಗಿದ್ದು, ಈ ಮಿತಿಗೆ ಒಳಪಟ್ಟು ಕಸ್ತೂರಿ ರಂಗನ್ ವರದಿಯನ್ನು ಸಮ್ಮತಿಸಬಹುದು ಎಂಬ ಸಲಹೆಯನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ನೀಡಿದ್ದಾರೆ.



ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶ ಕುರಿತಂತೆ ಕೇಂದ್ರ ಸರ್ಕಾರ ಆ.2 ರಂದು 6ನೇ ಅಧಿಸೂಚನೆ ಹೊರಡಿಸಿರುವ ಹಿನ್ನೆಲೆಯಲ್ಲಿ ಈ ಮಾಸಾಂತ್ಯದೊಳಗೆ ರಾಜ್ಯ ಸರ್ಕಾರದ ನಿಲುವು ಸಲ್ಲಿಸಬೇಕಿರುವ ಹಿನ್ನೆಲೆಯಲ್ಲಿ ನಡೆದ 11 ಜಿಲ್ಲೆಗಳ ಜನಪ್ರತಿನಿಧಿಗಳ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ವಿವರ ನೀಡಿದರು.

ಪಶ್ಚಿಮಘಟ್ಟ ವ್ಯಾಪ್ತಿಯ 11 ಜಿಲ್ಲೆಗಳ ಸಚಿವರು, ಶಾಸಕರು ಮತ್ತು ಸಂಸತ್ ಸದಸ್ಯರ ಅಭಿಪ್ರಾಯ ಪಡೆಯಲಾಗಿದೆ. ಆ ಎಲ್ಲಾ ಅಭಿಪ್ರಾಯವನ್ನು ಶುಕ್ರವಾರ ನಡೆಯಲಿರುವ ಸಚಿವ ಸಂಪುಟದ ಉಪ ಸಮಿತಿ ಸಭೆಯಲ್ಲಿ ಚರ್ಚಿಸಿ, ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸಿ, ಸಂಪುಟದ ಅನುಮೋದನೆ ಪಡೆದು ಕೇಂದ್ರಕ್ಕೆ ಸಲ್ಲಿಸಲಾಗುವುದು ಎಂದರು.

ಹಲವು ಜನಪ್ರತಿನಿಧಿಗಳು ಈಗಾಗಲೇ ರಾಜ್ಯದಲ್ಲಿ 16,114 ಚ.ಕಿ.ಮೀ ಪರಿಸರ ಸೂಕ್ಷ್ಮ ಪ್ರದೇಶ ಇದ್ದು, ಇನ್ನು ಹೆಚ್ಚು ಮಾಡಿದರೆ ಅರಣ್ಯದಂಚಿನ ಜನರ ಬದುಕೇ ದುಸ್ತರವಾಗುತ್ತದೆ. ಹೀಗಾಗಿ ಬಫರ್ ವಲಯವನ್ನು ಶೂನ್ಯಕ್ಕೆ ತರಬೇಕು ಎಂದು ಸಲಹೆ ನೀಡಿದ್ದಾರೆ. ಹಾಲಿ ಇರುವ 16,114 ಚ.ಕಿ.ಮೀ. ಮಿತಿಗೆ ನಾವು ಸಮ್ಮತಿಸಿದರೆ ಶೂನ್ಯ ಬಫರ್ ಆಗುತ್ತದೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ ಎಂದರು.

ಕಸ್ತೂರಿ ರಂಗನ್ ಸಮಿತಿ ವರದಿಯಲ್ಲಿ ರಾಜ್ಯದಲ್ಲಿ 20,668 ಚದರ ಕಿ.ಮೀ ಪರಿಸರ ಸೂಕ್ಷ್ಮ ವಲಯ ಗುರುತಿಸಲಾಗಿದೆ. ಈ ಬಗ್ಗೆ ಭೌತಿಕ ಸರ್ವೆ ನಡೆಸಿದರೆ ಈ ಪ್ರದೇಶ ಇನ್ನೂ ಹೆಚ್ಚಳವಾಗಲಿದೆ ಎಂಬ ಅಭಿಪ್ರಾಯವನ್ನೂ ಜನಪ್ರತಿನಿಧಿಗಳು ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪರಿಶೀಲಿಸಲಾಗುವುದು ಎಂದರು.


ಹಲವು ತಲೆಮಾರುಗಳಿಂದ ಅರಣ್ಯ ಪ್ರದೇಶದಲ್ಲೇ ಜೀವನ ನಡೆಸುತ್ತಿರುವವರನ್ನು ಒಕ್ಕಲೆಬ್ಬಿಸುವುದು ಸೂಕ್ತವಲ್ಲ. ಅವರಿಗೆ ಬೇರೆ ಕಡೆ ಪುನರ್ವಸತಿ ಕಲ್ಪಿಸಿದರೂ ಅವರು ಅಲ್ಲಿಗೆ ಹೋಗುವುದಿಲ್ಲ ಎಂಬ ಅಭಿ ಪ್ರಾಯವೂ ಸಭೆಯಲ್ಲಿ ವ್ಯಕ್ತವಾಗಿದೆ ಹೀಗಾಗಿ ಸಂಪುಟ ಉಪ ಸಮಿತಿಯ ಸಭೆಯಲ್ಲಿ ಈ ಎಲ್ಲ ವಿಚಾರಗಳ ಬಗ್ಗೆ ಚಿಂತನ ಮಂಥನ ನಡೆಸಲಾಗುವುದು ಎಂದರು.

ವಿಶೇಷ ಪ್ಯಾಕೇಜ್‌ಗೆ ಒತ್ತಾಯ: ಈಗಾಗಲೇ ಇರುವ 16,114 ಚ.ಕಿ.ಪ್ರದೇಶಕ್ಕೆ ಅಂಗೀಕಾರ ನೀಡಿದರೂ ಈ ಪ್ರದೇಶದಲ್ಲಿರುವ 1576 ಗ್ರಾಮಗಳ ಜನರ ಜೀವನೋಪಾಯಕ್ಕೆ ತೊಂದರೆ ಆಗಲಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂಬ ಒತ್ತಾಯ ಮಾಡಬಹುದು ಎಂದು ತಾವು ಸಲಹೆ ನೀಡಿರುವುದಾಗಿ ಅರಣ್ಯ ಸಚಿವರು ತಿಳಿಸಿದರು.

ಇದು ಪಶ್ಚಿಮ ಘಟ್ಟ ಕೇವಲ ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಮತ್ತು ತಮಿಳುನಾಡಿಗೆ ಮಾತ್ರ ಸಂಬಂಧಿಸಿದ್ದಲ್ಲ. ಈ ಘಟ್ಟಪ್ರದೇಶ ಹಲವು ನದಿಗಳ ಉಗಮ ಸ್ಥಾನವಾಗಿದೆ ಮಿಗಿಲಾಗಿ ಮಳೆಯ ಮಾರುತಗಳನ್ನು ತಡೆಯುವ ಕಾರಣ ದೇಶಾದ್ಯಂತ ವ್ಯಾಪಕ ಮಳೆಯಾಗುತ್ತದೆ ಹೀಗಾಗಿ ಈ ಪಶ್ಚಿಮಘಟ್ಟ ಸಂರಕ್ಷಣೆಯ ಹೊಣೆ ಕೇಂದ್ರದ್ದೂ ಆಗಿದೆ. ಆದ ಕಾರಣ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದರು.

ಒತ್ತುವರಿ ತೆರವಿನ ಬಗ್ಗೆ ಸ್ಪಷ್ಟೀಕರಣ: ಒತ್ತುವರಿ ತೆರವಿನ ಬಗ್ಗೆ ತಾವು ನೀಡಿರುವ ಟಿಪ್ಪಣಿಗಳು ಸ್ಪಷ್ಟವಾಗಿವೆ. 2015ರ ನಂತರದ ಒತ್ತುವರಿ ಮಾತ್ರ ತೆರವು ಮಾಡಲು ಸೂಚಿಸಲಾಗಿದೆ. ಜೊತೆಗೆ 2015ರ ಸರ್ಕಾರದ ಆದೇಶ ಮತ್ತು ನಡಾವಳಿಯಂತೆ 3 ಎಕರೆಗಿಂತ ಮೇಲ್ಪಟ್ಟ ದೊಡ್ಡ ಒತ್ತುವರಿ ತೆರವು ಮಾಡಲಾಗುತ್ತಿದ್ದು, ಬಡ ರೈತರ ಒತ್ತುವರಿಯನ್ನು (ಪಟ್ಟಾಭೂಮಿ ಮತ್ತು ಒತ್ತುವರಿ ಸೇರಿ 3 ಎಕರೆ) ತೆರವು ಮಾಡಿಸುವುದಿಲ್ಲ ಎಂದು ಹಲವು ಬಾರಿ ಸ್ಪಷ್ಟಪಡಿಸಿದ್ದೇನೆ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.09.2024 ಶುಕ್ರವಾರ, ಮಳೆ ನಕ್ಷತ್ರ: ಉತ್ತರಾ, 13.09.2024 ರಿಂದ 26.09.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ರೇವತಿ, ರಾಹುಕಾಲ : ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮದಲ್ಲಿ ಕಾಣಿಸಿಕೊಳ್ಳುವ ವಿವಿಧ ರೀತಿಯ ಗಂಟುಗಳು, ಅಪಘಾತದಿಂದ ಉಂಟಾಗುವ ಚಿಕ್ಕ ಗಾಯಗಳು, ಉಸಿರಾಟದ ಸಮಸ್ಯೆಗಳು ಮತ್ತು ಹಲ್ಲು ನೋವು, ಹುಳುಕು ಹಲ್ಲು, ಬಾಯಿಂದ ದುರ್ವಾಸನೆ, ವಸಡಿನಿಂದ ರಕ್ತಸ್ರಾವ ಮುಂತಾದ ದಂತ ಮತ್ತು ಬಾಯಿ ರೋಗಗಳಿಗೆ ಪ್ರತ್ಯೇಕ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಕತ್ತು ಮತ್ತು ಭುಜದ ನೋವಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ಅಂಬಾರಿ ಬಾಯ್ಸ್ :** 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ, ಸ್ಥಳ: ಕಾಮಾಟಗೇರಿ, ನಜರ್‌ಬಾದ್.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಸಾಂಸ್ಕೃತಿಕ ವೇದಿಕೆ :** ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್ ಕ್ರಾಸ್, ಸ್ಕೌಟ್ಸ್ ಅಂಡ್ ಗೈಡ್ಸ್, ಎನ್‌ಸಿಸಿ, ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಉದ್ಘಾಟನೆ : ಜಾನಪದ ಗಾಯಕ ಪಿಚ್ಚಳ್ಳಿ ಶ್ರೀನಿವಾಸ್, ಮುಖ್ಯ ಅತಿಥಿಗಳು : ನಿರೂಪಕ ನಿರಂಜನ್ ದೇಶಪಾಂಡೆ, ಪ್ರಾಸ್ತಾವಿಕ ನುಡಿ : ಮಹಾರಾಣಿ ಕಲಾ ಕಾಲೇಜು ಪ್ರಾಂಶುಪಾಲ ಪ್ರೊ. ಹೆಚ್.ಎಂ. ಬಸವರಾಜು, ಉಪಸ್ಥಿತರು : ಸಾಂಸ್ಕೃತಿಕ ವೇದಿಕೆ ಕಾರ್ಯದರ್ಶಿ ಡಾ. ದೊರೆಸ್ವಾಮಿ, ಸಹ ಕಾರ್ಯದರ್ಶಿ ಡಾ. ಡಿ. ಸುಂದರಿ, ಖಜಾಂಚಿ ಶ್ರೀಮತಿ ಅಶ್ವಿನಿ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ, ಬೆಳಗ್ಗೆ 10.30ಕ್ಕೆ

■ **ಜೆಎಸ್‌ಎಸ್ ಮಹಾವಿದ್ಯಾಪೀಠ ಅಲ್ಯೂಮ್ನಿ ಅಸೋಸಿಯೇಷನ್, ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್ :** ಅಲ್ಯೂಮ್ನಿ ಸಭೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್, ವಿಶೇಷ ಅತಿಥಿಗಳು : ಡಾ. ಉಷಾ ಹೆಗ್ಡೆ, ಅಧ್ಯಕ್ಷತೆ : ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಎಂ.ಜಿ. ರಸ್ತೆ, ಬೆಳಗ್ಗೆ 11ಕ್ಕೆ.


■ **ಭಾರತ ಸರಕಾರದ ಜವಳಿ ಮಂತ್ರಾಲಯ, ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮ :** ಗಾಂಧಿ ಶಿಲ್ಪ ಬಜಾರ್ ಹಾಗೂ ಗರ್ವಿ ಗುರ್ಜರಿ ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ ಸಿ.ಜಿ.ಬೆಟಸೂರಮಠ, ಮುಖ್ಯ ಅತಿಥಿಗಳು: ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ಕೈಮಗ್ಗ ಮತ್ತು ಜವಳಿ ಇಲಾಖೆ ನಿರ್ದೇಶಕರಾದ ಶ್ರೀಮತಿ ಕೆ.ಜ್ಯೋತಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಕೆ.ಎಂ.ಗಾಯಿತ್ರಿ, ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶ್ರೀಮತಿ ಶಿಲ್ಪಿ ಅಗರ್ವಾಲ್, ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಲಲಿತ್ ನಾರಾಯಣ್ ಸಿಂಗ್ ಸಂದು, ಜಂಟಿ ವ್ಯವಸ್ಥಾಪಕ ನಿರ್ದೇಶಕ ಡಾ.ಪಾರುಲ್ ಮನ್ಸಾತ, ಪ್ರಾಂತೀಯ ನಿರ್ದೇಶಕ ಲಕ್ಷ್ಮಣ್‌ರಾವ್ ಅತುಕುರಿ, ಉಪ ವ್ಯವಸ್ಥಾಪಕ ಆರ್.ಆರ್.ಜಾದವ್, ಸಹಾಯಕ ನಿರ್ದೇಶಕ ಕೆ.ಎಸ್. ಸುನಿಲ್‌ಕುಮಾರ್, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ವಲಯ, ಸಂಜೆ 4ಕ್ಕೆ.

■ **ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನ:** ಹಿರಿಯ ಕಲಾವಿದ ದಿವಂಗತ ಪಿ.ಆರ್.ತಿಪ್ಪೇಸ್ವಾಮಿ ಜನ್ಮಶತಮಾನೋತ್ಸವ ಸಮಾರೋಪ ಮತ್ತು ಪಿಆರ್‌ಟಿ ಕಲಾ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ: ಡಾ.ಹೆಚ್.ಸಿ.ಮಹದೇವಪ್ಪ, ಸಮಾರೋಪ ಭಾಷಣ: ಪುರುಷೋತ್ತಮ ಬಿಳಿಮಲೆ, ಬಹುಮಾನ ವಿತರಣೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಹೆಚ್.ಎಂ.ರೇವಣ್ಣ, ಪ.ಸ.ಕುಮಾರ್, ಡಾ.ಮಾನಸ, ರಮೇಶ್, ಸ್ಥಳ: ಶ್ರೀ ಕಲಾನಿಕೇತನ ಕಲಾ ಶಾಲೆ, ವಿಜಯನಗರ 2ನೇ ಹಂತ, ಸಂಜೆ 4ಕ್ಕೆ.

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಸಂಸ್ಥೆ ಪಶ್ಚಿಮ:** ಶ್ರಾವಣ ಯುವ ಸಂಗೀತೋತ್ಸವ, ಉದ್ಘಾಟನೆ: ವಿದ್ವಾನ್ ಜಿ.ಎಸ್.ರಾಮಾನುಜಂ, ಅಧ್ಯಕ್ಷತೆ: ರೋಟರಿ ಸಂಸ್ಥೆ ಪಶ್ಚಿಮ ಅಧ್ಯಕ್ಷ ಎಂ.ಎಲ್.ನಾಗೇಶ್, ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಯೋಗ ಕೀರ್ತನ–ಗಾಯನ, ವಿದ್ವಾನ್ ಎಸ್.ಜನಾರ್ಧನ್–ಪಿಟೀಲು, ವಿದ್ವಾನ್ ಸುನೀಲ್ ಸುಬ್ರಹ್ಮಣ್ಯ–ಮೃದಂಗ, ಸ್ಥಳ: ರೋಟರಿ ಸಂಸ್ಥೆ ಪಶ್ಚಿಮ, ಕಾಮಾಕ್ಷಿ ಆಸ್ಪತ್ರೆ ಎದುರು, ಸಂಜೆ 6ಕ್ಕೆ

■ **ಗಾನಭಾರತೀ :** ಗಾಯನ ಕಾರ್ಯಕ್ರಮ, ವಿದ್ವಾನ್ ಕಲ್ಯಾಣಪುರಂ ಎಸ್. ಅರವಿಂದ್ ಅವರಿಂದ ಗಾಯನ, ವಿದ್ವಾನ್ ಮತ್ತೂರ್ ಶ್ರೀನಿಧಿ–ಪಿಟೀಲು, ವಿದ್ವಾನ್ ಬಿ.ಎಸ್. ಪ್ರಶಾಂತ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ: ಡಾ.ಖಲೀಂ ಉಲ್ಲಾ, ಪ್ರಸ್ತುತಿ: ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಪ್ರೊ.ಶಂಕರನಾರಣಪ್ಪ, ಮುಖ್ಯಸ್ಥರು, ರಾಜ್ಯಶಾಸ್ತ್ರ ಹಾಗೂ ಸಾರ್ವಜನಿಕ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಎಂ.ಬಾಲಮುರಳೀಕೃಷ್ಣ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸೈಕಲ್ ಸವಾರಿ ಮಾತಿನ ಲಹರಿ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್.ಎಸ್, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಲ್.ವೈದ್ಯನಾಥನ್, ಎಲ್.ಸುಬ್ರಹ್ಮಣ್ಯನ್ ಮತ್ತು ಎಲ್.ಶಂಕರ್–ವೈಯೋಲಿನ್ ಟ್ರಿಯೊ, 4.00 ಮಹಿಳಾರಂಗ–ಸಖೀ ಸಂವಾದ. ವಿಷಯ: ಮಕ್ಕಳನ್ನು ನೋಡಿಕೊಳ್ಳೊ ವಿಷಯದಲ್ಲಿ ತಂದೆಯ ಪಾತ್ರ, ಪ್ರಸ್ತುತಿ: ಸಹನ ಮತ್ತು ಕೀರ್ತನ, 4.30 ವೃತ್ತಿ ಮಾರ್ಗದರ್ಶನ: ತೋಟಗಾರಿಕಾ ಶಿಕ್ಷಣದ ಪ್ರಾಮುಖ್ಯತೆ ಕುರಿತು ಯಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಜಿ.ಮಂಜುನಾಥ್, ತೋಟಗಾರಿಕಾ ವಿಜ್ಞಾನ ವಿದ್ಯಾರ್ಥಿಗಳಾದ ವಿಜಯ್ ಬಾಲಾಜಿ ಮತ್ತು ಇಂಚರ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಎನ್.ಕೇಶವಮೂರ್ತಿ, 6.50 ಕೃಷಿರಂಗ: ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ: ಮದ್ದೂರು ತಾಲೂಕು ಕೊಪ್ಪ ಹೋಬಳಿ ಕೋಣಸಾಲೆಯ ಕೃಷಿಕ ದಂಪತಿ ಬಿ.ರಾಧಾಕೃಷ್ಣ ಹಾಗೂ ಬಿ.ಸಂಧ್ಯಾರಾಣಿ. ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ರಸಮಂಜರಿ: ಆಡುವ ಮಾತಾಗಿ ಸಂಸ್ಕೃತ–ಚರ್ಚೆ. ಭಾಗವಹಿಸುತ್ತಾರೆ: ಭರತ್ ನಾಗರಾಜ್‌ರಾವ್, ಕೆ.ಬಿ.ಪರ್ವತವರ್ಧಿನಿ ಮತ್ತು ಸ್ವಾತಿ. ಡಿ. ಎನ್.ನಡೆಸಿಕೊಟ್ಟವರು: ದಿವಾಕರ ಹೆಗಡೆ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಪ್ರಿಯಾರಾಜು–ಹಾಡುಗಾರಿಕೆ, 10.00 ತತ್ವ ಸಂಚಾರ : ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.30–ಸವಿನೆನಪು



ದಸರಾ ವಿಶೇಷ 2024





ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಪ್ಲಾಸ್ಟಿಕ್ ಕವರ್, ನೀರಿನ ಬಾಟಲ್ ಸಂಪೂರ್ಣ ನಿಷಿದ್ಧ

ಕುಡಿಯುವ ನೀರಿಗೆ ಏರ್‌ಪೋರ್ಟ್ ಮಾದರಿ 'ವಾಟರ್ ಫೌಂಟೆನ್ ಪ್ಲಾಂಟ್'



ಬಾಪುಲಿಂಗರಾಜ್ ಅರಸ್

ಮೈಸೂರು, ಸೆ.19– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೀಯ ಕೇಂದ್ರಗಳಲ್ಲಿ ಒಂದಾದ ದಸರಾ ವಸ್ತುಪ್ರದರ್ಶನದಲ್ಲಿ ಪ್ಲಾಸ್ಟಿಕ್ ಕವರ್, ನೀರಿನ ಬಾಟಲ್, ಲೋಟಗಳ ಬಳಕೆಯನ್ನು ಸಂಪೂರ್ಣ ನಿಷೇಧಿಸಲಾಗುತ್ತಿದೆ. ಏರ್‌ಪೋರ್ಟ್ ಮಾದರಿಯಲ್ಲಿ ನೇರವಾಗಿ ನೀರು ಕುಡಿಯುವ ವಾಟರ್ ಫೌಂಟೆನ್ (water fountain) ಪ್ಲಾಂಟ್ ಶಾಶ್ವತ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ.


ಸ್ಥಳೀಯರು ಸೇರಿದಂತೆ ದೇಶ ವಿದೇಶದ ಪ್ರವಾಸಿಗರನ್ನು ಅತ್ಯಾಕರ್ಷಿಸಲು ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಹಲವು ವಿನೂತನ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಅದರಲ್ಲೂ ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿರ್ಬಂಧಿಸುವ ದಿಟ್ಟ ಹೆಜ್ಜೆಯನ್ನು ಕೈಗೊಳ್ಳಲಾಗಿದೆ.

ದಸರಾ ವಸ್ತುಪ್ರದರ್ಶನವನ್ನು ಪ್ಲಾಸ್ಟಿಕ್ ಮುಕ್ತ ವಲಯವಾಗಿ ಘೋಷಣೆ ಮಾಡಲಾಗಿದೆ. ಪ್ಲಾಸ್ಟಿಕ್ ಕವರ್, ನೀರಿನ ಬಾಟಲ್ ಸೇರಿದಂತೆ ಒಂದು ಸಣ್ಣ ಪ್ಲಾಸ್ಟಿಕ್ ಚೂರು ಕೂಡ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಸಿಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ಲಾಸ್ಟಿಕ್ ನೀರಿನ ಬಾಟಲ್ ಹಾಗೂ ಪ್ಲಾಸ್ಟಿಕ್ ನೀರಿನ ಗ್ಲಾಸ್‌ಗೆ ಅವಕಾಶ ನೀಡದಿದ್ದ ಮೇಲೆ ಪರ್ಯಾಯ ವ್ಯವಸ್ಥೆ ರೂಪಿಸಬೇಕಲ್ಲವೆ? ಈ ನಿಟ್ಟಿನಲ್ಲಿ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಸುಮಾರು 15ರಿಂದ 20 ಲಕ್ಷ ರೂಪಾಯಿ ವೆಚ್ಚದಲ್ಲಿ ಏರ್‌ಪೋರ್ಟ್ ಮಾದರಿಯಲ್ಲಿ ನೇರವಾಗಿ ನೀರು ಕುಡಿಯುವ ವಾಟರ್ ಫೌಂಟೆನ್ ಪ್ಲಾಂಟ್ ನೂತನ ವ್ಯವಸ್ಥೆ ಪರಿಚಯಿಸಲಾಗುತ್ತಿದೆ.

ದಸರಾ ವಸ್ತುಪ್ರದರ್ಶನ ಆವರಣದಲ್ಲಿ 10ರಿಂದ 15 ಸ್ಥಳಗಳಲ್ಲಿ ಏರ್‌ಪೋರ್ಟ್ ಮಾದರಿಯ ವಾಟರ್ ಫೌಂಟೆನ್ ಪ್ಲಾಂಟ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಸಿಂಕ್‌ನಲ್ಲಿ ಅಳವಡಿಸಿರುವ ನಲ್ಲಿ ಕೆಳಗೆ ಅಥವಾ ಪಾದದ ಬಳಿ ಇರುವ ಬಟನ್ ಒತ್ತಿದರೆ ನೀರು ಚಿಮ್ಮುತ್ತದೆ. ಈ ವೇಳೆ ಸಲೀಸಾಗಿ ನೀರು ಕುಡಿಯಬಹುದು.

ಬಟನ್ ಒತ್ತಿರುವಷ್ಟು ಸಮಯ ನಲ್ಲಿಯಲ್ಲಿ ನೀರು ಬರುತ್ತದೆ. ನೀರು ಕುಡಿದ ಮೇಲೆ ಕೈ ಅಥವಾ ಕಾಲಿನಲ್ಲಿರುವ ಬಟನ್ ಒತ್ತುವುದನ್ನು ನಿಲ್ಲಿಸಿದರೆ ನೀರು ನಿಲ್ಲುತ್ತದೆ. ಇದರಿಂದ ವಿನಾಕಾರಣ ನೀರು ವ್ಯರ್ಥವಾಗುವುದು ತಪ್ಪುತ್ತದೆ.

ದಸರಾ ವಸ್ತುಪ್ರದರ್ಶನದ ಬಹಳಷ್ಟು ಕಡೆ ಪ್ರಸ್ತುತ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಮಾಡಲಾಗಿದೆ. ಬಹಳಷ್ಟು ಜನರು ನೀರು ಕುಡಿದ ನಂತರ ಹಾಗೂ ಬಾಟಲ್‌ಗೆ ನೀರು ತುಂಬಿಸಿಕೊಂಡ ಮೇಲೆ ನೀರು ಸುರಿಯಲು ಬಿಟ್ಟು ಹಾಗೆ ಹೋಗುತ್ತಾರೆ. ಇದರಿಂದ ಪ್ರತಿ ದಿನ ಸಾವಿರಾರು ಲೀಟರ್ ನೀರು ವ್ಯರ್ಥವಾಗುತ್ತಿತ್ತು. ಆದರೆ ಈಗ ನಿರ್ಮಾಣ ಮಾಡುತ್ತಿರುವ ಏರ್‌ಪೋರ್ಟ್ ಮಾದರಿಯ ವಾಟರ್ ಫೌಂಟೆನ್‌ನಿಂದ ಒಂದು ಹನಿ ನೀರು ವ್ಯರ್ಥವಾಗುವುದಿಲ್ಲ. ಬಟನ್ ಒತ್ತಿ ನೀರು ಕುಡಿಯುವ ನೂತನ ವ್ಯವಸ್ಥೆ ಪರಿಚಯಿಸುತ್ತಿರುವುದರಿಂದ ಜನರಿಗೆ ಕುಡಿಯುವ ನೀರಿನ ಮಹತ್ವ ಕೂಡ ಅರಿವಾಗುತ್ತದೆ. ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಈ ಮೊದಲು ಪ್ಲಾಸ್ಟಿಕ್ ನೀರಿನ ಬಾಟಲ್, ಗ್ಲಾಸ್‌ಗಳನ್ನು ಬಳಸಲಾಗುತ್ತಿತ್ತು. ಪ್ರತಿದಿನ ಬೆಳಿಗ್ಗೆ ನೋಡಿದರೆ ಇಡೀ ಆವರಣದಲ್ಲಿ ಪ್ಲಾಸ್ಟಿಕ್ ಬಾಟಲ್, ಪೇಪರ್ ಗ್ಲಾಸ್ ತ್ಯಾಜ್ಯ ತುಂಬಿರುತ್ತಿತ್ತು. ಇದರ ವಿಲೇವಾರಿ ಕೂಡ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ ದೊಡ್ಡ ತಲೆ ನೋವಾಗಿರುತ್ತಿತ್ತು. ಆದರೆ ಈಗ ಪರಿಚಯಿಸುತ್ತಿರುವ ವಾಟರ್ ಫೌಂಟೆನ್‌ನಿಂದ ತ್ಯಾಜ್ಯ ಮುಕ್ತ ಮಾಡಬಹುದು. ದಸರಾ ವಸ್ತುಪ್ರದರ್ಶನ ಆವರಣದ ಅಂಗಡಿಯವರು ಕೂಡ ಪ್ಲಾಸ್ಟಿಕ್ ಅಥವಾ ಕಾಗದದ ಗ್ಲಾಸ್ ಬಳಸದಂತೆ ಷರತ್ತು ವಿಧಿಸಲಾಗಿದೆ. ಗಾಜಿನ ಲೋಟಗಳನ್ನು ಬಳಸಲು ಸಲಹೆ ನೀಡಲಾಗಿದೆ.



ದಸರಾ ವಸ್ತುಪ್ರದರ್ಶನದಲ್ಲಿ ಉಚಿತ ಬಟ್ಟೆ ಬ್ಯಾಗ್ ವಿತರಣೆ

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ರೋಟರಿ ಸಂಸ್ಥೆ ಕೊಡುಗೆ

ಈ ವರ್ಷದಿಂದ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಪರ್ಯಾಯವಾಗಿ ದಾನಿಗಳ ನೆರವಿನಿಂದ ದಸರಾ ವಸ್ತುಪ್ರದರ್ಶನ ಪ್ರಾಧಿಕಾರವೇ ಉಚಿತ ಬಟ್ಟೆ ಬ್ಯಾಗ್‌ಗಳನ್ನು ವಿತರಿಸುತ್ತಿದೆ. ಪ್ಲಾಸ್ಟಿಕ್‌ನಲ್ಲಿ ಬಿಸೆನಾಲ್ ಎ, ಥಾಲೇಟ್, ಆಂಟಿಮಿನಿಟ್ರಾಕ್ಸೈಡ್, ಪಾಲಿ–ಫ್ಲೋರಿನೇಟೆಡ್, ಸೀಸದಂತಹ ಅನೇಕ ರಾಸಾಯನಿಕ ಹಾಗೂ ಅಪಾಯಕಾರಿ ಅಂಶಗಳಿವೆ. ಯಾವುದೇ ಮಾದರಿಯ ಪ್ಲಾಸ್ಟಿಕ್ ಬಳಕೆಯಿಂದ ಮಾನವ ಹಾಗೂ ವನ್ಯಜೀವಿಗಳ ಆವಾಸಸ್ಥಾನದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಪ್ಲಾಸ್ಟಿಕ್ ಬಳಕೆ ನಿಷೇಧ ಇಡೀ ವಿಶ್ವಕ್ಕೆ ದೊಡ್ಡ ಸವಾಲಾಗಿದೆ. ಅತ್ತ ಊಟಿಯಲ್ಲಿ ಕಟ್ಟುನಿಟ್ಟಾಗಿ ಪ್ಲಾಸ್ಟಿಕ್ ಬಳಕೆಯನ್ನು ನಿರ್ಬಂಧಿಸಲಾಗಿದೆ. ಊಟಿಗೆ ಪ್ರವೇಶ ಪಡೆಯುವ ಕರ್ನಾಟಕ ಹಾಗೂ ಕೇರಳದ ಗಡಿ ಭಾಗದಲ್ಲೇ ಪ್ಲಾಸ್ಟಿಕ್ ವಸ್ತುಗಳ ಬಗ್ಗೆ ಶೋಧನೆ ಮಾಡಲಾಗುತ್ತದೆ. ಪ್ಲಾಸ್ಟಿಕ್ ಕವರ್, ಬ್ಯಾಗ್‌ಗಳಿದ್ದರೆ ಅದನ್ನು ಅಲ್ಲೇ ವಶಕ್ಕೆ ಪಡೆಯಲಾಗುತ್ತದೆ. ಇನ್ನು ಊಟಿಯಲ್ಲಿ ಪ್ಲಾಸ್ಟಿಕ್ ಬಳಸುವವರ ಮೇಲೆ ದಂಡಾಸ್ತ್ರ ಪ್ರಯೋಗಿಸಲಾಗುತ್ತಿದೆ. ಇದೇ ಮಾದರಿಯಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವ ನಿಟ್ಟಿನಲ್ಲಿ




ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರ ಕೂಡ ದಿಟ್ಟ ಕ್ರಮ ಕೈಗೊಂಡಿದೆ. ಮೈಸೂರು ದಸರಾ ವಸ್ತುಪ್ರದರ್ಶನವನ್ನು ಈ ವರ್ಷದಿಂದ ಪ್ಲಾಸ್ಟಿಕ್ ಮುಕ್ತ ವಲಯವನ್ನಾಗಿ ಘೋಷಿಸಲಾಗಿದೆ.

ಅ.3ರಂದು ಆರಂಭವಾಗುವ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆ ದಿನದಂದೇ ದಸರಾ ವಸ್ತು ಪ್ರದರ್ಶನ ಕೂಡ ಆರಂಭವಾಗಲಿದೆ. ದಸರಾ ವಸ್ತುಪ್ರದರ್ಶನ ಪ್ರವೇಶ ದ್ವಾರದಿಂದ ಆವರಣದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧದ ಬಗ್ಗೆ ಫಲಕ, ಮೈಕ್ ಮೂಲಕ ಎಚ್ಚರಿಕೆ ನೀಡುವ ಮೂಲಕ ಪರಿಣಾಮಕಾರಿ ಅರಿವು ಮೂಡಿಸಲಾಗುತ್ತದೆ. ವಸ್ತುಪ್ರದರ್ಶನದ ಪ್ರವೇಶ ದ್ವಾರದಲ್ಲೇ ಪ್ರತಿಯೊಬ್ಬರ ಬ್ಯಾಗ್ ಶೋಧಿಸಿ, ಪ್ಲಾಸ್ಟಿಕ್ ಕವರ್, ನೀರಿನ ಬಾಟಲ್, ಇನ್ನಿತರ ವಸ್ತುಗಳಿದ್ದರೆ ಅವುಗಳನ್ನು ಅಲ್ಲೇ ವಶಕ್ಕೆ ತೆಗೆದುಕೊಳ್ಳಲಾಗುತ್ತದೆ. ಪರ್ಯಾಯವಾಗಿ ದಸರಾ ವಸ್ತುಪ್ರದರ್ಶನ ಪ್ರಾಧಿಕಾರವೇ ಉಚಿತವಾಗಿ ಬ್ಯಾಗ್‌ಗಳನ್ನು ನೀಡುತ್ತಿದೆ. ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದವರು ಒಂದು ಲಕ್ಷ, ರೋಟರಿ ಸಂಸ್ಥೆ 50 ಸಾವಿರ ಬಟ್ಟೆ ಬ್ಯಾಗ್ ನೀಡುತ್ತಿದೆ. ಇವರಂತೆ ಇನ್ನು ಹಲವು ಸಂಘ–ಸಂಸ್ಥೆಗಳು ಬಟ್ಟೆ ಬ್ಯಾಗ್‌ಗಳನ್ನು ನೀಡುತ್ತಿವೆ. ಇದರಿಂದ ದಸರಾ ವಸ್ತುಪ್ರದರ್ಶನದಲ್ಲಿ ಇನ್ನು ಮುಂದೆ ಬಟ್ಟೆ ಬ್ಯಾಗ್ ಬಳಕೆ ಇರುತ್ತದೆಯೇ ಹೊರತು, ಪ್ಲಾಸ್ಟಿಕ್ ಕವರ್ ಹಾಗೂ ಪ್ಲಾಸ್ಟಿಕ್ ಬ್ಯಾಗ್‌ಗೆ ಅವಕಾಶವಿರುವುದಿಲ್ಲ. ಪ್ಲಾಸ್ಟಿಕ್ ಕವರ್, ಬ್ಯಾಗ್ ಮಾರಾಟ ಮಾಡದಂತೆ ಪ್ರತಿಯೊಂದು ಅಂಗಡಿಯ ವ್ಯಾಪಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ.

ಈ ಮೂಲಕ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣ ತಡೆಗಟ್ಟಲು ಪ್ರಾಧಿಕಾರ ಹಲವು ಕಾರ್ಯಕ್ರಮ ರೂಪಿಸಿದೆ. ಆದರೆ ಇದು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಪಾರಂಪರಿಕ ಶೈಲಿಯ ಮರದ ಅರಮನೆ 'ಬ್ರ್ಯಾಂಡ್ ಮೈಸೂರು'



ಅಯೂಬ್ ಖಾನ್

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಉತ್ಪಾದನೆಯಾಗುವ ವಸ್ತುಗಳಿಗೆ ಉತ್ತಮ ಮಾರುಕಟ್ಟೆ ಒದಗಿಸಲು 'ಬ್ರ್ಯಾಂಡ್ ಮೈಸೂರು' ಪಾರಂಪರಿಕ ಶೈಲಿಯ ಮರದ ಅರಮನೆ ನಿರ್ಮಾಣ ಮಾಡಲು ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ನಿರ್ಧರಿಸಿದ್ದಾರೆ. ಮೈಸೂರಿನಲ್ಲಿ ಉತ್ಪಾದನೆಯಾಗುವ ಎಲ್ಲಾ ವಸ್ತುಗಳನ್ನು ಒಂದೇ ಸೂರಿನಡಿ ಮಾರಾಟ ಹಾಗೂ ಪ್ರದರ್ಶನದ ವ್ಯವಸ್ಥೆ ಮಾಡಲಾಗುವುದು ಎಂದು ಅವರು ಹೇಳಿದ್ದಾರೆ. ಮೈಸೂರಿನ ಸಣ್ಣ, ಅತೀ ಸಣ್ಣ ಕೈಗಾರಿಕೆ ಹಾಗೂ ಗುಡಿ ಕೈಗಾರಿಕೆಯವರಿಗೆ ಉತ್ತಮ ಮಾರುಕಟ್ಟೆ ಒದಗಿಸಿಕೊಟ್ಟು ಅವರಿಗೆ ಉತ್ತೇಜಿಸಲು ಪಾರಂಪರಿಕ ಶೈಲಿಯ ಮರದ ಅರಮನೆ ನಿರ್ಮಾಣ ಮಾಡಲಾಗುತ್ತಿದೆ ಎಂದು ಅಯೂಬ್ ಖಾನ್ ತಿಳಿಸಿದ್ದಾರೆ.

ಪ್ಲಾಸ್ಟಿಕ್ ನೀರಿನ ಬಾಟಲ್ ಹಾಗೂ ಗ್ಲಾಸ್‌ಗಳನ್ನು ನಿಷೇಧಿಸಲಾಗುತ್ತಿದ್ದು, ಜನರಿಗೆ ಶುದ್ಧ ಕುಡಿಯುವ ನೀರು ನೀಡಲು ವಾಟರ್ ಫೌಂಟೆನ್ ನಿರ್ಮಾಣ ಮಾಡಲಾಗುತ್ತಿದೆ. ಇದರ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಇದನ್ನು ಪೂರ್ಣಗೊಳಿಸಿದ ನಂತರ ದಸರಾ ಆರಂಭಕ್ಕೂ ಮುನ್ನ ಈ ಯೋಜನೆ ಅನುಷ್ಠಾನ ಮಾಡಲಾಗುವುದು ಎಂದು ಹೇಳಿದರು.

ಕಳೆದ ವರ್ಷ ದಸರಾ ವಸ್ತುಪ್ರದರ್ಶನಕ್ಕೆ ಸುಮಾರು 12ರಿಂದ 14 ಲಕ್ಷ ಜನ ಬಂದಿದ್ದರು. ಆದರೆ ಈ ಬಾರಿ 20 ಲಕ್ಷಕ್ಕೂ ಹೆಚ್ಚು ಜನರು ಆಗಮಿಸುವ ನಿರೀಕ್ಷೆ ಇದೆ. ಪ್ರತಿ ವರ್ಷ ನೋಡಿರುವುದನ್ನೇ ನೋಡಲು ಜನರಿಗೆ ಬೇಸರವಾಗುತ್ತದೆ. ಆದ ಕಾರಣ ಈ ಬಾರಿಯ ದಸರಾ ವಸ್ತುಪ್ರದರ್ಶನಕ್ಕೆ ಕಾಯಕಲ್ಪ ನೀಡಿ, ನವೀನ ರೂಪ ನೀಡಲಾಗುತ್ತಿದೆ ಎಂದರು. ಜೊತೆಗೆ ವಿನೂತನ ಮನೋರಂಜನಾ ಕಾರ್ಯಕ್ರಮ ಪ್ರದರ್ಶಿಸಲಾಗುವುದು. ಇದರಿಂದ ಈ ವರ್ಷ ದಸರಾ ವಸ್ತುಪ್ರದರ್ಶನಕ್ಕೆ ಹೆಚ್ಚು ಜನರು ಬರುತ್ತಾರೆ ಎಂಬ ಲೆಕ್ಕಾಚಾರವಿದೆ ಎಂದು ಅಯೂಬ್ ಖಾನ್ ಮಾಹಿತಿ ನೀಡಿದ್ದಾರೆ.

ಅರಮನೆ ಆವರಣದಲ್ಲಿ ದಸರಾ ಸಿದ್ಧತೆ ಬಿರುಸು

ಪಾರ್ಕ್ ರೇಲಿಂಗ್‌ಗೆ ಬಣ್ಣ



ಮೈಸೂರು ಅರಮನೆ ಆವರಣದಲ್ಲಿರುವ ಪಾರ್ಕ್‌ಗೆ ಅಳವಡಿಸಿರುವ ರೇಲಿಂಗ್ಸ್‌ಗೆ ಬಣ್ಣ ಬಳಿಯುತ್ತಿರುವುದು.

ಮೈಸೂರು,ಸೆ.19(ಎಂಟಿವೈ)– ದಸರಾ ಮಹೋತ್ಸವಕ್ಕಾಗಿ ಅರಮನೆ ಆವರಣದಲ್ಲಿ ಸಿದ್ಧತಾ ಕಾರ್ಯ ಬಿರುಸಾಗಿದ್ದು, ಉದ್ಯಾನವನದ ರೇಲಿಂಗ್ಸ್‌ಗಳಿಗೆ ಬಣ್ಣ ಬಳಿಯುವ ಕಾರ್ಯ ಆರಂಭಿಸಲಾಗಿದೆ.

ಈಗಾಗಲೇ ಅರಮನೆಯ ಕಾಂಪೌಂಡ್, ದ್ವಾರದ ಹಾಗೂ ಇನ್ನಿತರ ಗೋಡೆಗಳಿಗೆ ಬಣ್ಣ ಬಳಿಯಲಾಗಿದ್ದು, ಪಾರ್ಕ್‌ಗಳಲ್ಲಿರುವ ಅಲಂಕಾರಿಕ ವಿದ್ಯುತ್ ದೀಪಗಳ ದುರಸ್ತಿ ಕಾರ್ಯ ಪೂರ್ಣಗೊಂಡಿದೆ. ಇದೀಗ ದಸರಾ ಮಹೋತ್ಸವದ ಪ್ರಮುಖ ಕಾರ್ಯಕ್ರಮ ನಡೆಯುವ ಸ್ಥಳದ ಮುಂಭಾಗದ ಉದ್ಯಾನವನ, ಭುವನೇಶ್ವರಿ ದೇವಾಲಯದ ಮುಂಭಾಗ, ತ್ರಿನೇಶ್ವರಸ್ವಾಮಿ ದೇವಾಲಯದ ಮುಂಭಾಗ, ವರಹಸ್ವಾಮಿ ದೇವಾಲಯದ ಮುಂಭಾಗದ ಪಾರ್ಕ್‌ಗಳ ಸುತ್ತಲೂ ಅಳವಡಿಸಿರುವ ರೇಲಿಂಗ್ಸ್‌ಗೆ ಹಸಿರು ಬಣ್ಣ ಬಳಿಯುವ ಕಾರ್ಯ ಆರಂಭಿಸಲಾಗಿದೆ. ಇನ್ನು 4–5 ದಿನದಲ್ಲಿ ಅರಮನೆ ಆವರಣದಲ್ಲಿ ದಸರಾ ಸಿದ್ಧತಾ ಕಾರ್ಯ ಪೂರ್ಣಗೊಳ್ಳಲಿದ್ದು, ನಾಡಹಬ್ಬದ ಆಚರಣೆಗೆ ಅರಮನೆ ಆವರಣ ಸಜ್ಜಾಗಲಿದೆ.

ಬಲ್ಬ್ ಬದಲಾವಣೆ: ಅರಮನೆಗೆ ವಿದ್ಯುತ್ ದೀಪಾಲಂಕಾರಕ್ಕಾಗಿ ಅಳವಡಿಸಿರುವ ಬಲ್ಬ್‌ಗಳಲ್ಲಿ ಈ ಬಾರಿಯೂ ಸಾಕಷ್ಟು ಬಲ್ಬ್‌ಗಳು ಹಾಳಾಗಿದ್ದು, ಪ್ರತಿವರ್ಷದಂತೆ ದಸರಾ ಸಂದರ್ಭದಲ್ಲಿ ಕೆಟ್ಟಿರುವ ಬಲ್ಬ್‌ಗಳ ಬದಲಿಸುವ ಕಾರ್ಯ ಆರಂಭಿಸಲಾಗಿದೆ. 2–3 ಹಂತದಲ್ಲಿ ಕೆಟ್ಟಿರುವ ಬಲ್ಬ್ ತೆರವು ಮಾಡಿ ಹೊಸ ಬಲ್ಬ್‌ಗಳ ಅಳವಡಿಸುವ ಕಾರ್ಯ ನಡೆಸಲಾಗುತ್ತಿದ್ದು, ಅರಮನೆ ಪ್ರವೇಶ ದ್ವಾರದಲ್ಲಿ ಕೆಟ್ಟಿರುವ ಬಲ್ಬ್‌ಗಳನ್ನು ಬದಲಿಸಲಾಗುತ್ತಿದೆ. ನಂತರ ಅರಮನೆಯ ಮುಖ್ಯ ಕಟ್ಟಡದಲ್ಲಿ ಅಳವಡಿಸಿರುವ ಬಲ್ಬ್‌ಗಳ ತೆರವಿಗಾಗಿ ಕ್ರೇನ್ ಬಳಸಿ ಹೊಸ ಬಲ್ಬ್ ಅಳವಡಿಸಲಾಗುತ್ತದೆ. ನವರಾತ್ರಿ ಆರಂಭದ ವೇಳೆಗೆ ಅರಮನೆಯ ದೀಪಾಲಂಕಾರಕ್ಕಾಗಿ ಎಲ್ಲಾ ಬಲ್ಬ್‌ಗಳು ಜಗಮಗಿಸಲಿವೆ. ಅದಕ್ಕೆ ಕ್ರಮ ಕೈಗೊಳ್ಳಲಾಗಿದೆ.

ದಸರಾ ಗಜಪಡೆಯ ಮಾವುತರು, ಕಾವಾಡಿಗಳಿಗೆ ಪಂಚಕರ್ಮ ಚಿಕಿತ್ಸೆ

●ಜಿಲ್ಲಾ ಆಯುಷ್ ಇಲಾಖೆಯಿಂದ ಅರಮನೆ ಆವರಣದಲ್ಲಿ ತಾತ್ಕಾಲಿಕ ಆರೋಗ್ಯ ಕೇಂದ್ರ ●ವಾರದ ಏಳು ದಿನವೂ ದಿನಕ್ಕೊಬ್ಬರು ವೈದ್ಯರಿಂದ ಆರೋಗ್ಯ ಸೇವೆ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಸೆ.19–ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಗಜಪಡೆಯ ಮಾವುತ, ಕಾವಾಡಿಗಳ ಆರೋಗ್ಯಕ್ಕೆ ಆಯುರ್ವೇದ ಚಿಕಿತ್ಸಾ ಪದ್ಧತಿ ಅಳವಡಿಸಿಕೊಳ್ಳಲಾಗಿದ್ದು, ಅರಮನೆ ಆವರಣದಲ್ಲಿ ಜಿಲ್ಲಾ ಆಯುಷ್ ಇಲಾಖೆ, ಪಂಚಕರ್ಮ ಆಯುಷ್ ಆರೋಗ್ಯ ಕೇಂದ್ರವನ್ನು ತೆರೆದಿದೆ.

ದಸರಾ ಗಜಪಡೆಯೊಂದಿಗೆ ವಿವಿಧ ಆನೆ ಕ್ಯಾಂಪ್‌ಗಳಿಂದ ಎರಡು ತಂಡಗಳಲ್ಲಿ ಆಗಮಿಸಿ, ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ಮಾವುತರು, ಕಾವಾಡಿಗಳು ಹಾಗೂ ಸಹಾಯಕರಿಗಾಗಿ ಕಳೆದ ಕೆಲವು ವರ್ಷದಿಂದ ಆಯುಷ್ ಆರೋಗ್ಯ ಕೇಂದ್ರ ತೆರೆಯಲಾಗುತ್ತಿದ್ದು, ಈ ಬಾರಿಯೂ ಜಯಮಾರ್ತಾಂಡ ದ್ವಾರದ ಬಳಿ ಮೂರು ಕೊಠಡಿಯಲ್ಲಿ ಚಿಕಿತ್ಸಾ ಕೇಂದ್ರ ತೆರೆಯಲಾಗಿದೆ. ಮಹಿಳೆಯರು ಹಾಗೂ ಪುರುಷರಿಗೆ ಪ್ರತ್ಯೇಕ ಕೊಠಡಿಯಲ್ಲಿ ಅಭ್ಯಂಗವೂ ಸೇರಿದಂತೆ ಇನ್ನಿತರ ಸಮಸ್ಯೆಗೆ ಚಿಕಿತ್ಸೆ ನೀಡಲಾಗುತ್ತಿದೆ.

ಬಹುತೇಕ ಮಾವುತರು, ಕಾವಾಡಿಗಳು ಹಾಗೂ ಕುಟುಂಬದ ಸದಸ್ಯರು ಆರೋಗ್ಯ ಸಮಸ್ಯೆಗೆ ಇಂಗ್ಲೀಷ್ ಮೆಡಿಸಿನ್ ಪಡೆಯಲು ಹಿಂದೇಟು ಹಾಕುತ್ತಿದ್ದು, ಆಯುರ್ವೇದ, ಪಂಚಕರ್ಮ ಚಿಕಿತ್ಸೆ ಪಡೆಯಲು ಉತ್ಸುಕರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಕೋರಿಕೆಯ ಮೇರೆಗೆ ಜಿಲ್ಲಾ ಆಯುಷ್ ಇಲಾಖೆ ಪಂಚಕರ್ಮ ಚಿಕಿತ್ಸಾ ಕೇಂದ್ರ ತೆರೆದಿದ್ದು, ಪ್ರತಿದಿನ 10–15 ಮಂದಿ ಅಭ್ಯಂಗ, ಇನ್ನಿತರೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಗಜಪಡೆ ಪರಿವಾರವೂ ಸೇರಿ ಅರಮನೆ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗಳಿಗೆ ಒತ್ತಡ ನಿವಾರಣೆ, ಮಂಡಿ ನೋವು,



ಅರಮನೆಯ ಆವರಣದಲ್ಲಿ ದಸರಾ ಗಜಪಡೆಯ ಮಾವುತರು ಮತ್ತು ಕಾವಾಡಿಗಳಿಗಾಗಿ ತೆರೆದಿರುವ ಆಯುಷ್ ಆರೋಗ್ಯ ಚಿಕಿತ್ಸಾ ಕೇಂದ್ರದಲ್ಲಿ ಅಭಿಮನ್ಯು ಮಾವುತ ವಸಂತ್ ಅವರಿಗೆ ಡಾ. ಎಂ.ಜಿ.ಸುರೇಶ್ ನಾಯಕ್, ಡಾ. ವೇದ ಹಾಗೂ ಸಿಬ್ಬಂದಿ ಚಿಕಿತ್ಸೆ ನೀಡುತ್ತಿರುವುದು.

ಕಾಲು ನೋವು, ಬೆನ್ನು ನೋವು ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಆಯುರ್ವೇದದ ಪದ್ಧತಿಯ ಮೂಲಕ ಚಿಕಿತ್ಸೆ ನೀಡಲಾಗುತ್ತಿದೆ. ಆಯುಷ್ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಈಗಾಗಲೇ ಆರಂಭವಾಗಿದ್ದು, ಸೆ.22 ಅಥವಾ 23ರಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಅ.13ರವರೆಗೂ ಈ ಕೇಂದ್ರ ಕಾರ್ಯನಿರ್ವಹಿಸಲಿದ್ದು, ಪ್ರತಿದಿನ ಬೆಳಗ್ಗೆ 9.30ರಿಂದ ಸಂಜೆ 4.30ರವರೆಗೆ ಚಿಕಿತ್ಸಾ ಸೌಲಭ್ಯ ಲಭ್ಯವಿರುತ್ತದೆ.

ವಿವಿಧ ಸಮಸ್ಯೆ: ಆಯುಷ್ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರದಲ್ಲಿ ಚರ್ಮರೋಗ, ಸಂಧಿವಾತ, ಕೆಮ್ಮು, ಮಂಡಿ, ಕೀಲು, ಬೆನ್ನು ನೋವು, ಜ್ವರ, ಸ್ತ್ರೀರೋಗಗಳು ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಪಂಚಕರ್ಮ, ಸ್ವೇದ(ಸ್ಟೀಮ್) ಮತ್ತು ಆಯುರ್ವೇದದ ಮೂಲಕ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ಅಗತ್ಯವುಳ್ಳವರಿಗೆ ಚಿಕಿತ್ಸೆ ನೀಡಿ ಉಚಿತವಾಗಿ ಔಷಧಿಯನ್ನು ನೀಡಲಾಗುತ್ತಿದೆ.

ಏನೇನು: ಈ ಚಿಕಿತ್ಸಾ ಶಿಬಿರದಲ್ಲಿ ಸ್ನೇಹಪಾನ, ಅಭ್ಯಂಗ, ಮಹಾ ನಾರಾಯಣ (ನೋವು ನಿವಾರಕ ತೈಲ), ಕ್ಷೀರತೈಲ, ಹೆಡ್ ಮಸಾಜ್, ಅಸಾವಾ (ಕಷಾಯ), ಹರಿಷ್ಟಗಳು(ಮೂಲ ಔಷಧಿಯ ದ್ರಾವಣ) ಸೇರಿದಂತೆ ವಿವಿಧ ಆಯುರ್ವೇದ ಗಿಡಮೂಲಿಕೆಗಳಿಂದ ತಯಾರಿಸಿರುವ ದ್ರಾವಣ, ಚೂರ್ಣ, ಪೌಡರ್ ಸೇರಿದಂತೆ ಔಷಧಿಗಳನ್ನು ನೀಡಲಾಗುತ್ತಿದೆ. ಕೇಂದ್ರದಲ್ಲಿ ಒಂದು ಪಂಚಕರ್ಮ ಟೇಬಲ್, ಸ್ಟೀಮ್ ಯಂತ್ರ, ಸಿಲಿಂಡರ್‌ಯುಕ್ತ ಸ್ಟೌವ್, ಡ್ರೆಸಿಂಗ್ ಮೆಟೀರಿಯಲ್, ತೂಕ ಮತ್ತು ಅಳತೆಯ ಸಾಧನ, ರಕ್ತದೊತ್ತಡ ಪರೀಕ್ಷಾ ಯಂತ್ರ ಸೇರಿದಂತೆ ರೋಗಿಗಳ ತಪಾಸಣೆಗೆ ಅಗತ್ಯವಾಗಿರುವ ಸಲಕರಣೆಗಳನ್ನು ತಂದಿಡಲಾಗಿದೆ.

ವೈದ್ಯರ ತಂಡ: ಮಾವುತ, ಕಾವಾಡಿಗಳಿಗಾಗಿ ಆರೋಗ್ಯ ಸೇವೆ ಒದಗಿಸಲು ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ ನೇತೃತ್ವದಲ್ಲಿ ಡಾ.ಸುರೇಶ್, ಡಾ. ಎಸ್.ಎಂ. ವೇದ, ಡಾ.ರೂಪಶ್ರೀ, ಡಾ. ರಾಘವೇಂದ್ರ ಆಚಾರ್, ಡಾ.ಕುಮಾರ್, ಡಾ.ರೇಖಾ, ಡಾ.ಶ್ವೇತ ಹಾಗೂ ಸಹಾಯಕರು, ಇನ್ನಿತರ ಸಿಬ್ಬಂದಿ ಕಾರ್ಯ ನಿರ್ವಹಿಸಲಿದ್ದಾರೆ.

ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ

ಗಜಪಡೆಯ ಮಾವುತ, ಕಾವಾಡಿ ಹಾಗೂ ಕುಟುಂಬದ ಸದಸ್ಯರಿಗೆ ಆಯುಷ್ ಆರೋಗ್ಯ ಶಿಬಿರ, ಚಿಕಿತ್ಸಾ ಕೇಂದ್ರವನ್ನು ಆರಂಭಿಸಲಾಗಿದೆ. ಪ್ರತಿ ದಿನ ಒಬ್ಬೊಬ್ಬ ವೈದ್ಯರು ಈ ಕೇಂದ್ರಕ್ಕೆ ಆಗಮಿಸಿ ಚಿಕಿತ್ಸೆ ನೀಡಲಿದ್ದಾರೆ. ವಾರದ ಏಳು ದಿನವೂ ಚಿಕಿತ್ಸಾ ಕೇಂದ್ರ ಕಾರ್ಯನಿರ್ವಹಿಸಲಿದೆ. ವೈದ್ಯರಲ್ಲದೆ ಓರ್ವ ಮಹಿಳಾ ಹಾಗೂ ಪುರುಷ ಥೆರಪಿಸ್ಟ್‌ಗಳು ಕಾರ್ಯ ನಿರ್ವಹಿಸಲಿದ್ದಾರೆ. ಅಭ್ಯಂಗ ಚಿಕಿತ್ಸೆಯನ್ನೂ ನೀಡಲಾಗುತ್ತಿದೆ. ಎಲ್ಲರಿಗೂ ಉಚಿತವಾಗಿ ಔಷಧಿಯನ್ನೂ ನೀಡಲಾಗುತ್ತಿದೆ.

–ಡಾ.ಪುಷ್ಪಾ, ಆಯುಷ್ ಅಧಿಕಾರಿ

ಮಾವುತರು, ಕಾವಾಡಿಗಳ ಮಕ್ಕಳಿಗೆ ಅರಮನೆ ಆವರಣದಲ್ಲಿ ತಾತ್ಕಾಲಿಕ ಶಾಲೆ...



ದಸರಾ ಗಜಪಡೆಯ ಮಾವುತರು, ಕಾವಾಡಿಗಳ ಮಕ್ಕಳು ಅರಮನೆ ಆವರಣದಲ್ಲಿ ತೆರೆದಿರುವ ತಾತ್ಕಾಲಿಕ ಶಾಲೆಯಲ್ಲಿ ಕಲಿಕೆಯಲ್ಲಿ ನಿರತರಾಗಿರುವುದು.

ನಕ್ಕರೆ ಅದೇ ಸ್ವರ್ಗ

ರಂಗ : ಲೇ ಎದ್ದೇಳೋ... ಭೂಕಂಪ ಆಗ್ತಿದೆ, ಮನೆಯೆಲ್ಲಾ ಅಲ್ಲಾಡ್ತಿದೆ.

ಗುಂಡ : ಮಲ್ಕೊಳ್ಳೋ... ಮನೆ ಬಿದ್ರೆ ಓನರ್‌ದು ಬೀಳುತ್ತೆ. ನಾವಿರೋದು ಬಾಡಿಗೆ ಮನೆಯಲ್ಲಿ ತಾನೇ!

ಮೈಸೂರು ಮಿತ್ರ

ಶುಕ್ರವಾರ, 20 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಿ "ಧನ"ವನ್ನು ಎಷ್ಟೇ ಸಂಪಾದಿಸಿದರೂ "ನಿಧನ" ವಾಗುವುದರಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೃತಿ ಇಲ್ಲದ ಮಾತು ಕಸ ಬೆಳೆದ ತೋಟವಿದ್ದಂತೆ.

ನಿಮ್ಮ ಪತ್ರಗಳು

ಬಿದ್ದರೂ ಮೀಸೆ...ಮಣ್ಣಾಗಿಲ್ಲ...!

ಮಾನ್ಯರೆ,

ಅಬಕಾರಿ ಹಗರಣದಲ್ಲಿ ಸುಪ್ರೀಂ ಕೋರ್ಟ್ ಜಾಮೀನಿನ ಮೇಲೆ ಹೊರ ಬಂದಿರುವ ದೆಹಲಿಯ (ಉಸ್ತುವಾರಿ!) ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ಯಾವುದೇ ಕಡತಗಳಿಗೂ ಸಹಿ ಮಾಡದಂತೆ ಕೋರ್ಟ್ ಷರತ್ತು ವಿಧಿಸಿದೆ. ಇದರಿಂದಾಗಿ ಜೈಲಿನಲ್ಲಿದ್ದಾಗಲೂ ಮುಖ್ಯಮಂತ್ರಿ ಸ್ಥಾನಕ್ಕೆ ಕೊನೆಗೂ ರಾಜೀನಾಮೆ ಕೊಡದೆ ಹೊರ ಬಂದ ಕೇಜ್ರಿವಾಲರಿಗೆ ಇರುಸು–ಮುರುಸು ಆಗಿರಬಹುದು. ಕೇಜ್ರಿವಾಲರು ಆರೋಪಿಯಾಗಿದ್ದರೂ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಲಿಲ್ಲ. ಅವರ ಸರ್ಕಾರವನ್ನು 356ನೇ ವಿಧಿ ಬಳಸಿ ವಜಾ ಮಾಡಿದರೆ ಕಾಂಗ್ರೆಸ್ ಮೇಲಿದ್ದ ಅಪವಾದಕ್ಕೆ ತಾವೂ ಹೊರತಲ್ಲ ಎನ್ನುವಂತಾಗುತ್ತದೆ ಎಂದು ಕೇಂದ್ರದ ಬಿಜೆಪಿ ಸರ್ಕಾರವು ದಿಲ್ಲಿ ಸರ್ಕಾರವನ್ನು ವಜಾ ಮಾಡಲು ಮುಂದಾಗಲಿಲ್ಲ. (356ನೇ ವಿಧಿ ಬಳಸಿ ರಾಜ್ಯ ಸರ್ಕಾರವನ್ನು ವಜಾ ಮಾಡಿದರೆ ತಮಗೂ ಅಪವಾದ ಬರುತ್ತದೆ ಎಂದು ಭಾವಿಸುವ ಮಂದಿಗೆ ಅದೇ ಆಪರೇಷನ್ ಕಮಲ ಮೂಲಕ ಸರ್ಕಾರಗಳನ್ನು ಬೀಳಿಸುವುದು ಅಪವಾದ ಎಂದು ಕಾಣಲಿಲ್ಲ! ಜಾಣ ಕುರುಡು!!) ಅವರನ್ನು ರಾಜೀನಾಮೆ ನೀಡಿ ಎಂದು ಕೇಳುವುದು ನಮ್ಮ ಕೆಲಸವಲ್ಲ ಎಂದು ಸುಪ್ರೀಂ ಕೋರ್ಟ್ ತಟಸ್ಥ ನಿಲುವು ತಳೆಯಿತು. ಅವರು ಅಪರಾಧಿ ಎಂದು ಹೇಳಿದರೂ ನಿರಪರಾಧಿ ಎನ್ನುವ ಅನುಮಾನದ ಮೇಲೆ ಜಾಮೀನು ನೀಡಿತು.

ಈಗ ಮುಖ್ಯಮಂತ್ರಿಯಾದರೂ ಬಲಹೀನರಾಗಿ ಉತ್ಸವಮೂರ್ತಿಯಂತೆ ಮುಖ್ಯಮಂತ್ರಿ ಕಚೇರಿಯಲ್ಲಿ ಕುಳಿತಿರಬೇಕಾಗುತ್ತದೆ ಎಂದು ಯೋಚಿಸಿದ ಕೇಜ್ರಿವಾಲರು, ತಾವು ಜೈಲಿನಲ್ಲಿದ್ದಾಗಿನಿಂದಲೂ ತಮ್ಮನ್ನು ಬಲವಾಗಿ ಸಮರ್ಥಿಸಿದ್ದ ಅತಿಶಿಯವರನ್ನು ಮುಖ್ಯಮಂತ್ರಿ ಗಾದಿಗೆ ಕೂರಿಸಿದ್ದಾರೆ. ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವುದೇ ಅವರಿಗೆ ಸಮಾಧಾನ!! –ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಕುವೆಂಪುನಗರ ಡಿಪೋ ರಸ್ತೆಯಲ್ಲಿರುವ ವಾಚ್‌ಮ್ಯಾನ್ ಶೆಡ್ ತೆರವಿಗೆ ಮನವಿ



ಮಾನ್ಯರೆ,

ಮೈಸೂರಿನ ಕುವೆಂಪು ನಗರದ ಕಾಂಪ್ಲೆಕ್ಸ್‌ನ ಮುಖ್ಯ ರಸ್ತೆಯಲ್ಲಿ (ಕೆಎಸ್‌ಆರ್‌ಟಿಸಿ ಡಿಪೋ ರಸ್ತೆ) ಮೂರು ಕಡೆಗಳಲ್ಲಿ ದೊಡ್ಡ ದೊಡ್ಡ ವಾಣಿಜ್ಯ ಸಂಕೀರ್ಣಗಳನ್ನು ಖಾಸಗಿಯವರು ನಿರ್ಮಾಣ ಮಾಡುತ್ತಿದ್ದಾರೆ. ಆದರೆ ಈ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಾಣ ಮಾಡುತ್ತಿರುವ ಮಾಲೀಕರು ಮುಖ್ಯ ರಸ್ತೆಯಲ್ಲೇ ಸುಮಾರು 10 ಅಡಿಗಳಿಗೆ ವಾಚ್‌ಮ್ಯಾನ್ ಶೆಡ್‌ಗಳನ್ನು ಹಾಕಿ, ಮುಖ್ಯ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರು ಮತ್ತು ವಾಹನ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಗಿದೆ. ಈ ಮುಖ್ಯ ರಸ್ತೆಯು ಯಾವಾಗಲೂ ಜನದಟ್ಟಣೆಯಿಂದ ಕೂಡಿದ್ದು, ಜನರು ಓಡಾಡಲು ಸಹ ಕಷ್ಟಪಡುವಂತಾಗಿದೆ.

ಮೈಸೂರು ನಗರ ಪಾಲಿಕೆಯ ಹಿರಿಯ ಅಧಿಕಾರಿಗಳು ಸಹ ಇದೆ ರಸ್ತೆಯಲ್ಲಿ ಓಡಾಡುತ್ತಿದ್ದರೂ, ಇವರ ಕಣ್ಣಿಗೆ ಈ ರಸ್ತೆಯಲ್ಲಿರುವ ಶೆಡ್‌ಗಳು ಕಾಣಿಸುತ್ತಿಲ್ಲವೇ ಇಲ್ಲವೇ ಕಂಡು – ಕಾಣದಂತೆ ಸುಮ್ಮನಿದ್ದಾರಾ? ಎಂಬ ಅನುಮಾನವಿದೆ. ತಕ್ಷಣವೇ ಈ ಶೆಡ್‌ಗಳನ್ನು ತೆರವುಗೊಳಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ತೆರವುಗೊಳಿಸಿದ ಮರದ ಕೊಂಬೆಗಳನ್ನು ಎಲ್ಲೆಂದರಲ್ಲಿ ಬಿಸಾಡದಂತೆ ಕ್ರಮಕ್ಕೆ ಸೂಚನೆ



ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿದ್ಯುತ್ ಮಾರ್ಗಗಳಿಗೆ ಅಡಚಣೆಯಾಗಿರುವ ಮರದ ಕೊಂಬೆಗಳನ್ನು ಕಡಿದು ಎಲ್ಲೆಂದರಲ್ಲಿ ಎಸೆಯದೆ ಒಂದು ಕಡೆ ಶೇಖರಿಸಿ ನಗರಪಾಲಿಕೆಯ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿ ಇವುಗಳನ್ನು ತೆರವುಗೊಳಿಸುವಂತೆ ಸೂಚಿಸಲಾಗಿದೆ.

ದಿನಾಂಕ 19.9.2024ರ 'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ 'ಸೆಸ್ಕ್–ಪಾಲಿಕೆ ನಡುವೆ ಸಮನ್ವಯ ಕೊರತೆ, ತೆರವುಗೊಳಿಸದೆ ಫುಟ್‌ಪಾತ್ ಮೇಲೆ ಬಿದ್ದಿರುವ ಮರದ ರೆಂಬೆಗಳ ರಾಶಿ: ಪಾದಚಾರಿಗಳು ಪರದಾಟ' ಶೀರ್ಷಿಕೆಯಡಿ ವರದಿ ಪ್ರಕಟವಾಗಿದ್ದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಮುಂದಿನ ದಿನಗಳಲ್ಲಿ ಈ ರೀತಿ ಮರದ ರೆಂಬೆ–ಕೊಂಬೆ ತೆರವು ಮಾಡುವ ಮುನ್ನ ಮಹಾನಗರ ಪಾಲಿಕೆಯ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಅಗತ್ಯ ವಾಹನ ಹಾಗೂ ಸಿಬ್ಬಂದಿ ಲಭ್ಯತೆಯನ್ನು ದೃಢಪಡಿಸಿಕೊಂಡು ನಂತರ ಕಾಮಗಾರಿ ಕೈಗೊಳ್ಳುವಂತೆ ತಿಳಿಸಲಾಗಿದೆ. ಮುಂಬರುವ ದಿನಗಳಲ್ಲಿ ಯಾವುದೇ ದೂರುಗಳು, ಆಕ್ಷೇಪಣೆಗಳು ಬರದ ಹಾಗೆ ನಮ್ಮ ಮೈಸೂರು ಸಾಂಸ್ಕೃತಿಕ ನಗರಿ, ಸ್ವಚ್ಛ ನಗರಿ ಕೀರ್ತಿಗೆ ಧಕ್ಕೆ ಬರದಂತೆ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ.

–ಕಾರ್ಯಪಾಲಕ ಇಂಜಿನಿಯರ್
ಕಾರ್ಯ ಮತ್ತು ಪಾಲನೆ ವಿಭಾಗ
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ
ನರಸಿಂಹರಾಜ ಮೊಹಲ್ಲಾ, ಮೈಸೂರು.

ಪುಸ್ತಕ ಪರಿಚಯ

ಕನ್ನಡದಲ್ಲೂ ಕಣ್ಣಿಗೆ ಕಟ್ಟಲಿದೆ ಡಾ. ವಿಕ್ರಮ್ ಸಂಪತ್‌ರ ಜ್ಞಾನವಾಪಿಯ ಅಜ್ಞಾತ ದುರಂತ ಕಥೆ



ಪ್ರೊ.ಜಿ.ಎಲ್.ಶೇಖರ್ ಲೇಖನದ ಲೇಖಕರು

ಭಾರತದ ಖ್ಯಾತ ಇತಿಹಾಸ ತಜ್ಞ ಡಾ.ವಿಕ್ರಮ್ ಸಂಪತ್‌ರವರು ಬರೆದ 'ವೇಟಿಂಗ್ ಫಾರ್ ಶಿವ: ಅನ್‌ಅರ್ಥಿಂಗ್ ದ ಟ್ರುಥ್ ಆಫ್ ಕಾಶೀಸ್ ಜ್ಞಾನವಾಪಿ' ಕೃತಿಯ ಕನ್ನಡದ ಆಪ್ತ ಅನುವಾದ ಇತ್ತೀಚೆಗೆ ಬೆಂಗಳೂರಿನಲ್ಲಿ ಲೋಕಾರ್ಪಣೆಗೊಂಡಿತು. 'ಶಿವನಿಗಾಗಿ ಕಾಯುತ್ತ: ಕಾಶಿ ಜ್ಞಾನವಾಪಿಯ ಸತ್ಯದ ಅನಾವರಣ' ಕನ್ನಡ ಅವತರಣಿಕೆಯಾಗಿದ್ದು, ಖ್ಯಾತ ಪತ್ರಕರ್ತ, ಏಷ್ಯಾನೆಟ್ ಸುವರ್ಣ ನ್ಯೂಸ್‌ನ ಪ್ರಧಾನ ಸಂಪಾದಕ ಅಜಿತ್ ಹನುಮಕ್ಕನವರ್ ಈ ಕೃತಿಯನ್ನು ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮೂಲ ಇಂಗ್ಲೀಷ್ ಕೃತಿಯ ಕರ್ತೃ ಡಾ.ವಿಕ್ರಮ್ ಸಂಪತ್, 'ಕಾಶಿ ಎಂಬುದು ಒಂದು ಭಾವನೆ– ಹಿಂದೂ ಮನಸ್ಸುಗಳನ್ನು ಶತಮಾನಗಳ ಕಾಲದಿಂದಲೂ ಸೆಳೆಯುತ್ತಿರುವ ಒಂದು ನೈತಿಕ ಶಕ್ತಿ. ತಮ್ಮ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಕಾಶಿಗೆ ಭೇಟಿ ನೀಡಬೇಕೆಂಬುದು ಬಹುತೇಕ ಹಿಂದೂಗಳ ಆಶಯವಾಗಿರುತ್ತದೆ. ಕಾಶಿ ಹಾಗೂ ಅದರ ದೇವಸ್ಥಾನಗಳು ಸಾಕಷ್ಟು ಲೂಟಿ–ಆಕ್ರಮಣಗಳನ್ನು ಎದುರಿಸಿವೆ. ಕ್ರಿ.ಶ.1194ರಲ್ಲಿ ಐಬಕ್, ರಜ಼ಿಯಾ ಸುಲ್ತಾನಾ, ಜೌನ್ಪುರದ ಶಾರ್ಕಿ ಸಾಮ್ರಾಜ್ಯದಿಂದ ಆರಂಭವಾಗಿ 1494–96ರಲ್ಲಿ ಸಿಕಂದರ್ ಲೋದಿಯ ವಿಧ್ವಂಸಕ ದಾಳಿಯವರೆಗೂ ಈ ಪುಣ್ಯ ನಗರಿಯ ಪವಿತ್ರ ದೇಗುಲಗಳು ದಾಳಿಯ ಭಗ್ನಾವಶೇಷಗಳ ಹಾಗೂ ದುಃಖದ ರಾಶಿಯ ಮಧ್ಯೆಯೇ ಉಳಿದುಬಿಟ್ಟಿದ್ದವು. 'ಆದರೂ ಪ್ರತೀ ಬಾರಿಯೂ ಮೂಲ ದೇವಸ್ಥಾನದ ಬಳಿಯೇ ಮತ್ತೊಂದು ದೇವಸ್ಥಾನವನ್ನು ನಿರ್ಮಿಸುವ ಮೂಲಕ ಮೂಲ ಮಂದಿರವು ಜೀವಂತವಾಗಿ ಉಳಿಯುವಂತೆ ಮಾಡಿದ್ದಾರೆ' ಎಂದು ಅವರು ಹೇಳಿದರು.

ಸಾಹಿತ್ಯಿಕ, ಐತಿಹಾಸಿಕ ಹಾಗೂ ಕಾನೂನಾತ್ಮಕ ದಾಖಲೆಗಳ ಜೊತೆಗೆ ಇತ್ತೀಚೆಗೆ ಭಾರತೀಯ ಪುರಾತತ್ವ ಇಲಾಖೆಯು ನಡೆಸಿದ ಸಮೀಕ್ಷೆಯು ಕೂಡ ಕಾಶಿ ವಿಶ್ವನಾಥ ದೇವಸ್ಥಾನವು ಪೂರ್ತಿಯಾಗಿ ಹಿಂದೂಗಳಿಗೆ ಸೇರಿದ್ದು ಎಂಬುದಕ್ಕೆ ಪೂರಕ ಸಾಕ್ಷ್ಯಗಳನ್ನು ಒದಗಿಸಿದೆ. 'ದುರ್ದೈವದ ಸಂಗತಿ ಎಂದರೆ, ನಾವು ಹಿಂದೂಗಳೆಂದು ನಮ್ಮ ಅಸ್ತಿತ್ವವನ್ನು ಅಭಿವ್ಯಕ್ತಗೊಳಿಸುವುದು ಒಂದು ರೀತಿಯ ಶಾಪಗ್ರಸ್ತ ವಿಷಯವೆಂದು ಪರಿಗಣಿಸಿ, ನಮ್ಮನ್ನು ಧರ್ಮಾಂಧರಂತೆ ನೋಡಲಾಗುತ್ತದೆ' ಎಂದು ವಿಕ್ರಮ್ ಸಂಪತ್ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಬೇರಿನ್ಯಾವ ಧರ್ಮ ತನ್ನ ಅಸ್ತಿತ್ವವನ್ನು ಮತ್ತು ತನ್ನ ಧರ್ಮಕ್ಕೆ ಸಂಬಂಧಿಸಿದ ವಿಷಯಗಳನ್ನು ಅತ್ಯಂತ ಮುಕ್ತವಾಗಿ ಅಭಿವ್ಯಕ್ತಿಸಲು ಏನೂ ತೊಂದರೆಯಿಲ್ಲ. ಆದರೆ ಅದನ್ನೇ ಒಬ್ಬ ಹಿಂದೂ ಮಾಡಿದರೆ ಅವನನ್ನು ಮತಾಂಧನೆಂದು, ಕೋಮುವಾದಿಯೆಂದು ಅವನ ಅಭಿವ್ಯಕ್ತಿಯನ್ನು ಒಂದು ಹೀನ ಕಾರ್ಯವಾಗಿ ಗುರುತಿಸಲಾಗುತ್ತದೆ ಎಂಬುದು ಶೋಚನೀಯ ಸಂಗತಿ ಎಂದು ವಿಷಾದಿಸಿದರು.

ಕೃತಿ ಲೋಕಾರ್ಪಣೆ ಸಂದರ್ಭದಲ್ಲಿ ಜರುಗಿದ 90 ನಿಮಿಷಗಳ ಸಂವಾದದಲ್ಲಿ ಈ ಪುಸ್ತಕ ಬರೆಯುವ ವೇಳೆ ಇದ್ದ ಸವಾಲುಗಳನ್ನು ವಿವರಿಸಿದ ವಿಕ್ರಮ್ ಸಂಪತ್, ಸಾಕಷ್ಟು ಸಾಹಿತ್ಯ ಕೃತಿಗಳನ್ನು, ಪುರಾಣಗಳನ್ನು, ವ್ಯಾಪಕ ನಂಬಿಕೆಗಳನ್ನು, ಕಥೆಗಳನ್ನು, ಪ್ರವಾಸ ಕಥನಗಳನ್ನು, ಆಸ್ಥಾನ ಇತಿಹಾಸಕಾರರ ಸಾಕ್ಷ್ಯಗಳನ್ನು ಹಾಗೂ 19ನೇ ಶತಮಾನದಿಂದ ಇವತ್ತಿನವರೆಗೂ ಲಭ್ಯವಿರುವ ಬಹುತೇಕ ಕಾನೂನು ದಾಖಲೆಗಳನ್ನು ಅಧ್ಯಯನ ಮಾಡಿದ್ದಾರೆ. ಹಿಂದೂ ಆಧ್ಯಾತ್ಮಿಕ ಪುರಾಣಗಳಲ್ಲಿ ಕಾಶಿಯ ಕುರಿತು ಕೆಲವು ಅದ್ಭುತ ಕಥೆಗಳಿವೆ. ಇವನ್ನು ಕೂಡ ಕೃತಿಗಾಗಿ ಪರಾಮರ್ಶೆ ಮಾಡಲಾಗಿದೆ. 'ಬೇರೆ ಬೇರೆ ಕಾಲಘಟ್ಟಗಳಲ್ಲಿ, ಗ್ರಂಥಗಳಲ್ಲಿ, ವಿಭಿನ್ನ ಸಂದರ್ಭಗಳಲ್ಲಿ, ವೈವಿಧ್ಯಮಯ ಭಾಷೆಗಳಲ್ಲಿ ಲಭ್ಯವಿರುವ ಎಲ್ಲ ಆಕರಗಳನ್ನು ಒಟ್ಟಿಗೆ ಸೇರಿಸಿ ಗ್ರಂಥ ರಚನೆ ಮಾಡುವುದು ನನಗೆ ಸವಾಲಿನ ಕೆಲಸವೇ ಆಗಿತ್ತು. ಆದರೆ ಈ ಎಲ್ಲ ವಿಷಯಗಳನ್ನು ಒಟ್ಟಿಗೇ ಸೇರಿಸಿ, ಇಂದು ಕಾಶಿ ವಿಶ್ವನಾಥ ದೇಗುಲದ ಕಾನೂನು ಪ್ರಕರಣ ಏನಾಗುತ್ತಿದೆ ಎಂಬುದನ್ನು ಜನರಿಗೆ ತಿಳಿಸುವ ಅನಿವಾರ್ಯವೂ ಇತ್ತು' ಎಂದು ತಿಳಿಸಿದರು.

ಅದಾಗಲೇ ಭಾರತವು ಮಧ್ಯ ಪ್ರಾಚ್ಯದ ವಸಾಹತುಶಾಹಿಗಳಾದ ಅರಬ್ಬರು ಮತ್ತು ತುರ್ಕರ ವಿಧ್ವಂಸಕ ದಾಳಿಗಳಿಗೆ ತುತ್ತಾಗಿ ಅವರ ಕಪಿಮುಷ್ಟಿಯಲ್ಲಿದ್ದರಿಂದ, ಕಾಶಿಯಂತಹ ಪುಣ್ಯಕ್ಷೇತ್ರಗಳನ್ನು ಮುಕ್ತಗೊಳಿಸುವಲ್ಲಿ ಬಹಿರಂಗವಾಗಿ ಹೋರಾಡಲು ಹಿಂದೂಗಳಿಗೆ ಸಾಧ್ಯವಾಗಲೇ ಇಲ್ಲ ಎಂಬ ಸೂಕ್ಷ್ಮ ವಿಚಾರವನ್ನು ಈ ಕೃತಿಯು ವಿಶದವಾಗಿ ವಿವರಿಸುತ್ತದೆ. ಆದರೂ ಒಂದು ಮೌನ ಧಾರ್ಮಿಕ ಯುದ್ಧ ಯಾವಾಗಲೂ ನಡೆಯುತ್ತಲೇ ಇತ್ತು ಎಂಬ ವಿಷಯದ ಮೇಲೆಯೂ ಇದು ಬೆಳಕು ಚೆಲ್ಲುವ ಪ್ರಯತ್ನವನ್ನು ಮಾಡುತ್ತದೆ. ಕ್ರಿ.ಶ. 1194ರಲ್ಲಿ ಕುತ್ಬುದ್ದೀನ್ ಐಬಕ್ ಕಾಶಿ ನಗರಿಯನ್ನು, ಅದರ ಅನನ್ಯ ಸಂಸ್ಕೃತಿ–ಪರಂಪರೆಯನ್ನು ನಾಶಪಡಿಸುವ ಮಾರಣಾಂತಿಕ ರಣಕಹಳೆಯನ್ನು ಊದಿದ. ಈ ಘಟನೆಯಾಗಿ ಎರಡು ದಶಕಗಳ ಬಳಿಕ ಬಂಗಾಳ ರಾಜ್ಯದ ವಿಶ್ವರೂಪನೆಂಬ ರಾಜನು ನಗರದ ಮಧ್ಯದಲ್ಲಿ ಒಂದು ಸಮರ್ಪಣಾ ಫಲಕವನ್ನು ಹಾಗೂ ಒಂದು ವಿಜಯ ಸ್ತಂಭವನ್ನು ಸ್ಥಾಪಿಸುತ್ತಾನೆ; ಹಾಗೂ ಈ ಮೂಲಕ ಅವನು ಸಾರಿ ಹೇಳಿದ್ದೇನೆಂದರೆ 'ಕಾಶಿ ದೇವಸ್ಥಾನ ನಾಶವಾಗಿರಬಹುದು ಆದರೆ ಈ ಕಾಶಿ ನಗರಿಯು ಅದರ ಆರಾಧ್ಯ ದೈವವಾದ ವಿಶ್ವೇಶ್ವರನಿಗೇ ಸೇರಿದ್ದು' ಎಂದು. ಕಾಶಿಗೆ ಯಾತ್ರೆ ಹೋಗಲು ಹಿಂದೂಗಳು ಆಗ ಹೆಚ್ಚು ಸುಂಕವನ್ನು ಕಟ್ಟಬೇಕಿತ್ತು. ಅದಕ್ಕಾಗಿಯೇ ಕ್ರಿ.ಶ. 1279ರಲ್ಲಿ ದಕ್ಷಿಣ ಭಾರತದ ಹೊಯ್ಸಳ ಸಾಮ್ರಾಜ್ಯದ ಮೂರನೇ ವೀರ ನರಸಿಂಹನು ತನ್ನ ರಾಜ್ಯದಿಂದ ಕಾಶಿ ಯಾತ್ರೆ ಹೋಗಬಯಸುವ ಹಿಂದೂಗಳ ಸುಂಕವನ್ನು ಭರಿಸಲು ತನ್ನ ರಾಜ್ಯದ ಒಂದಿಡೀ ಗ್ರಾಮವನ್ನು ಮೀಸಲಾಗಿಟ್ಟಿದ್ದನು. ಗುಜರಾತಿನ ವ್ಯಾಪಾರಿ ಸೇಠ್ ವಸ್ತುಪಾಲನು ಕಾಶಿ ದೇವಸ್ಥಾನವನ್ನು ಪುನರ್ನಿರ್ಮಿಸಲು ಬಹುದೊಡ್ಡ ಮೊತ್ತದ ಹಣವನ್ನು ದಾನವಾಗಿ ನೀಡಿದನು. ಉತ್ತರ, ದಕ್ಷಿಣ, ಪೂರ್ವ ಅಥವಾ ಪಶ್ಚಿಮ ಹೀಗೆ ಭಾರತದ ಯಾವುದೇ ಭಾಗವಿರಲಿ ಅಲ್ಲಿನ ಹಿಂದೂಗಳ ಮನದಲ್ಲಿ ಕಾಶಿ ಹಾಗೂ ಅದರಂತಹ ಪುಣ್ಯ ನಗರಿಗಳ ಬಗೆಗಿನ ಪ್ರಜ್ಞೆ ತುಂಬಾ ಪ್ರಬಲವಾಗಿ ಆಳವಾಗಿ ಬೇರೂರಿದೆ ಎಂದರೆ ಅದು ಅತಿಶಯೋಕ್ತಿಯಲ್ಲ! ಇಂತಹ ಅನೇಕ ಸಂಗತಿಗಳನ್ನು 'ಶಿವನಿಗಾಗಿ ಕಾಯುತ್ತ' ಕೃತಿಯು ಪ್ರಜ್ಞಾಪೂರ್ವಕವಾಗಿ ವಿವರಿಸುತ್ತದೆ.

'ಒಂದು ಬಾರಿ ಅದು ಮಂದಿರವಾಗಿತ್ತು ಹಾಗೂ ಅದು ಯಾವತ್ತಿಗೂ ಮಂದಿರವಾಗಿಯೇ ಇರುತ್ತದೆ' ಎಂಬ ಹಿಂದೂಗಳ ಬಲವಾದ ನಂಬಿಕೆ. ಹಿಂದೂ ರಾಜ–ಮಹಾರಾಜರು ಮತ್ತು ಶ್ರೀ ಸಾಮಾನ್ಯರನ್ನು ತಮ್ಮ ಪಾಲಿಗೆ ಅತ್ಯಂತ ಪವಿತ್ರವಾದ ಈ ನಗರವನ್ನು ಮರಳಿ ಪಡೆಯಲು ಬಲಿಷ್ಠ ಹೋರಾಟವನ್ನು ಒಮ್ಮನಸ್ಸಿನಿಂದ ಮುಂದುವರೆಸುವಂತೆ ಮಾಡಿತ್ತು. ಅತ್ಯಂತ ಕ್ರೂರ, ವಿನಾಶಕ ದಾಳಿಗಳ ಮಧ್ಯೆಯೂ ಇವರು ಈ ಪವಿತ್ರ ಕ್ಷೇತ್ರಗಳ ಬಗೆಗಿನ ತಮ್ಮ ಭಕ್ತಿ ಹಾಗೂ ನಂಬಿಕೆಗಳು ಸದಾಕಾಲ ಜ್ವಲಿಸುವಂತೆ ನೋಡಿಕೊಂಡರು ಎಂಬ ಹೃದಯಸ್ಪರ್ಶಿ ಘಟನೆಗಳು, ಐತಿಹಾಸಿಕ ಸಂಗತಿಗಳು ಓದುಗರ ಮನವನ್ನು ಮುಟ್ಟದೇ ಇರಲಾರವು. ತಲೆ ತಲೆಮಾರುಗಳಿಂದ ತಮ್ಮ ಪಾಲಿಗೆ ಮಹತ್ವದ್ದೆನಿಸಿದ್ದ ಕ್ಷೇತ್ರಗಳನ್ನು ಬಿಟ್ಟುಕೊಡಲು ಹಿಂದೂಗಳು ಯಾವ ಕಾರಣಕ್ಕೂ ಸಿದ್ಧರಿರಲಿಲ್ಲ ಹಾಗೂ ಇದಕ್ಕೆ ಕಾರಣವೂ ಇತ್ತು– ಈ ಎಲ್ಲ ಸಂಗತಿಗಳನ್ನು ಅವರ ಹಿರಿಯರು ಅತ್ಯಂತ ಭಕ್ತಿ, ಶ್ರದ್ಧೆ, ಸಮರ್ಪಣಾ ಭಾವಗಳಿಂದ ಹಾಗೂ ಆ ಪುಣ್ಯಕ್ಷೇತ್ರಗಳ ಬಗ್ಗೆ ದಣಿವರಿಯದ ಉತ್ಸಾಹದಿಂದ ತಮ್ಮ ಮುಂದಿನ ತಲೆಮಾರುಗಳಲ್ಲಿ ಬಿತ್ತಿ ಹೋಗಿದ್ದರು.


ಹಾಗೂ ಎಂಥದ್ದೇ ಸಂದರ್ಭದಲ್ಲಿಯೂ ಈ ಕ್ಷೇತ್ರಗಳನ್ನು ಮರಳಿ ಪಡೆಯಲೇಬೇಕೆಂಬ ಜವಾಬ್ದಾರಿಯನ್ನು ಅವರಿಗೆ ನೀಡಿ ಹೋಗಿದ್ದರು. ಇದೆಲ್ಲವನ್ನೂ ಉಲ್ಲೇಖಿಸುವ ವಿಕ್ರಮ್ ಸಂಪತ್, ಕಾಶಿಯ ಮೇಲೆ ಅತ್ಯಂತ ಕ್ರೂರ ದಾಳಿಗಳನ್ನು ಮಾಡಿ ಅದನ್ನು ನಾಶ ಮಾಡಲು ಯತ್ನಿಸಿರಬಹುದು ಆದರೆ ಕಾಶಿ ಹಾಗೂ ಅದರ ಒಡೆಯ ವಿಶ್ವನಾಥನ ಮಹತ್ವ ಹಾಗೂ ಪ್ರಾಮುಖ್ಯತೆಗಳು ಜನಮಾನಸದಲ್ಲಿ, ಸ್ಮರಣೆಗಳಲ್ಲಿ ಹಾಗೂ ಸಾಹಿತ್ಯದಲ್ಲಿ ಯಥಾವತ್ತಾಗಿ ಉಳಿದುಕೊಂಡು ಬಂದಿದೆ ಎಂದು ವಿವರಿಸುತ್ತಾರೆ.

ಅಂದಿನ ರಾಜಕೀಯ ವರ್ಗಗಳ ಮೇಲೆ ನಾರಾಯಣ ಭಟ್ಟರಂತಹ ವಿದ್ವಾಂಸರ ಸಂಜ್ಞಾಪೂರ್ವಕ ಪ್ರಭಾವ; ವಿಶೇಷವಾಗಿ ಮೊಘಲ್ ದೊರೆ ಅಕ್ಬರನ ಆಳ್ವಿಕೆ ಸಮಯದಲ್ಲಿ ಇದ್ದ ಸ್ವಲ್ಪಮಟ್ಟಿನ ಅನುಕೂಲಕರ ವಾತಾವರಣವನ್ನು ಬಳಸಿಕೊಂಡು ರಾಜಾ ತೋದರ್ಮಲ್ ಮಧ್ಯಸ್ಥಿಕೆಯಲ್ಲಿ ಕ್ರಿ.ಶ.1580ರಲ್ಲಿ ಹೇಗೆ ಭವ್ಯ ವಿಶ್ವನಾಥ ದೇಗುಲವನ್ನು ನಿರ್ಮಿಸಲಾಯಿತು ಎಂಬ ಐತಿಹಾಸಿಕ ಘಟನೆಯ ಮೇಲೆ ಈ ಕೃತಿಯು ವಿಶೇಷ ಬೆಳಕು ಚೆಲ್ಲುತ್ತದೆ. ಹಾಗಿದ್ದಾಗ್ಯೂ ಕ್ರಿ.ಶ.1669ರಲ್ಲಿ ಧರ್ಮದ ವಿಚಾರದಲ್ಲಿ ಅತೀವ ಅಂಧಶ್ರದ್ಧೆಯನ್ನು ಹೊಂದಿದ್ದ ಮೊಘಲ್ ದೊರೆ ಔರಂಗಜೇಬನು ಕಾಶಿ ಪುಣ್ಯಕ್ಷೇತ್ರದ ಮೇಲೆ ವಿನಾಶದ ಘೋರ ಅಂತಿಮ ರಣಕಹಳೆಯನ್ನು ಮೊಳಗಿಸುತ್ತಾನೆ. ಅತ್ಯಂತ ನಿಷ್ಕರುಣೆಯಿಂದ ಅವನು ಮಂದಿರವನ್ನು ಕೆಡವುತ್ತಾನೆ. ಮಾತ್ರವಲ್ಲ, ಧ್ವಂಸಗೊಂಡು ಭಗ್ನಾವಶೇಷದ ಸ್ಥಿತಿಯಲ್ಲಿ ನಿಂತಿದ್ದ ದೇವಸ್ಥಾನದ ಪಶ್ಚಿಮ ಭಾಗದ ಗೋಡೆಗಳ ಮೇಲೆ ಗುಮ್ಮಟವನ್ನು ನಿರ್ಮಿಸಿ ಅದನ್ನು ಮಸೀದಿಯೆಂದು ಕರೆಯುತ್ತಾನೆ. ಈಗ ಜ್ಞಾನವಾಪಿ ಮಸೀದಿಯೆಂದು ಕರೆಯಲ್ಪಡುತ್ತಿರುವ ಜಾಗವು ಎಂದೆಂದಿಗೂ ತೀವ್ರತರದ ಸ್ಪರ್ಧೆ, ಚರ್ಚೆಯ ವಿಷಯವಾಗಿಯೇ ಉಳಿದುಬಿಟ್ಟಿತು.

ಸ್ವಾತಂತ್ರ್ಯನಂತರ ಕೂಡ ಈ ಇಡೀ ಸಂಕೀರ್ಣವನ್ನು ಮುಕ್ತಗೊಳಿಸುವ ಪರಿಕಲ್ಪನೆ ಹಿಂದೂ ಜನಮಾನಸದಲ್ಲಿ ಉಳಿದೇ ಇತ್ತು. ವಾರಣಾಸಿಯ ನಾಗರಿಕ ನ್ಯಾಯಾಲಯವು ದೀರ್ಘಕಾಲದಿಂದಲೂ ಇದ್ದ ಈ ಪ್ರಕರಣವನ್ನು ಪುನಃ ಕೈಗೆತ್ತಿಕೊಳ್ಳುವ ಮುನ್ನವೇ 2021ರಲ್ಲಿ ಒಂದು ಹೊಸ ಪ್ರಕರಣವನ್ನು ದಾಖಲಿಸಲಾಯಿತು. ಈ ಹಿನ್ನೆಲೆಯಲ್ಲಿ ಜ್ಞಾನವಾಪಿಯ ಸತ್ಯ ಸಂಗತಿಗಳನ್ನು ಅರಿಯಲು ಭಾರತೀಯ ಪುರಾತತ್ವ ಇಲಾಖೆಯು ಜನವರಿ 2024ರಲ್ಲಿ ವಿಸ್ತೃತ ಸಮೀಕ್ಷೆಯನ್ನು ಕೈಗೊಂಡಿತು. ಈ ಸಮೀಕ್ಷೆಯ ವರದಿಯೇ 'ಶಿವನಿಗಾಗಿ ಕಾಯುತ್ತ' ಕೃತಿಯ ಮುಖ್ಯ ವಸ್ತು ವಿಷಯವಾಗಿದೆ.

ಭಾರತೀಯ ನಂಬಿಕೆಗಳು ಹಾಗೂ ನಾಗರಿಕತೆಯ ಪಾವಿತ್ರ್ಯತೆಯ ಬಗೆಗೆ ಸಾಮಾನ್ಯವಾಗಿ ನೀಡಬೇಕಾದ ಗೌರವದ ಬಗ್ಗೆ ವಿಕ್ರಮ್ ಸಂಪತ್ ಬರೆಯುತ್ತಾರೆ. ನಂತರದ ಕಾಲಘಟ್ಟದಲ್ಲಿ ರಾಣಿ ಅಹಲ್ಯಾಬಾಯಿಯು ಕಟ್ಟಿಸಿದ ದೇವಸ್ಥಾನಕ್ಕೆ ಕ್ರಿ.ಶ.1839ರಲ್ಲಿ ಪಂಜಾಬಿ ಸಿಖ್ ರಾಜ ರಣ್ಜಿತ್ ಸಿಂಗ್‌ನು ದೇವಸ್ಥಾನದ ಗೋಪುರಗಳಿಗೆ ಸ್ವರ್ಣಖಚಿತ ಕವಚಗಳನ್ನು ಉಡುಗೊರೆಯಾಗಿ ನೀಡಿದ ಘಟನೆಯನ್ನು ಉದಾಹರಣೆಯಾಗಿ ನೀಡುತ್ತಾರೆ. ಪಂಜಾಬ್ ಇರಲಿ ಅಥವಾ ಮಹಾರಾಷ್ಟ್ರವೇ ಇರಲಿ; ಹಿಂದೂ ಆಗಿರಲಿ ಅಥವಾ ಸಿಖ್ ಆಗಿರಲಿ; ಪುರುಷನಾಗಿರಲಿ ಅಥವಾ ಸ್ತ್ರೀಯೇ ಆಗಿರಲಿ; ಹದಿನೇಳನೇ ಶತಮಾನವಾಗಲಿ ಅಥವಾ ಹದಿನೆಂಟನೇ ಶತಮಾನವೇ ಇರಲಿ ಕಾಶಿಯ ದೇವಸ್ಥಾನವನ್ನು ನಿರ್ಮೂಲನೆಗೊಳಿಸಲು ಮಾಡಿದ ಎಲ್ಲ ವಿಧ್ವಂಸಕ ಕೃತ್ಯಗಳ ಹೊರತಾಗಿಯೂ ಕಾಶಿ ವಿಶ್ವನಾಥನ (ಹಾಗೂ ಇತರೆ ಪುಣ್ಯಕ್ಷೇತ್ರಗಳ) ಮಹತ್ವ ಹಾಗೂ ಪ್ರಾಮುಖ್ಯತೆ ಸದಾಕಾಲವೂ ಹಿಂದೂಗಳ ಸ್ಮೃತಿಯಲ್ಲಿ ಉಳಿದಿದೆ. ಅವುಗಳನ್ನು ಮರಳಿ ಪಡೆದುಕೊಳ್ಳುವುದು ಹಾಗೂ ನಮ್ಮ ಪೂರ್ವಜರ ಮೇಲಾದ ಐತಿಹಾಸಿಕ ತಪ್ಪುಗಳಿಗೆ ನ್ಯಾಯ ಒದಗಿಸುವುದು ಪ್ರಬುದ್ಧ ಹಾಗೂ ಇಂದಿನ ಪ್ರಜಾಪ್ರಭುತ್ವದ ಮುಖ್ಯ ಲಕ್ಷಣವಾಗಬೇಕು.

ಕಾಶಿ, ಮಥುರಾದಂತಹ ಪಾವಿತ್ರ್ಯತೆಯೇ ಪ್ರಮುಖವಾಗಿರುವ ಪುಣ್ಯ ನಗರಿಗಳು ವಿಷಮ ರಾಜಕೀಯ, ಸಾಮಾಜಿಕ ಅಶಾಂತಿ, ಗೊಂದಲಗಳ ಆಟದ ಮೈದಾನವಾಗದೇ; 'ಕೊಡು–ತಗೋ ಎಂಬ ಔದಾರ್ಯದ ಪ್ರತೀಕವಾಗಿ, ದೊಡ್ಡ ಮಟ್ಟದ ರಾಷ್ಟ್ರೈಕ್ಯತೆ ಹಾಗೂ ಸಾಮರಸ್ಯದ ಸಾಕ್ಷಿಪ್ರಜ್ಞೆಯಾಗಬೇಕಾದ ಅಗತ್ಯವನ್ನು ಇಂದು ನಾವು ಅಪೇಕ್ಷಿಸಬೇಕಿದೆ.



ಇಂಗ್ಲೀಷ್ ಪುಸ್ತಕ: 'ವೇಟಿಂಗ್ ಫಾರ್ ಶಿವ: ಅನ್‌ಅರ್ಥಿಂಗ್ ದಿ ಟ್ರುಥ್ ಆಫ್ ಕಾಶೀಸ್ ಜ್ಞಾನವಾಪಿ'
ಲೇಖಕರು: ಡಾ.ವಿಕ್ರಮ್ ಸಂಪತ್
ಪ್ರಕಾಶನ ಸಂಸ್ಥೆ: ಬ್ಲೂಓನ್ ಇಂಕ್
ಕನ್ನಡ ಅವತರಣಿಕೆ: 'ಶಿವನಿಗಾಗಿ ಕಾಯುತ್ತ: ಕಾಶಿ ಜ್ಞಾನವಾಪಿಯ ಸತ್ಯದ ಅನಾವರಣ'
ಅನುವಾದಕರು: ಪ್ರೊ.ಜಿ.ಎಲ್.ಶೇಖರ್, ನರೇಂದ್ರ ಕುಮಾರ್ ಎಸ್.ಎಸ್., ಶಶಾಂಕ್ ಪರಾಶರ ಹಾಗೂ ಶ್ರೀಗೌರಿ ಎಸ್.ಜೋಶಿ
ಪ್ರಕಾಶನ ಸಂಸ್ಥೆ: ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನ
ಪುಟಗಳು: 352, ಕೃತಿಯ ಬೆಲೆ: ರೂ.475.



ಖ್ಯಾತ ಇತಿಹಾಸ ತಜ್ಞ ಡಾ.ವಿಕ್ರಮ್ ಸಂಪತ್ ಬರೆದಿರುವ 'ವೇಟಿಂಗ್ ಫಾರ್ ಶಿವ: ಅನ್‌ಅರ್ಥಿಂಗ್ ದ ಟ್ರುಥ್ ಆಫ್ ಕಾಶೀಸ್ ಜ್ಞಾನವಾಪಿ' ಕೃತಿಯ ಕನ್ನಡ ಅನುವಾದ 'ಶಿವನಿಗಾಗಿ ಕಾಯುತ್ತ; ಕಾಶಿ ಜ್ಞಾನವಾಪಿಯ ಸತ್ಯದ ಅನಾವರಣ' ಕೃತಿ ಇತ್ತೀಚೆಗೆ ಬೆಂಗಳೂರಿನಲ್ಲಿ ಲೋಕಾರ್ಪಣೆಗೊಂಡಿತು. ಕೃತಿಯನ್ನು ಖ್ಯಾತ ಪತ್ರಕರ್ತ, ಏಷ್ಯಾನೆಟ್ ಸುವರ್ಣ ನ್ಯೂಸ್‌ನ ಪ್ರಧಾನ ಸಂಪಾದಕ ಅಜಿತ್ ಹನುಮಕ್ಕನವರ್ ಬಿಡುಗಡೆಗೊಳಿಸಿದರು. ಚಿತ್ರದಲ್ಲಿ (ಎಡದಿಂದ) ಶ್ರೀಗೌರಿ ಎಸ್.ಜೋಶಿ, ಶಶಾಂಕ್ ಪರಾಶರ, ಪ್ರೊ.ಜಿ.ಎಲ್.ಶೇಖರ್, ಡಾ.ವಿಕ್ರಮ್ ಸಂಪತ್, ಅಜಿತ್ ಹನುಮಕ್ಕನವರ್, ನರೇಂದ್ರಕುಮಾರ್ ಎಸ್.ಎಸ್., ಸುಬ್ರಮಣ್ಯ ಎಂ.ಎ. ಇದ್ದಾರೆ.

ಮೈಸೂರಲ್ಲಿ ಸೆ.21, 22ರಂದು ಸೊಪ್ಪಿನ ಮೇಳ



ಮೈಸೂರು, ಸೆ.19– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗದಿಂದ ಸೆ.21, 22ರಂದು ಸೊಪ್ಪಿನ ಮೇಳವನ್ನು ಏರ್ಪಡಿಸಲಾಗುತ್ತಿದೆ.

ಸಹಜ ಸಮೃದ್ಧ ಆಯೋಜಿಸಿರುವ ಮೇಳದಲ್ಲಿ ನೂರಕ್ಕೂ ಹೆಚ್ಚಿನ ಸೊಪ್ಪುಗಳು ಪ್ರದರ್ಶನದಲ್ಲಿರಲಿವೆ. ಕರ್ನಾಟಕದ ವಿವಿಧ ಭಾಗದ ರೈತ ಗುಂಪುಗಳು ಬಗೆ ಬಗೆಯ ಸೊಪ್ಪು ಮತ್ತು ಸೊಪ್ಪಿನ ಮೌಲ್ಯವರ್ಧಿತ ಪದಾರ್ಥಗಳನ್ನು ಮಾರಾಟಕ್ಕೆ ತರಲಿವೆ. ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಮೇಳವಿರುತ್ತದೆ.

ದಂಟು, ರಾಜಗೀರ, ಹರಿವೆ, ಅಣ್ಣೇಸೊಪ್ಪು, ಕಿರಿಕಸಾಲಿ, ಸೊಕ್ಕತ್ತಿ, ಬಸಳೆ ಹೀಗೆ ನೂರಾರು ಬಗೆಯ ಸೊಪ್ಪಿನ ತಳಿಗಳಿವೆ. ನಿಸರ್ಗದತ್ತವಾಗಿ ಸಿಗುವ ಸಾಗುವಳಿ ಮಾಡದ 'ಕಳೆ' ಎಂದು ನಿರ್ಲಕ್ಷ್ಯಕ್ಕೆ ಗುರಿಯಾದ ಸೊಪ್ಪಿನ ತಳಿಗಳು ಬಹಳಷ್ಟಿವೆ. ಸೊಪ್ಪು ಪರಿಪೂರ್ಣ ಆಹಾರ; ದೇಹಕ್ಕೆ ಬೇಕಾದ ಪೋಷಣೆ ಹಾಗೂ ಚೈತನ್ಯವನ್ನು ಕೊಡುವಂಥದು. ರಕ್ತಹೀನತೆ, ಅಪೌಷ್ಟಿಕತೆ ಮತ್ತು ಇತರೆ ಆರೋಗ್ಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಸೊಪ್ಪಿನ ಪಾತ್ರ ಹಿರಿದು. ಹೆಗ್ಗಡದೇವನಕೋಟೆ, ಪಿರಿಯಾಪಟ್ಟಣ, ಕೊಳ್ಳೆಗಾಲ, ಕನಕಪುರ, ಕುಂದಗೋಳ, ಸವದತ್ತಿ ಮತ್ತು ಬೆಂಗಳೂರು ಗ್ರಾಮಾಂತರ ಭಾಗಗಳಿಂದ ಬರಲಿರುವ ಸೊಪ್ಪು ಬೆಳೆಗಾರರು ದಿನಬಳಕೆಯ ಸೊಪ್ಪು, ಔಷಧೀಯ ಸೊಪ್ಪು, ಸಾಗುವಳಿ ಮಾಡದ ನಿಸರ್ಗದತ್ತ ಸೊಪ್ಪು, ಕಾಡಿನ ಸೊಪ್ಪು, ಬಳ್ಳಿ ಸೊಪ್ಪು, ಮರಾಧಾರಿತ ಸೊಪ್ಪು ಮತ್ತು ವಿದೇಶಿ ಸೊಪ್ಪುಗಳನ್ನು ಮಾರಾಟಕ್ಕೆ ತರಲಿದ್ದಾರೆ.

ಸಾವಯವ ಸೊಪ್ಪಿನ ಸಾಗುವಳಿ ಮತ್ತು ಸೊಪ್ಪಿನ ಮೌಲ್ಯವರ್ಧನೆ ಅವಕಾಶಗಳ ಬಗ್ಗೆ ಶನಿವಾರ ಆತ್ಮ ಯೋಜನೆಯಡಿ ಕಿಸಾನ್ ಗೋಷ್ಠಿ ಏರ್ಪಡಿಸಲಾಗಿದೆ. ವಿಷಮುಕ್ತವಾಗಿ ಸೊಪ್ಪಿನ ಕೃಷಿ ಮಾಡುವ ಬಗೆ, ಲೆಟ್ಯುಸ್, ಕಾಲೆಯಂಥ ವಿದೇಶಿ ಸೊಪ್ಪಿನ ತಳಿಗಳನ್ನು ಬೆಳೆಸುವ ಬಗೆ, ದೇಸಿ ಸೊಪ್ಪಿನ ತಳಿಗಳ ಬೀಜೋತ್ಪಾದನೆ, ಮತ್ತು ಆರೋಗ್ಯಕರ ಮೈಕ್ರೋ ಗ್ರೀನ್‌ನ ಉತ್ಪಾದನೆ ಬಗ್ಗೆ ತಜ್ಞರು ಮಾಹಿತಿ ಹಂಚಿಕೊಳ್ಳಲಿದ್ದಾರೆ. ವಿದ್ಯುತ್ ಇಲ್ಲದೆ ಸೊಪ್ಪು ಸಂಗ್ರಹಿಸಿಡುವ 'ಸಬ್ ಜಿ ಕೂಲರ್'ನ ಪ್ರಾತ್ಯಕ್ಷಿತೆ ಇರುತ್ತದೆ. ಬೆಂಗಳೂರು ನಗರಕ್ಕೆ ಸಾವಯವ ಸೊಪ್ಪು ಮತ್ತು ತರಕಾರಿ ಸರಬರಾಜು ಮಾಡಿ ವಾರ್ಷಿಕ ಹತ್ತು ಕೋಟಿ ರೂ. ವಹಿವಾಟು ಮಾಡುತ್ತಿರುವ ಸಹಜ ಆರ್ಗಾನಿಕ್ಸ್ ವಿಷಮುಕ್ತ ಸೊಪ್ಪು ಮತ್ತು ತರಕಾರಿ ಬೆಳೆಯುವ ರೈತರ ಜೊತೆ ಒಪ್ಪಂದ ಮಾಡಿಕೊಳ್ಳಲಿದೆ. ಮೈಸೂರು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಮೇಳವನ್ನು ಉದ್ಘಾಟಿಸಲಿದ್ದಾರೆ. ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಮಂಜುನಾಥ ಅಂಗಡಿ 'ಸಕತ್ ಸೊಪ್ಪು' ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಸುತ್ತೂರಿನ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ಬಿ.ಎನ್.ಜ್ಞಾನೇಶ್, ಸಹಜ ಆರ್ಗಾನಿಕ್ಸ್‌ನ ಕಾರ್ಯನಿರ್ವಹಣಾಧಿಕಾರಿ ಸೋಮೇಶ್, ಜೇನು ಕುರುಬ ಸಮುದಾಯದ ಪಾರ್ವತಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ಸುಹಾಸ್ –9482115495 ಅಥವಾ ಕೋಮಲ್ –9880908608 ಸಂಪರ್ಕಿಸಬಹುದು.

ಸೊಪ್ಪು ಸವಿಯುವ ಸದವಕಾಶ....

ನೈಸರ್ಗಿಕವಾಗಿ ಬೆಳೆಯುವ ಸೀಗೆಸೊಪ್ಪು, ಅಣ್ಣೇ ಸೊಪ್ಪು, ಸೊಕ್ಕತ್ತಿ ಮೊದಲಾದ ಸೊಪ್ಪುಗಳು, ಲೆಟ್ಯೂಸ್, ಕಾಲೆ, ಅಸ್ಪಾರಗಸ್‌ನಂತ ಹೊಸ ತಲೆಮಾರಿನ ಸೊಪ್ಪುಗಳು ಮಾರಾಟಕ್ಕೆ ಬರಲಿವೆ. ಹೆಗ್ಗಡದೇವನಕೋಟೆಯ ಹಳ್ಳಿಗರು 'ಬೆರಕೆ ಸೊಪ್ಪನ್ನು' ಮೇಳದಲ್ಲಿ ಪರಿಚಯಿಸಲಿದ್ದಾರೆ. ಸೀಗೆ ಸೊಪ್ಪಿನ ಉಪ್ಸಾರು, ಮುದ್ದೆ–ಅಣ್ಣೇಸೊಪ್ಪಿನ ಸಾರು, ಹಲಸಿನ ಎಲೆಯ ಕೊಟ್ಟೆ ಕಡುಬು ಮೊದಲಾದ ಅಡುಗೆಗಳು ಸವಿಯಲು ಸಿಗಲಿವೆ. ಸಕತ್ ಸೊಪ್ಪು ಬಳಗ ಸೊಪ್ಪಿನ ಪಕೋಡ, ತಂಬುಳಿ ಮತ್ತು ಪಲಾವ್ ಉಣಬಡಿಸಲಿದೆ. ಸುಜಯ ಸಂಸ್ಥೆಯವರು ಔಷಧೀಯ ಸೊಪ್ಪುಗಳ ಮಹತ್ವವನ್ನು ಸಾರುವ 'ಹಸಿರು ಹೊನ್ನು' ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಸೊಪ್ಪಿನ ಅಡುಗೆ ಸ್ಪರ್ಧೆ

ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಆಶ್ರಯದಲ್ಲಿ ಸೊಪ್ಪಿನ ಅಡುಗೆ ಸ್ಪರ್ಧೆ ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವವರು, ವಿವಿಧ ಬಗೆಯ ಸೊಪ್ಪುಗಳನ್ನು ಬಳಸಿ ತಯಾರಿಸಿದ ಸಾಂಪ್ರದಾಯಿಕ ಅಥವಾ ಹೊಸ ಬಗೆಯ ಅಡುಗೆಗಳನ್ನು ತಯಾರಿಸಿ ಸೆ.22ರಂದು ಮಧ್ಯಾಹ್ನ 12 ಘಂಟೆಗೆ ಮೇಳಕ್ಕೆ ತರಬಹುದು. ನಿರ್ಲಕ್ಷ್ಯಕ್ಕೆ ಗುರಿಯಾದ ಮತ್ತು ಹೆಚ್ಚು ಪ್ರಚಲಿತದಲ್ಲಿಲ್ಲದ ಸೊಪ್ಪುಗಳನ್ನು ಬಳಸಿ ಮಾಡಿದ ಅಡುಗೆಗಳಿಗೆ ವಿಶೇಷ ಪ್ರಾಶಸ್ತ್ಯ ನೀಡಲಾಗುವುದು. ವಿಜೇತರಿಗೆ ನಗದು ಬಹುಮಾನ ಮತ್ತು ಪ್ರಮಾಣ ಪತ್ರ ನೀಡಲಾಗುತ್ತದೆ. 5ರಿಂದ 12 ವರ್ಷದ ಮಕ್ಕಳಿಗಾಗಿ ಭಾನುವಾರ ಬೆಳಗ್ಗೆ 10 ಗಂಟೆಗೆ 'ನಾ ಕಂಡಂತೆ ಸೊಪ್ಪು' ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಚಾಮುಂಡಿಬೆಟ್ಟದ ನಂದಿ ಪ್ರತಿಮೆ ಮಾರ್ಗ ಸಮೀಪ ವಿದ್ಯುತ್ ದೀಪಾಲಂಕಾರದಲ್ಲಿ ಮೂಡುತ್ತಿದೆ 'ಸುಸ್ವಾಗತ' 'ವೆಲ್‌ಕಮ್'

● ಪ್ರತಿವರ್ಷದಂತೆ ಬೆಟ್ಟದಲ್ಲಿ ಬಲ್ಬ್‌ಗಳ ವಿನ್ಯಾಸ ಕಾರ್ಯ ಚುರುಕು ● ಸುಮಾರು 4,500 ಎಲ್‌ಇಡಿ ಬಲ್ಬ್‌ಗಳ ಬಳಕೆ ● ನಗರದಲ್ಲಿ ಗೋಚರಿಸಲಿದೆ ವಾರ್ಮ್ ವೈಟ್ ಬೆಳಕು





ಬೆಟ್ಟದಲ್ಲಿ ಈ ಹಿಂದಿನ ದಸರಾ ಮಹೋತ್ಸವ ಸಂದರ್ಭದಲ್ಲಿ ವಿನ್ಯಾಸಗೊಳಿಸಿದ್ದ ಸುಸ್ವಾಗತ ಮತ್ತು ವೆಲ್‌ಕಮ್ ಚಿತ್ರಗಳು (ಸಂಗ್ರಹ ಚಿತ್ರ)

ಮೈಸೂರು,ಸೆ.19(ಪಿಎಂ)– ವಿದ್ಯುತ್ ದೀಪಾಲಂಕಾರದ ಬೆಳಕಿನ ಚಿತ್ತಾರ–ಚಮತ್ಕಾರವೂ ಮೈಸೂರು ದಸರಾದ ಆಕರ್ಷಣೆಯಲ್ಲಿ ಪ್ರಮುಖ. ಪ್ರವಾಸಿಗರು, ಮೈಸೂರಿನ ನಾಗರಿಕರು ನಗರದಲ್ಲಿ ಮೂಡಿ ಬರುವ ವಿದ್ಯುತ್ ಬೆಳಕಿನ ಮೋಡಿಗೆ ಮನ ಸೋತು ವಿದ್ಯುತ್ ಬೆಳಕಿನಲ್ಲಿ ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಿಸುತ್ತಾರೆ.

ಅಂತೆಯೇ ಪ್ರತಿವರ್ಷ ದಸರಾದಲ್ಲಿ ಚಾಮುಂಡಿ ಬೆಟ್ಟದ ನಂದಿ ಪ್ರತಿಮೆ ಮಾರ್ಗದ ಸಮೀಪ ಮೂಡಿಸುವ 'ಕನ್ನಡ'ದ 'ಸುಸ್ವಾಗತ' ಮತ್ತು 'ಇಂಗ್ಲಿಷ್'ನ 'ವೆಲ್‌ಕಮ್ (welcome)' ಎನ್ನುವ ಪದಗಳ ವಿನ್ಯಾಸದ ವಿದ್ಯುತ್ ದೀಪಾಲಂಕಾರವೂ ಪ್ರಕಾಶಮಾನವಾಗಿ ಬೆಳಗುವ ಮೂಲಕ ಮೈಸೂರು ನಗರದಲ್ಲಿ ಸಂಚರಿಸುವವರ ಗಮನ ಸೆಳೆದು ಪುಳಕವಿಡಲಿದೆ. ಸಾಂಪ್ರದಾಯಿಕವಾಗಿ ಪ್ರತಿವರ್ಷ ಇದು ಮೂಡಿಬರುವ ಮೂಲಕ ಪ್ರವಾಸಿಗರನ್ನು ದಸರಾ ಸಂಭ್ರಮಕ್ಕೆ ಆಹ್ವಾನಿಸುತ್ತದೆ.

ಈಗಾಗಲೇ ವಿದ್ಯುತ್ ದೀಪಗಳ ವಿನ್ಯಾಸದಲ್ಲಿ 'ಸುಸ್ವಾಗತ' ಮತ್ತು 'ವೆಲ್‌ಕಮ್' ಪದಗಳ ಮೂಡಿಸುವ ಕಾರ್ಯ ಭರದಿಂದ ಸಾಗಿದೆ. ಈ ಎರಡೂ ಪದಗಳನ್ನು ವಿದ್ಯುತ್ ಬೆಳಕಿನಲ್ಲಿ ಅನಾವರಣಗೊಳಿಸಲು ಸುಮಾರು 4,500 ಎಲ್‌ಇಡಿ ಬಲ್ಬ್‌ಗಳನ್ನು ಬಳಸಲಾಗುತ್ತಿದೆ. ಅಷ್ಟೇ ಸಂಖ್ಯೆಯ ಹೋಲ್ಡರ್ ಬಳಕೆ ಮಾಡಬೇಕಿದೆ. ಪ್ರತಿ ಬಲ್ಬ್ 9 ವ್ಯಾಟ್ ಇರಲಿದ್ದು, ವಾರ್ಮ್ ವೈಟ್ ಬೆಳಕು ಸೂಸಲಿವೆ. ಪ್ರತಿ ಅಕ್ಷರಗಳು 90 ಅಡಿ ಎತ್ತರ ಇರಲಿದ್ದು, ಅಂತೆಯೇ ಪ್ರತಿ ಅಕ್ಷರದ ಅಗಲ 20 ಅಡಿ ಇರಲಿವೆ. ಐದು ಸೆಕೆಂಡ್‌ಗಳ ಅಂತರದಲ್ಲಿ ಒಂದಾದ ಮೇಲೆ ಒಂದರಂತೆ ಸುಸ್ವಾಗತ ಮತ್ತು ವೆಲ್‌ಕಮ್ ದೀಪಗಳು 10 ಸೆಕೆಂಡ್ ಕಾಲ ಬೆಳಗಲಿವೆ. ಆ ಮೂಲಕ ನವರಾತ್ರಿಯಲ್ಲಿ ನಗರದ ರಸ್ತೆಗಳಲ್ಲಿ ಸಂಚರಿಸುವವರ ಗಮನ ಸೆಳೆದು ರೋಮಾಂಚನ ಉಂಟು ಮಾಡಲಿವೆ. ನಂದಿ ಪ್ರತಿಮೆ ಮಾರ್ಗದ ಸಮೀಪದ ಈ ವಿದ್ಯುತ್ ದೀಪಾಲಂಕಾರ ಕಾರ್ಯವನ್ನು ಸೆಸ್ಕ್‌ನಿಂದ ಸನ್ ರೈಸ್ ಎಲೆಕ್ಟ್ರಿಕಲ್ ಮಾಲೀಕ ಹುಮಾಯೂನ್ ಷರೀಫ್, ಟೆಂಡರ್ ಪಡೆದಿದ್ದು, ಅವರ ಕಾರ್ಮಿಕರು ಕಾರ್ಯ ಚುರುಕುಗೊಳಿಸಿದ್ದಾರೆ. ಗುರುವಾರ ಸ್ಥಳದಲ್ಲಿ ಜಿಐ ವೈರ್‌ಗೆ ವೈರ್ ಮತ್ತು ಬಲ್ಬ್‌ಗಳ ಅಳವಡಿಕೆ ಕಾರ್ಯದಲ್ಲಿ ನಿರತರಾಗಿದ್ದ ಕಾರ್ಮಿಕರು, ಈ ಕಾರ್ಯ ಪೂರ್ಣಗೊಳಿಸಲು ಸುಮಾರು 50 ಕಾಯಿಲ್ ವಿದ್ಯುತ್ ವೈರ್ (ಸುರಳಿ) ಬೇಕಾಗುತ್ತದೆ. ಪ್ರತಿವರ್ಷ ಸುಮಾರು 15 ದಿನಗಳ ಕಾಲ ಕೆಲಸ ಮಾಡುತ್ತೇವೆ. ಈಗಾಗಲೇ ಶೇ.50ರಷ್ಟು ಕೆಲಸ ಪೂರ್ಣಗೊಂಡಿದ್ದು, ನಾಳೆಯಿಂದ ಇನ್ನು ಹೆಚ್ಚಿನ ಕಾರ್ಮಿಕರು ನಮ್ಮೊಂದಿಗೆ ಸೇರ್ಪಡೆಯಾಗುವ ಮೂಲಕ ಕೆಲಸವು ಮತ್ತಷ್ಟು ಚುರುಕುಗೊಳ್ಳಲಿದೆ ಎಂದು ತಿಳಿಸಿದರು.



ಚಾಮುಂಡಿಬೆಟ್ಟದ ನಂದಿ ಮಾರ್ಗ ಸಮೀಪ ಗುರುವಾರ ಕಾರ್ಯನಿರತರಾಗಿದ್ದ ಕಾರ್ಮಿಕರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಹುಮಾಯೂನ್ ಷರೀಫ್, ಕಳೆದ 20 ವರ್ಷಗಳಿಂದ ಸೆಸ್ಕ್‌ನಿಂದ ಇದರ ಟೆಂಡರ್ ಪಡೆಯುತ್ತಿದ್ದೇನೆ. ಸುಸ್ವಾಗತ ಮತ್ತು ವೆಲ್‌ಕಮ್ ಎರಡೂ ಸೇರಿದಂತೆ ಸುಮಾರು 4,500 ಬಲ್ಬ್‌ಗಳ ಅಗತ್ಯವಿದೆ. ಕಳೆದ ನಾಲ್ಕು ವರ್ಷಗಳಿಂದ ಎಲ್‌ಇಡಿ ಬಲ್ಬ್‌ಗಳನ್ನು ಬಳಸಲಾಗುತ್ತಿದೆ. ಸೆ.15ರಿಂದ ಕೆಲಸ ಪ್ರಾರಂಭಿಸಿದ್ದು, ಅ.1ರಂದು ಪ್ರಾಯೋಗಿಕವಾಗಿ ಸೆಸ್ಕ್ ಅಧಿಕಾರಿಗಳ ಎದುರು ಪ್ರದರ್ಶಿಸಬೇಕಿದೆ. ಅ.21ರವರೆಗೆ ಈ ಎರಡೂ ವಿದ್ಯುತ್ ದೀಪಗಳ ವಿನ್ಯಾಸವು ಮೈಸೂರಿನ ಜನತೆ ಸೇರಿದಂತೆ ಪ್ರವಾಸಿಗರನ್ನು ಆಕರ್ಷಿಸಲಿವೆ ಎಂದು ಹೇಳಿದರು.

ಈ ವಿದ್ಯುತ್ ದೀಪಾಲಂಕಾರವು ಅ.1ರಿಂದ 21ರವರೆಗೆ ರಾತ್ರಿ 7ರಿಂದ 9 ಗಂಟೆಯವರೆಗೆ ಆನ್ ಆಗಿದ್ದು, ಬೆಳಕಿನ ಚಮತ್ಕಾರವನ್ನು ಸಾರ್ವಜನಿಕರ ಕಣ್ಮುಂದೆ ತರಲಿದೆ. ಮೈಸೂರು ನಗರದಲ್ಲಿ ಕಂಗೊಳಿಸುವ ವಿದ್ಯುತ್ ದೀಪಾಲಂಕಾರ, ಬೆಟ್ಟದ ಮೇಲಿನಿಂದ ಕಂಡುಬರುವ ಈ ಮತ್ತೊಂದು ವಿನೂತನ ವಿದ್ಯುತ್ ದೀಪಗಳ ಶೃಂಗಾರದೊಂದಿಗೆ ನೋಡುಗರ ಕಣ್ಣಿಗೆ ಹಬ್ಬ ಉಂಟು ಮಾಡಲಿದೆ. ಒಟ್ಟಾರೆ ದಸರಾ ಬೆಳಕಿನ ಉತ್ಸವವೂ ಆಗಿದೆ.

'ಕಿರು ಸ್ತಬ್ಧಚಿತ್ರ' ಸ್ಪರ್ಧೆಯಲ್ಲಿ ಮೂರು ಆಯ್ಕೆ

ಬಹುಮಾನ ವಿಜೇತ ಸ್ತಬ್ಧ ಚಿತ್ರ ಜಂಬೂ ಸವಾರಿಗೆ ಅಣಿಗೊಳಿಸುವ ಚಿಂತನೆ



ಕಿರು ಸ್ತಬ್ಧ ಚಿತ್ರ ಸ್ಪರ್ಧೆಯಲ್ಲಿ ಅಂತಿಮ ಕಣದಲ್ಲಿರುವ 'ಮೈಸೂರಿನ ಜಾತ್ರೆಗಳ ಸೊಬಗು' ಶೀರ್ಷಿಕೆಯ ಸ್ತಬ್ಧ ಚಿತ್ರ

ಮೈಸೂರು, ಸೆ.19(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅತ್ಯಾಕರ್ಷಣೆಯಾದ ಜಂಬೂ ಸವಾರಿಯಲ್ಲಿ ಸಾಗುವ ಸ್ತಬ್ಧ ಚಿತ್ರಗಳಲ್ಲಿ ಹೊಸತನ ಅಳವಡಿಸಿಕೊಳ್ಳಲು ನಡೆಸಿದ 'ಕಿರು ಸ್ತಬ್ಧ ಚಿತ್ರ' ತಯಾರಿಕೆ ಸ್ಪರ್ಧೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಅಂತಿಮ ಕಣದಲ್ಲಿ ಮೂರು ಮನಮೋಹಕ ಸ್ತಬ್ಧ ಚಿತ್ರಗಳಿವೆ...!

ದಸರಾ ಸ್ತಬ್ಧಚಿತ್ರ ಉಪ ಸಮಿತಿ ಮೊದಲ ಬಾರಿಗೆ ನಡೆಸಿದ 'ಕಿರು ಸ್ತಬ್ಧ ಚಿತ್ರ' ನೊಂದಣಿಯಾದ 8 ಮಂದಿಯಲ್ಲಿ ಕಿರು ಸ್ತಬ್ಧಚಿತ್ರ ರಚಿಸಿ ನೀಡಿದವರು 5 ಮಂದಿ ಮಾತ್ರ, ಅದರಲ್ಲೂ ಮೂವರು ರಚಿಸಿರುವ ಕಿರು ಸ್ತಬ್ಧ ಚಿತ್ರಗಳು ಆಕರ್ಷಕವಾಗಿದ್ದು, ಯಾವುದಕ್ಕೆ ಮೊದಲ ಬಹುಮಾನ ಲಭಿಸಲಿದೆ ಎಂಬುದನ್ನು ಕಾದು ನೋಡಬೇಕಿದೆ. 'ಮೈಸೂರಿನ ಜಾತ್ರೆಗಳ ಸೊಬಗು' ಶೀರ್ಷಿಕೆಯಲ್ಲಿ ಚಾಮರಾಜನಗರದ ಎಸ್.ಮಧುಸೂದನ್ ರಚಿಸಿರುವ ಸ್ತಬ್ಧ ಚಿತ್ರದಲ್ಲಿ ನಂಜನಗೂಡು ನಂಜುಂಡೇಶ್ವರ ಜಾತ್ರೆ, ಸುತ್ತೂರು ಜಾತ್ರೆ, ಚುಂಚನಕಟ್ಟೆ ಜಾತ್ರೆ ಹಾಗೂ ಮೈಸೂರು ದಸರಾ ಸೇರಿದಂತೆ ಜಿಲ್ಲೆಯಾದ್ಯಂತ ನಡೆಯುವ ಹಬ್ಬ–ಜಾತ್ರೆಗಳ ವೈಭವವನ್ನು ಬಿಂಬಿಸಲಾಗಿದೆ. ಚಾಮುಂಡಿಬೆಟ್ಟ ವಿಹಂಗಮ ನೋಟದಂತೆ ಸ್ತಬ್ಧಚಿತ್ರ ರಚಿಸಲಾಗಿದ್ದು, ಚಾಮುಂಡೇಶ್ವರಿ ದೇವಸ್ಥಾನ, ಭಕ್ತ ಸಮೂಹವನ್ನು ಕಾಣಬಹುದಾಗಿದೆ.

ಹಾಗೆಯೇ ದೊಡ್ಡರಸಿನಕೆರೆ ಶಿವಕುಮಾರ್ ವಿವಿಧತೆಯಲ್ಲಿ ಏಕತೆ ಸಾರುವ ಸರ್ವಧರ್ಮ ಸಮಾನತೆಯ ಪ್ರತಿಬಿಂಬ ದಂತಿರುವ ಸ್ತಬ್ಧ ಚಿತ್ರ ರಚಿಸಿದರೆ, ಶಂಕರ್ ಗುರು ಅವರ ಅಯೋಧ್ಯೆ ರಾಮ ಮಂದಿರ ಮಾದರಿಯ ಸ್ತಬ್ಧ ಚಿತ್ರ ನೋಡಲು ಸುಂದರವಾಗಿದ್ದು, ಅಂತಿಮ ಕಣದಲ್ಲಿವೆ.

ಸೆ.21 ವಿಜೇತರ ಘೋಷಣೆ...

ದಸರಾ ಸ್ತಬ್ಧ ಚಿತ್ರ ಉಪಸಮಿತಿ ಮೊದಲ ಬಾರಿಗೆ ನಡೆಸಿದ 'ಕಿರು ಸ್ತಬ್ಧಚಿತ್ರ ಸ್ಪರ್ಧೆ' ಸಾರ್ವಜನಿಕರ ಪ್ರತಿಕ್ರಿಯೆ ನಿರಸವಾಗಿದ್ದರೂ. ಅಂತಿಮ ಕಣದಲ್ಲಿರುವ ಮೂರು ಸ್ತಬ್ಧ ಚಿತ್ರಗಳು ಆಕರ್ಷಕ ವಿನ್ಯಾಸದಿಂದ ಕೂಡಿವೆ. ಸೆ.21 ರಂದು ವಿಜೇತರನ್ನು ಘೋಷಣೆ ಮಾಡಿ ಬಹುಮಾನ ನೀಡಲಾಗುವುದು. ಜೊತೆಗೆ ಜಂಬೂ ಸವಾರಿ ಮೆರವಣಿಗೆಯಲ್ಲಿ ಸಾಗುವ ಸ್ತಬ್ಧ ಚಿತ್ರಗಳ ಪಟ್ಟಿಯ ಸಿದ್ಧತೆ ನಡೆಯುತ್ತಿದೆ.

–ಎ.ಎಸ್.ರಂಜಿತ್ ಕುಮಾರ್, ಕಾರ್ಯಾಧ್ಯಕ್ಷ, ಸ್ತಬ್ಧ ಚಿತ್ರ ಉಪಸಮಿತಿ

ನಗದು ಬಹುಮಾನ: ಕಿರು ಸ್ತಬ್ಧ ಚಿತ್ರ ಸ್ಪರ್ಧೆ ವಿಜೇತರಿಗೆ ನಗದು ಬಹುಮಾನ ನೀಡಲಾಗುವುದು. ಮೊದಲ ಬಹುಮಾನ 25 ಸಾವಿರ ರೂ., ದ್ವಿತೀಯ ಬಹುಮಾನ 15 ಸಾವಿರ ರೂ. ಹಾಗೂ ತೃತೀಯ ಬಹುಮಾನ 10 ಸಾವಿರ ರೂ. ಅಲ್ಲದೆ ಪ್ರಥಮ ಬಹುಮಾನ ಪಡೆದ ಕಿರು ಸ್ತಬ್ಧ ಚಿತ್ರವನ್ನು ಜಂಬೂ ಸವಾರಿ ಮೆರವಣಿಗೆ ಸಿದ್ಧಪಡಿಸುವ ಯೋಜನೆಯೂ ಇದೆ ಎಂದು ದಸರಾ ಸ್ತಬ್ಧ ಚಿತ್ರ ಉಪಸಮಿತಿ ಕಾರ್ಯಾಧ್ಯಕ್ಷ ಎ.ಎಸ್.ರಂಜಿತ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದಸರಾ ಉದ್ಘಾಟನೆಗೆ ಕೇವಲ 14 ದಿನ ಬಾಕಿ; ಇನ್ನು ಉದ್ಘಾಟಕರ ನಿರ್ಧರಿಸಿಲ್ಲ!

ಮೈಸೂರು ಭೇಟಿ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ದಸರಾ ಉದ್ಘಾಟಕರ ಹೆಸರು ಘೋಷಿಸುವರೆ?

ಮೈಸೂರು, ಸೆ.19(ಆರ್‌ಕೆ, ಪಿಎನ್‌ಎಸ್)– 2024ರ ಮೈಸೂರು ದಸರಾ ಮಹೋತ್ಸವ ಉದ್ಘಾಟನೆಗೆ ಕೇವಲ ಎರಡು ವಾರವಷ್ಟೇ ಬಾಕಿ. ದಸರಾ ಉದ್ಘಾಟಿಸಲಿರುವ ಅತಿಥಿ ಗಣ್ಯರ ಹೆಸರು ಇನ್ನೂ ಅಂತಿಮವಾಗಿಲ್ಲ. ಅಕ್ಟೋಬರ್ 3ರಂದು ಚಾಮುಂಡಿ ಬೆಟ್ಟದಲ್ಲಿ ಅಧಿದೇವತೆ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಬೇಕಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಳೆ (ಸೆ. 20) ಮತ್ತು ಶನಿವಾರ ಮೈಸೂರಿನಲ್ಲಿ ನಾನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದು, ಆ ವೇಳೆ ದಸರಾ ಉದ್ಘಾಟಿಸಲಿರುವ ಗಣ್ಯರ ಹೆಸರನ್ನು ಘೋಷಿಸುವ ನಿರೀಕ್ಷೆ ಇದೆ. ಕಳೆದ ವರ್ಷ 45 ದಿನಗಳ ಮುಂಚಿತವಾಗಿ ಆಗಸ್ಟ್ 29ರಂದೇ ಸಿದ್ದರಾಮಯ್ಯನವರು ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಅವರನ್ನು ನಾಡಹಬ್ಬ ಉದ್ಘಾಟನೆಗೆ ಘೋಷಿಸಿದ್ದರು.

2023ರ ಆಗಸ್ಟ್ 30ರಂದು ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಲೆಂದು ಒಂದು ದಿನ ಮುಂಚಿತವಾಗಿ ಮೈಸೂರಿಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಮುಂಡಿಬೆಟ್ಟದಲ್ಲಿ ದಸರಾ ಮಹೋತ್ಸವ ಉದ್ಘಾಟಕರ ಹೆಸರನ್ನು ಪ್ರಕಟಿಸಿದ್ದರು. ಇತ್ತೀಚೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರು ಮುಖ್ಯಮಂತ್ರಿಗಳು 2024ರ ನಾಡಹಬ್ಬ ಉದ್ಘಾಟಕರ ಹೆಸರನ್ನು ಪ್ರಕಟಿಸುವರು ಎಂದು ಹೇಳಿದ್ದನ್ನು ಸ್ಮರಿಸಬಹುದು.

ದಸರಾ ಕವಿಗೋಷ್ಠಿಗೆ ಕವಿತೆಗಳ ಆಹ್ವಾನ

ಮೈಸೂರು, ಸೆ.19–ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗದ ವತಿಯಿಂದ ಅಕ್ಟೋಬರ್‌ನಲ್ಲಿ ನಡೆಯಲಿರುವ 20ನೇ ವರ್ಷದ ದಸರಾ ಕವಿ ಗೋಷ್ಠಿಯಲ್ಲಿ ಪಾಲ್ಗೊಳ್ಳಲು ಕನಿಷ್ಠ ಒಂದು ಕವನ ಸಂಕಲನ ಹೊಂದಿರುವ ಕವಿ–ಕವಯಿತ್ರಿಯರಿಂದ ಕವಿತೆಗಳನ್ನು ಆಹ್ವಾನಿಸಲಾಗಿದೆ. ಮೊದಲು ನೋಂದಾಯಿಸಿದ 25 ಕವಿಗಳಿಗೆ ಪಾತ್ರ ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳಲು ಅವಕಾಶವಿದ್ದು, ಕವಿಗಳಿಗೆ ಪ್ರಶಂಸನಾ ಪುಸ್ತಕ ನೀಡಿ, ಗೌರವಿಸಲಾಗುವುದು. ಆಸಕ್ತರು ತಮ್ಮ ಪ್ರಕಟಿತ ಕವನ ಸಂಕಲನದ ಒಂದು ಪ್ರತಿ ಹಾಗೂ 20 ಸಾಲು ಮೀರದ ಒಂದು ಸ್ವರಚಿತ ಕವಿತೆಯನ್ನು ತಮ್ಮ ಸಂಪೂರ್ಣ ವಿಳಾಸ ಮತ್ತು ವಾಟ್ಸಾಪ್ ದೂರವಾಣಿ ಸಂಖ್ಯೆಯೊಂದಿಗೆ ರಂಗನಾಥ್ ಮೈಸೂರು, ಪ್ರಧಾನ ಕಾರ್ಯದರ್ಶಿ, ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ, ಜೆ.ಪಿ. ನಗರ ಇಲ್ಲಿಗೆ ಸೆ.30ರೊಳಗೆ ಕಳುಹಿಸಿಕೊಡಲು ಕೋರಲಾಗಿದೆ. ವಿವರಗಳಿಗೆ ಮೊ.9845791252 ಸಂಪರ್ಕಿಸಬಹುದು.



ಮೈಸೂರಿನ ಬಂಬೂ ಬಜಾರ್‌ನಲ್ಲಿ ಮೆಟ್ಟಿಲುಗಳ ಮೇಲೆ ಬೆಳೆದಿರುವ ಹುಲ್ಲು, ಗಿಡಗಂಟಿ ತೆರವುಗೊಳಿಸುತ್ತಿರುವುದು.



ಕಾಡಾ ಕಚೇರಿ ಎದುರಿನ ಫುಟ್‌ಪಾತ್‌ನಲ್ಲಿ ಕಲ್ಲುಗಳ ಜೋಡಿಸುವ ಕಾಮಗಾರಿ.

ಹಿಂದಿನಂತೆ ಯುದ್ಧ ಕಾಲೇ ಶಸ್ತ್ರಾಭ್ಯಾಸ!; ತರಾತುರಿಯಲ್ಲಿ ದಸರಾ ಕಾಮಗಾರಿ

ಹೊಸ ಡಾಂಬರೀಕರಣದ ಭಾಗ್ಯ ಕಾಣದ ಹಳ್ಳ–ಕೊಳ್ಳಯುಕ್ತ ಸಾಂಸ್ಕೃತಿಕ ನಗರಿ ರಸ್ತೆಗಳು



ಫುಟ್‌ಪಾತ್‌ನಲ್ಲಿ ಬಿದ್ದಿದ್ದ ಭಾರೀ ಗಾತ್ರದ ಮರದ ರೆಂಬೆಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವು ಮಾಡುತ್ತಿರುವುದು.

ಮೈಸೂರು,ಸೆ.19(ಬಿಎಲ್‌ಯು)–ಯುದ್ಧ ಕಾಲೇ ಶಸ್ತ್ರಾಭ್ಯಾಸ ಎಂಬಂತೆ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಇನ್ನು ಕೆಲವೇ ದಿನ ಬಾಕಿ ಇದ್ದು, ಈಗ ನಗರ ಪಾಲಿಕೆಯವರು ತರಾತುರಿಯಲ್ಲಿ ಸಿದ್ಧತಾ ಕಾರ್ಯದಲ್ಲಿ ತೊಡಗಿದ್ದಾರೆ.

ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆಯುವ ಮಹಾ ಕುಂಭ ಮೇಳ, ಒಡಿಸ್ಸಾದ ಪುರಿ ಜಗನ್ನಾಥ ರಥೋತ್ಸವ, ಪಶ್ಚಿಮ ಬಂಗಾಳದಲ್ಲಿ ನಡೆಯುವ ನವರಾತ್ರಿ ಉತ್ಸವ, ಕೇರಳದಲ್ಲಿ ನಡೆಯುವ ಓಣಂ ಹೀಗೆ ದೇಶದ ನಾನಾ ಭಾಗದಲ್ಲಿ ನಡೆಯುವ ಮಹಾ ಉತ್ಸವಗಳಲ್ಲಿ ಲಕ್ಷಾಂತರ ಜನರು ಭಾಗವಹಿಸುವಂತೆ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲೂ ಲಕ್ಷಾಂತರ ಜನರು ಪಾಲ್ಗೊಳ್ಳುತ್ತಾರೆ. ಅಲ್ಲೆಲ್ಲಾ ಮೂರು ತಿಂಗಳ ಮುಂಚಿತವಾಗಿಯೇ ಸಿದ್ಧತಾ ಕಾರ್ಯಗಳು ಆರಂಭಗೊಂಡು ಉತ್ಸವಕ್ಕೆ ಮುನ್ನ ಪೂರ್ಣಗೊಂಡಿರುತ್ತದೆ. ಆದರೆ ಮೈಸೂರು ದಸರಾ ಮಹೋತ್ಸವದಲ್ಲಿ ಮಾತ್ರ ಉತ್ಸವ ವಾರ, ಹದಿನೈದು ದಿನ ಇರುವಾಗ ಸಿದ್ಧತಾ ಕಾರ್ಯ ಆರಂಭವಾಗುತ್ತದೆ.

ನಗರದ ಸಯ್ಯಾಜಿರಾವ್ ರಸ್ತೆಯ ಕಾಡಾ ಕಚೇರಿ ಎದುರಿನ ಫುಟ್‌ಪಾತ್‌ನಲ್ಲಿ ಕಲ್ಲುಗಳ ಜೋಡಿಸುವ ಕೆಲಸವನ್ನು ಈಗಷ್ಟೇ ಕೈಗೆತ್ತಿಕೊಳ್ಳಲಾಗಿದೆ. ಕೆ.ಆರ್. ವೃತ್ತದ ತಾತಯ್ಯ ಪಾರ್ಕ್ ಮುಂಭಾಗದ ಮರಗಳ ಸುತ್ತ ತಡೆಗೋಡೆ ನಿರ್ಮಾಣ ಕಾರ್ಯ ಈಗ ನಡೆಯುತ್ತಿದೆ.

ಇನ್ನು ಜಂಬೂ ಸವಾರಿ ಮೆರವಣಿಗೆ ಮಾರ್ಗ ಬಂಬೂ ಬಜಾರ್‌ನಲ್ಲಿ ಮೆಟ್ಟಿಲುಗಳ ಮೇಲೆ ಬೆಳೆದಿರುವ ಹುಲ್ಲು, ಗಿಡಗಂಟಿ ತೆರವುಗೊಳಿಸಿ, ಗಾರೆ ಮೆತ್ತುವ ಕಾರ್ಯ ಮಾಡಲಾಗುತ್ತಿದೆ. ಹಲವು ತಿಂಗಳಿನಿಂದ ಫುಟ್‌ಪಾತ್‌ನಲ್ಲಿ ಬಿದ್ದಿದ್ದ ಭಾರೀ ಗಾತ್ರದ ಮರದ ರೆಂಬೆಗಳ ಈಗ ತೆರವು ಮಾಡಲಾಗುತ್ತಿದೆ.

ದಸರಾ ಆರಂಭಕ್ಕೆ 15 ದಿನ ಮುಂಚೆಯೇ ಈ ಎಲ್ಲಾ ಕೆಲಸಗಳನ್ನು ಪೂರ್ಣಗೊಳಿಸಬೇಕಿತ್ತು. ಆದರೆ ಯುದ್ಧ ಕಾಲೇ ಶಸ್ತ್ರಾಭ್ಯಾಸ ಎಂಬಂತೆ ತರಾತುರಿಯಲ್ಲಿ ಕಾಮಗಾರಿ ಕೈಗೊಳ್ಳುವುದು ಮಾಮೂಲಿ ಎಂಬಂತಾಗಿದೆ.

ಗನ್‌ಹೌಸ್, ನಗರಪಾಲಿಕೆ, ಕಾಡಾ ಕಚೇರಿ ಬಳಿ ರಸ್ತೆಯಲ್ಲಿ ಉಂಟಾಗಿರುವ ಹಳ್ಳಗಳಿಗೆ ತೇಪೆ ಕಾರ್ಯ ನಡೆಯುತ್ತಿದೆ. ದಸರಾ ಆರಂಭಕ್ಕೆ ಇನ್ನು ಕೇವಲ 12 ದಿನ ಮಾತ್ರ ಬಾಕಿ ಇದ್ದು, ಇನ್ನು ಕೂಡ ನಗರದ ಹದಗೆಟ್ಟ ರಸ್ತೆಗಳಿಗೆ ಡಾಂಬರೀಕರಣ ಮಾಡಿಲ್ಲ. ಹಲವು ವರ್ಷಗಳ ಹಿಂದೆ ದಸರಾ ಸಮೀಪ ಇರುವಾಗ ರಸ್ತೆಗೆ ಡಾಂಬರೀಕರಣ ಭಾಗ್ಯವಿರುತ್ತಿತ್ತು. ಆದರೆ ಈಗ ಹಲವು ರಸ್ತೆಗಳು ಇನ್ನು ಹಳ್ಳ–ಕೊಳ್ಳಗಳಿಂದಲೇ ಬೀಗುತ್ತಿವೆ! ಮೃಗಾಲಯ ರಸ್ತೆಯಿಂದ ಹಾರ್ಡಿಂಜ್ ವೃತ್ತಕ್ಕೆ ಹೋಗುವ ರಸ್ತೆ ಪೂರ್ತಿ ಹಳ್ಳ–ಕೊಳ್ಳಮಯ. ಹಾಗಾಗ ಅಪಘಾತಗಳು ಸಂಭವಿಸಿವೆ. ಆದರೂ ಇಂತಹ ರಸ್ತೆಗಳಿಗೆ ಡಾಂಬರೀಕರಣದ ಯೋಗವಿಲ್ಲ.

ಗಜಪಡೆ ತಾಲೀಮಿಗೆ ಗುರುವಾರ ಬೆಳಗ್ಗೆ ವಿನಾಯಿತಿ



ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ಗಜಪಡೆ ಮಜ್ಜನದಲ್ಲಿ ಮಗ್ನರಾಗಿರುವುದು. ಚಿತ್ರ: ಲಕ್ಷ್ಮೀನಾರಾಯಣ ಯಾದವ್

ಮೈಸೂರು,ಸೆ.19(ಎಂಟಿವೈ)– ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ದಸರಾ ಗಜಪಡೆಗೆ ಗುರುವಾರ ಬೆಳಗ್ಗೆ ತಾಲೀಮಿನಿಂದ ವಿನಾಯಿತಿ ನೀಡಿ, ಸಂಜೆ ಆಯುರ್ವೇದ ಕಾಲೇಜಿನವರೆಗೂ ಭಾರ ಹೊರಿಸದೇ ತಾಲೀಮು ನಡೆಸಲಾಯಿತು. ಈ ಬಾರಿಯ ದಸರಾ ಗಜಪಡೆಗೆ ಬುಧವಾರ ಸಂಜೆಯಷ್ಟೇ ಕ್ಯಾಪ್ಟನ್ ಅಭಿಮನ್ಯುವಿಗೆ ಮರದ ಅಂಬಾರಿಯೊಂದಿಗೆ 1100 ಕೆಜಿ ಭಾರ ಹೊರಿಸಿ ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ತಾಲೀಮು ನಡೆಸಲಾಗಿತ್ತು. ಬನ್ನಿಮಂಟಪದಿಂದ ಅರಮನೆಗೆ ವಾಪಸ್ಸಾಗುವ ವೇಳೆ ರಾತ್ರಿ 9 ಗಂಟೆಯಾಗಿದ್ದರಿಂದ ಇಂದು ಬೆಳಗ್ಗೆ ಎಲ್ಲಾ ಆನೆಗಳಿಗೂ ಅರಮನೆಯಲ್ಲಿಯೇ ವಿಶ್ರಾಂತಿ ಪಡೆಯಲು ಅವಕಾಶ ಮಾಡಿಕೊಡಲಾಯಿತು. ಎಂದಿನಂತೆ ಎಲ್ಲಾ ಆನೆಗಳಿಗೂ ಪೌಷ್ಟಿಕ ಆಹಾರ ನೀಡಲಾಯಿತು. ಬಳಿಕ ಸಂಜೆ ಅರಮನೆಯಿಂದ ಸರ್ಕಾರಿ ಆಯುರ್ವೇದ ಆಸ್ಪತ್ರೆ ವರೆಗೂ ತಾಲೀಮು ನಡೆಸಲಾಯಿತು. ಆದರೆ ಯಾವ ಆನೆಗೂ ಭಾರ ಹೊರಿಸಲಿಲ್ಲ.

ಗಜಪಡೆಯ ಸದಸ್ಯ ಧನಂಜಯನಿಗೆ ನಾಳೆ (ಸೆ.20) ಸಂಜೆ ಮರದ ಅಂಬಾರಿ ಹೊರುವ ತಯಾರಿ ನಡೆಸಲಾಗುತ್ತದೆ. ಅರಮನೆ ಆವರಣದಿಂದ ಮರದ ಅಂಬಾರಿ ಹೊತ್ತು ಧನಂಜಯ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ಹೆಜ್ಜೆ ಹಾಕಲಿದೆ.

ಮೈಸೂರು ಮಿತ್ರ
ಶುಕ್ರವಾರ 20 ಸೆಪ್ಟೆಂಬರ್ 2024

ಅ.4ರಿಂದ ಶ್ರೀರಂಗಪಟ್ಟಣ ದಸರಾ

ದಸರಾ ಲೋಗೋ ಬಿಡುಗಡೆ ಮಾಡಿದ ಸಚಿವ ಚಲುವರಾಯಸ್ವಾಮಿ



ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಲೋಗೋ ಬಿಡುಗಡೆ ಮಾಡಿದ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ.

ಮಂಡ್ಯ,ಸೆ.19– ಶ್ರೀರಂಗಪಟ್ಟಣ ದಸರಾ ಮಹೋತ್ಸವವನ್ನು ಈ ಬಾರಿ ಅ.4ರಿಂದ 7 ವರೆಗೆ ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಗುರುವಾರ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಲೋಗೋ ಬಿಡುಗಡೆ ಮಾಡಿ ಮಾತನಾಡಿದ ಅವರು, ನಾಡಿನ ದಸರಾ ಹಬ್ಬವು ಇಡೀ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿದ್ದು, ನಮ್ಮ ನಾಡಿನ ಕಲ್ಯಾಣಕ್ಕೋಸ್ಕರ ಶ್ರೀ ಚಾಮುಂಡೇಶ್ವರಿ ತಾಯಿಯನ್ನು ಪೂಜಿಸಲಾಗುವುದು. ಶ್ರೀರಂಗಪಟ್ಟಣ ದಸರಾ ಹಬ್ಬದಲ್ಲಿ ಅನೇಕ ರೀತಿಯ ವಿಭಿನ್ನ ಸಾಂಸ್ಕೃತಿಕ ಉತ್ಸವಗಳು ನಡೆಯಲಿದ್ದು, ಸಾರ್ವಜನಿಕರಿಗೆ ಹಬ್ಬದ ವಾತಾವರಣ ಉಂಟಾಗಲಿದೆ ಎಂದರು.

ಶ್ರೀರಂಗಪಟ್ಟಣ ದಸರಾ ಹಬ್ಬದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಮಂಡ್ಯ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಬೇಕು. ಜೊತೆಗೆ ನಮ್ಮ ನಾಡಿನ ಪರಂಪರೆಯನ್ನು ಉಳಿಸುವ ಕೆಲಸವಾಗಬೇಕು. ಹರಿದ್ವಾರ ಮತ್ತು ವಾರಣಾಸಿಯಲ್ಲಿ ನಡೆಯುವ ಗಂಗಾರತಿಯು ಹಲವಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ಗಂಗಾರತಿಯ ಶೈಲಿಯಲ್ಲಿಯೇ ಕಾವೇರಿ ಆರತಿಯನ್ನು ಕೆಆರ್‌ಎಸ್‌ನಲ್ಲಿ ಪ್ರಾರಂಭಿಸಲಾಗುವುದು. ಈ ಬಾರಿಯ ಶ್ರೀರಂಗಪಟ್ಟಣ ದಸರಾ ಕಾರ್ಯಕ್ರಮದಲ್ಲೇ ಪ್ರಾರಂಭಿಸಲು ಚಿಂತಿಸಲಾಗುತ್ತಿದೆ ಎಂದು ತಿಳಿಸಿದರು.

ಇದರ ಸಂಬಂಧವಾಗಿ ನಾಳೆ ಹರಿದ್ವಾರ ಮತ್ತು ವಾರಣಾಸಿಗೆ 28 ಜನರ ನಿಯೋಗ ಹರಿದ್ವಾರ ಹಾಗೂ ವಾರಣಾಸಿಗೆ ತೆರಳಲಿದೆ. ಅಲ್ಲಿಂದ ಬಂದ ನಂತರ ಕಾವೇರಿ ಮಾತೆಗೆ ಗಂಗಾರತಿ ಸಲ್ಲಿಸುವ ಸಂಬಂಧ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ವೇದಿಕೆಯ ಮೇಲಿರುವ ಎಲ್ಲರನ್ನು ಸ್ವಾಗತಿಸಿ, ಪ್ರತಿ ವರ್ಷದಂತೆ ಈ ವರ್ಷವು ಶ್ರೀರಂಗಪಟ್ಟಣ ದಸರಾವನ್ನು ಆಚರಿಸಲಾಗುತ್ತಿದ್ದು, ಇಂದು ಲೋಗೋ ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಶ್ರೀರಂಗಪಟ್ಟಣ ದಸರಾಗೆ ಸಂಬಂಧಿಸಿದಂತೆ ಈಗಾಗಲೇ ಹಲವಾರು ಸಮಿತಿಗಳನ್ನು ರಚನೆ ಮಾಡಲಾಗಿದೆ ಎಂದು ತಿಳಿಸಿದರು.

ಶಾಸಕರಾದ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಪಿ.ರವಿಕುಮಾರ್ ಗಣಿಗ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸೀಫ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಉಪವಿಭಾಗಾಧಿಕಾರಿ ಶಿವಮೂರ್ತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಗಮಂಗಲದಲ್ಲಿ ಶಾಂತಿ ನೆಲೆಸುತ್ತಿದೆ, ಮತ್ತೆ ಯಾರನ್ನೂ ಬಂಧಿಸಬೇಡಿ

2ನೇ ಬಾರಿ ನಾಗಮಂಗಲಕ್ಕೆ ಭೇಟಿ ನೀಡಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನಿರ್ದೇಶನ


ಜನರಿಂದ ಅಹವಾಲು ಆಲಿಸುತ್ತಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ

ನಾಗಮಂಗಲ,ಸೆ.19– ಗಲಭೆ ಪೀಡಿತ ನಾಗಮಂಗಲದಲ್ಲಿ ಶಾಂತಿ ನೆಲೆಸುತ್ತಿದ್ದು, ಸಹಜ ವಾತಾವರಣ ಮರುಸ್ಥಾಪನೆ ಆಗುತ್ತಿದೆ ಹೀಗಾಗಿ ಮತ್ತೆ ಯಾರನ್ನೂ ಬಂಧಿಸುವ ಕೆಲಸ ಮಾಡಬಾರದು ಎಂದು ಕೇಂದ್ರದ ಉಕ್ಕು ಹಾಗೂ ಭಾರಿ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪೊಲೀಸರಿಗೆ ಸೂಚಿಸಿದರು.

ಗುರುವಾರ ಸಂಜೆ ನಾಗಮಂಗಲದ ಬದಿರುಕೊಪ್ಪಲಿಗೆ ಭೇಟಿ ನೀಡಿದ ಸಚಿವರು, ಗಣೇಶ ಮೂರ್ತಿ ಗಲಾಟೆ ಹಿನ್ನೆಲೆಯಲ್ಲಿ ತಮ್ಮ ಮಕ್ಕಳ ಬಗ್ಗೆ ಆತಂಕಗೊಂಡಿರುವ ಪೋಷಕರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದರು.

ಈ ಸಂದರ್ಭದಲ್ಲಿ ಐಜಿಪಿ ಡಾ.ಎಂ.ಬಿ. ಬೋರಲಿಂಗಯ್ಯ ಅವರೊಂದಿಗೆ ಸ್ಥಳದಿಂದಲೇ ದೂರವಾಣಿಯಲ್ಲಿ ಮಾತನಾಡಿದ ಕುಮಾರಸ್ವಾಮಿ ಅವರು, ಪಟ್ಟಣದಲ್ಲಿ ಮೊದಲಿನ ವಾತಾವರಣವೇ ನೆಲೆಸಿದೆ. ಶಾಂತಿ ಸ್ಥಾಪನೆ ಆಗುತ್ತಿದೆ. ಇಂಥ ಸಂದರ್ಭದಲ್ಲಿ ಯಾರನ್ನಾದರೂ ಬಂಧಿಸುವ ಕೆಲಸ ಆದರೆ ಮತ್ತೆ ಅಶಾಂತಿ ಉಂಟಾಗುವ ಅಪಾಯವಿದೆ. ಆದ್ದರಿಂದ ಸೂಕ್ಷ್ಮವಾಗಿ ವರ್ತಿಸಿ ಹಾಗೂ ಯಾರನ್ನೂ ಬಂಧಿಸಬೇಡಿ ಎಂದು ಸೂಚಿಸಿದರು.

ಯಾವುದೇ ತಪ್ಪು ಮಾಡದೇ ಜೈಲು ಪಾಲಾಗಿರುವ ಅಮಾಯಕರನ್ನು ಬಿಡುಗಡೆ ಮಾಡಿಸುವ ಪ್ರಯತ್ನ ಮಾಡಲಾಗುತ್ತಿದೆ ಯಾವುದೇ ಕಾರಣಕ್ಕೂ ಅಧೈರ್ಯ ಪಡಬೇಡಿ. ನಿಮ್ಮ ಜೊತೆ ನಾವಿದ್ದೇವೆ ಎಲ್ಲರೂ ಶಾಂತಿಯಿಂದ ವರ್ತಿಸಬೇಕು. ವೈಷಮ್ಯ ಯಾರಿಗೂ ಒಳ್ಳೆಯದಲ್ಲ. ಜೈಲಿನ ಮುಂದೆ ಈ ಗ್ರಾಮದ ಹೆಣ್ಣು ಮಕ್ಕಳು ಕಣ್ಣೀರು ಹಾಕುತ್ತಿರುವುದನ್ನು ಮಾಧ್ಯಮಗಳಲ್ಲಿ ಗಮನಿಸಿದೆ. ಅದಕ್ಕೆ ಮತ್ತೆ ಇಲ್ಲಿಗೆ ಬಂದಿದ್ದೇನೆ ಎಂದರು.

ಪ್ರತಿಪಕ್ಷ ನಾಯಕ ಆರ್.ಅಶೋಕ್ ಮತ್ತು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿದ್ದಾರೆ. ಆ ಎಫ್‌ಐಆರ್ ನೋಡಿದರೆ ಗೊತ್ತಾಗುತ್ತದೆ. ಗುಪ್ತದಳದ ವೈಫಲ್ಯ ಆಗಿದೆ ಎಂದು. ಗಲಭೆ ಮಾಡಲು ಪೋಸ್ಟ್ ಮಾಡಿದ್ದಾರೆ ಅಂತಾರೆ, ಇವರ ಎಫ್‌ಐಆರ್ ನೋಡಿದರೆ ನಗು ಬರುತ್ತದೆ. ಗೃಹ ಸಚಿವರು ಎಚ್ಚರಿಕೆ ವಹಿಸಿದ್ದಿದ್ದರೆ ಹೀಗೆ ಆಗುತ್ತಿರಲಿಲ್ಲ. ನನಗೆ ರಾಜಕೀಯಕ್ಕಿಂತ ಜನರ ನೆಮ್ಮದಿ ಮುಖ್ಯ. ಮುಗ್ಧ ಜನರನ್ನು ಪೊಲೀಸರು ಬಂಧಿಸುವುದು ಬೇಡ. ಊರು ಬಿಟ್ಟವರಿಗೆ ತೊಂದರೆ ಕೊಡಬೇಡಿ. ಈ ಘಟನೆಯನ್ನು ರಾಜಕೀಯವಾಗಿ ಯಾರೂ ದುರ್ಬಳಕೆ ಮಾಡಿಕೊಳ್ಳಬಾರದು. ನಾನು ಅನುಕಂಪ ಗಿಟ್ಟಿಸಿಕೊಳ್ಳೋಕೆ ಬಂದಿಲ್ಲ ಎಂದು ಹೇಳಿದರು.

ನೊಂದವರಿಗೆ ಆರ್ಥಿಕ ಸಹಾಯ ಮಾಡಬೇಕೆಂದು ಬಂದಿದ್ದೇನೆ. ಇದರ ಬಗ್ಗೆ ಕೆಲವರು ಕೇವಲವಾಗಿ ಮಾತಾಡುತ್ತಿದ್ದಾರೆ. ನಾನು 20, 30 ವರ್ಷಗಳಿಂದ ಕಷ್ಟದಲ್ಲಿ ಇರುವವರಿಗೆ ನೆರವಾಗುತ್ತಾ ಬಂದಿದ್ದೇನೆ. ನೀವು ಬೇಕಿದ್ದರೆ ಸಹಾಯ ಮಾಡಿ. ದ್ವೇಷ ರಾಜಕೀಯ ಮಾಡೋದು ಬೇಡ. ಜೈಲಿಗೆ ಹೋಗಿರುವವರನ್ನು ಕಾನೂನಿನ ವ್ಯಾಪ್ತಿಯಲ್ಲಿ ಜಾಮೀನು ಕೊಡಿಸೋಕು ಮುಂದಾಗುತ್ತೇವೆ ಎಂದು ತಿಳಿಸಿದರು.

ಸಂಸದರ ಕೆಲಸ ಏನು? ಎಂದು ಸಚಿವ ಚಲುವರಾಯಸ್ವಾಮಿ ಹೇಳಿಕೆ ನೀಡಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸಂಸದರು ಆರಾಮವಾಗಿ ದೆಹಲಿಯಲ್ಲಿ ಇರಬೇಕಾ? ನಾನು ಈ ಕ್ಷೇತ್ರದ ಸಂಸದ. ಜನರು ಕಷ್ಟದಲ್ಲಿ ಇದ್ದಾಗ ನಾನು ಬರಲೇಬೇಕು. ನಾನು ಮಂಡ್ಯದ ಸಂಸದ. ಸಚಿವನೂ ಹೌದು. ಮಂಡ್ಯದಲ್ಲಿ ಮಾತ್ರ ಪ್ರವಾಸ ಮಾಡಿಲ್ಲ, ಇಡೀ ದೇಶವನ್ನೇ ಸುತ್ತುತ್ತಿದ್ದೇನೆ ಎಂದು ತಿರುಗೇಟು ಕೊಟ್ಟರು.

ಮಾಜಿ ಸಚಿವ ಸಾ.ರಾ.ಮಹೇಶ್, ಮಾಜಿ ಶಾಸಕ ಕೆ.ಸುರೇಶ್‌ಗೌಡ, ಶಾಸಕರಾದ ಹೆಚ್.ಟಿ. ಮಂಜು, ಮಂಜೇಗೌಡ ಇತರರಿದ್ದರು.

ನಾನು ರಾಜಕೀಯ ಮಾಡಲು ಬಂದಿಲ್ಲ. ನಾನು ಯಾವ ಕುಮ್ಮಕ್ಕು ಕೊಡಲು ಬಂದಿಲ್ಲ. ಗಲಾಟೆಗೆ ಕುಮ್ಮಕ್ಕು ಕೊಟ್ಟಿದ್ದು ಯಾರು? ಜೆಡಿಎಸ್‌ನವರು ಬೆಂಕಿ ಹಚ್ಚಿ ಎಂದು ಹೇಳಿದರಾ? ಪೊಲೀಸರನ್ನು ಯಾರು ಕಳಿಸಿದ್ದು? ಪೊಲೀಸರು ಇದ್ದಿದ್ದರೆ ಈ ಘಟನೆ ಆಗುತ್ತಿರಲಿಲ್ಲ. ನಾನು ಎರಡು ಸಮುದಾಯದ ಜನರಿಗೆ ಆರ್ಥಿಕ ಪರಿಹಾರ ನೀಡಿದ್ದೇನೆ. ನಾನು ಬೆಂಕಿ ಹಚ್ಚಲು ಬಂದಿಲ್ಲ, ರಾಜಕೀಯ ಮಾಡಲು ಬಂದಿಲ್ಲ. ಇದನ್ನು ನೀವು ಅರ್ಥ ಮಾಡಿಕೊಳ್ಳಬೇಕು.
– ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವರು.

ನಾಗಮಂಗಲ ಘರ್ಷಣೆ: ಡಿವೈಎಸ್‌ಪಿ ಅಮಾನತು

ನಾಗಮಂಗಲ,ಸೆ.19– ನಾಗಮಂಗಲ ಡಿವೈಎಸ್‌ಪಿ ಡಾ.ಸುಮಿತ್ ಎ.ಆರ್. ಅವರನ್ನು ಮಂಡ್ಯ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸಸ್ಪೆಂಡ್ ಮಾಡಿ ಆದೇಶ ಹೊರಡಿಸಿದ್ದಾರೆ.

ಸೆ.11ರಂದು ನಾಗಮಂಗಲದಲ್ಲಿ ಗಣಪತಿ ವಿಸರ್ಜನೆ ವೇಳೆ ಸಂಭವಿಸಿದ ಎರಡು ಕೋಮಿನ ಘರ್ಷಣೆಯ ಸಂದರ್ಭದಲ್ಲಿ ಸರಿಯಾಗಿ ಕರ್ತವ್ಯ ನಿರ್ವಹಿಸದೆ ನಿರ್ಲಕ್ಷ್ಯ ತಾಳಿದ್ದರಿಂದ ಘಟನೆ ಸಂಭವಿಸಿದೆ ಎಂಬ ವರದಿ ಆಧಾರದ ಮೇಲೆ ಅವರನ್ನು ಅಮಾನತು ಮಾಡಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರು–ಗೂಡ್ಸ್ ಟೆಂಪೋ ಡಿಕ್ಕಿ: 25ಕ್ಕೂ ಹೆಚ್ಚು ಮಂದಿಗೆ ಗಾಯ

ಭಾರತೀನಗರ,ಸೆ.19– ಕಾರು ಮತ್ತು ಗೂಡ್ಸ್ ಟೆಂಪೋ ನಡುವೆ ಸಂಭವಿಸಿದ ಡಿಕ್ಕಿಯಿಂದ 25ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಮಣಿಗೆರೆ ಗ್ರಾಮದ ಬಳಿ ಗುರುವಾರ ಜರುಗಿದೆ.

ಗೂಡ್ಸ್ ಟೆಂಪೋ ಚಾಲಕ ದುರ್ಗೇಶ್ (21), ಕಾರು ಚಾಲಕ ರಾಜೇಶ್(28), ಕಾರಿನಲ್ಲಿದ್ದ ಅಭಿ, ಬಾಲು, ಚಂದನ್, ಮೋಹನ, ಟೆಂಪೋದಲ್ಲಿದ್ದ ವರಲಕ್ಷ್ಮೀ, ಶೆಟ್ಟಮ್ಮಣ್ಣಿ, ನಾಗರಾಜೇಅರಸ್, ಕಾಂಚನ, ಕಾಂತರಾಜೇಅರಸ್ ಸೇರಿದಂತೆ ಹಲವರು ಗಾಯಗೊಂಡಿದ್ದು, ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮಡೇನಹಳ್ಳಿ ಗ್ರಾಮದ ದುರ್ಗೇಶ್ ತನ್ನ ಅಶೋಕ ಲೈಲ್ಯಾಂಡ್ ಗೂಡ್ಸ್ ಟೆಂಪೋ (ಕೆಎ11, ಬಿ2189)ದಲ್ಲಿ ತೊರೆಬೊಮ್ಮನಹಳ್ಳಿ ಗ್ರಾಮದಿಂದ ಮೂಗನಕೊಪ್ಪಲು ಗ್ರಾಮಕ್ಕೆ ಸಾವಿನ ಕಾರ್ಯಕ್ಕೆ 25 ಮಂದಿಯನ್ನು ಕರೆದೊಯ್ಯುತ್ತಿದ್ದು, ಮಣಿಗೆರೆ ಬಳಿ ಮಲೈ ಮಹದೇಶ್ವರ ಬೆಟ್ಟಕ್ಕೆ ಹೋಗಿ ವಾಪಸ್ಸಾಗುತ್ತಿದ್ದ ಬೆಂಗಳೂರು ಬನಶಂಕರಿ ನಿವಾಸಿಗಳಿದ್ದ ಕಾರಿ (ಕೆಎ 05, ಎನ್ಜಿ 0443)ಗೆ ಡಿಕ್ಕಿ ಹೊಡೆದಿದೆ.

ಡಿಕ್ಕಿ ಹೊಡೆದ ರಭಸಕ್ಕೆ ಗೂಡ್ಸ್ ಟೆಂಪೋ ರಸ್ತೆ ಮಧ್ಯದಲ್ಲಿ ಮಗುಚಿ ಬಿದ್ದಿದ್ದು, ಟೆಂಪೋದೊಳಗೆ ಕುಳಿತಿದ್ದವರಿಗೆ ಗಾಯಗಳಾಗಿವೆ. ಕಾರು ಸಹ ಸಂಪೂರ್ಣ ಜಖಂಗೊಂಡಿದ್ದು, ಕಾರಿನಲ್ಲಿದ್ದ 5 ಮಂದಿಗೂ ಗಂಭೀರವಾಗಿ ಪೆಟ್ಟು ಬಿದ್ದಿದೆ. ವಿಷಯ ತಿಳಿದ ತಕ್ಷಣ ಸ್ಥಳಕ್ಕಾಗಮಿಸಿದ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ಆನಂದ್ ಹಾಗೂ ಸಿಬ್ಬಂದಿ ಗಾಯಾಳುಗಳನ್ನು ಆಂಬುಲೆನ್ಸ್ ಮೂಲಕ ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಿದರು. ನಂತರ ಜಖಂಗೊಂಡಿದ್ದ ಎರಡೂ ವಾಹನಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.






ಅಪಘಾತ ನಡೆದ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ತಾಲೂಕು ತಹಸೀಲ್ದಾರ್ ಡಾ.ಸ್ಮಿತಾರಾಮ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಮಂಡ್ಯ ಮಿಮ್ಸ್‌ಗೆ ಭೇಟಿ ನೀಡಿ ಗಾಯಾಳುಗಳ ವಿವರ ಪಡೆದು ಚಿಕಿತ್ಸೆ ವ್ಯವಸ್ಥೆ ಮಾಡಿದರು.

ಶಾಸಕ ಕೆ.ಎಂ.ಉದಯ್, ಮಾಜಿ ಸಚಿವ ಡಿ.ಸಿ.ತಮ್ಮಣ್ಣ ವಿಚಾರ ತಿಳಿದು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿ ಗಾಯಾಳುಗಳಿಗೆ ಧೈರ್ಯ ಹೇಳಿದರು. ಕೆ.ಎಂ. ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೆಂಕಟೇಗೌಡ ನಿಧನ



ಭಾರತೀನಗರ,ಸೆ.19–ಕೆ.ಎಂ. ದೊಡ್ಡಿಯ ವೆಂಕಟೇಗೌಡ(70) ಅನಾರೋಗ್ಯದಿಂದ ಗುರುವಾರ ಸಂಜೆ ಮೃತಪಟ್ಟಿದ್ದಾರೆ.

ಮೃತರು ಪತ್ನಿ ಜಯಮ್ಮ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮವಾದ ಕೆ.ಎಂ.ದೊಡ್ಡಿಯ ಜಮೀನಿನಲ್ಲಿ ಶುಕ್ರವಾರ ಜರುಗಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಅತ್ಯಾಚಾರ, ಹನಿಟ್ರ್ಯಾಪ್ ಕೇಸ್ ದಾಖಲು

ಬರುವುದರಿಂದ ಅಲ್ಲಿಗೇ ಹೋಗಿ ದೂರು ಕೊಡುವಂತೆ ಸೂಚಿಸಿದ್ದಾರೆ. ಅದರಂತೆ, ಕಗ್ಗಲಿಪುರ ಠಾಣೆಗೆ ಬಂದ ಮಹಿಳೆ ತನ್ನ ಮೇಲೆ 2020ರಿಂದ 2022ರವರೆಗೆ ಅತ್ಯಾಚಾರ ನಡೆಸಿ, ಹನಿಟ್ರ್ಯಾಪ್‌ಗೆ ಬಳಸಿಕೊಂಡಿರುವ ಕುರಿತು ದೂರು ಕೊಟ್ಟಿದ್ದಾರೆ. ಹಿರಿಯ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ದೂರು ಪರಿಶೀಲಿಸಿದ ಠಾಣೆಯ ಅಧಿಕಾರಿಗಳು ನಂತರ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಂತ್ರಸ್ತ ಮಹಿಳೆ ನೀಡಿರುವ ದೂರಿನಲ್ಲಿ ತನ್ನ ವಿರುದ್ಧ 1.3.2020 ರಿಂದ 31–05–2022ರ ವರೆಗೆ ಲೈಂಗಿಕ ದೌರ್ಜನ್ಯ, ಅತ್ಯಾಚಾರ ಹಾಗೂ ಹನಿಟ್ರ್ಯಾಪ್ ಪ್ರಕರಣ ನಡೆದಿರುವುದಾಗಿ ಉಲ್ಲೇಖಿಸಿರುವ ಅವರು, ಈ ಹಿಂದೆ ಸಹ ರಾಮನಗರ ಡಿವೈಎಸ್ಪಿ ಕಚೇರಿಗೆ ದೂರು ನೀಡಿದ್ದೆ. ಆದರೆ, ಶಾಸಕರು ಒತ್ತಡ ಹೇರಿ, ಬ್ಲ್ಯಾಕ್‌ಮೇಲ್ ಮಾಡಿ ವಿಚಾರಣೆಗೆ ಹಾಜರಾಗದಂತೆ ಮಾಡಿದ್ದರು. ಅಂದು ಸಚಿವರಾಗಿದ್ದ ಮುನಿರತ್ನ ನನಗೆ ಬ್ಲ್ಯಾಕ್‌ಮೇಲ್ ಮಾಡಿದ ಪರಿಣಾಮ ನಾನು ಪೊಲೀಸರಿಗೆ ಬಂದು ಹೇಳಿಕೆ ಕೊಡಲು ಸಾಧ್ಯವಾಗಲಿಲ್ಲ. ನನ್ನ ಮೇಲೆ ಗೋಡೌನ್ ಮತ್ತು ಕಾರಿನಲ್ಲಿ ಆಗಾಗ್ಗ ಅತ್ಯಾಚಾರ ಎಸಗಿದ್ದು, ಇದೀಗ ಮುನಿರತ್ನ ಜೈಲಿನಲ್ಲಿರುವ ಕಾರಣ ಅವರ ವಿರುದ್ಧ ಪ್ರಕರಣ ದಾಖಲಿಸುತ್ತಿರುವುದಾಗಿ ಸಂತ್ರಸ್ತ ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

ಏನಿದು ಪ್ರಕರಣ: ಕೋವಿಡ್ ಸಂದರ್ಭದಲ್ಲಿ ನನ್ನ ಸೇವಾ ಕಾರ್ಯ ಗುರುತಿಸಿ ಕರೆ ಮಾಡಿದ್ದ ಮುನಿರತ್ನ, ನಮಸ್ತೆ ಲೀಡರ್, ನಾನು ನಿಮ್ಮ ಭಾಗದ ಶಾಸಕ. ನಿಮ್ಮ ಬಗ್ಗೆ ಕೇಳಿದ್ದೀನಿ. ನನ್ನನ್ನು ಬಂದು ಭೇಟಿ ಮಾಡಿ ಎಂದಿದ್ದ. ಅದರಂತೆ, ಭೇಟಿ ಮಾಡಿದ ಬಳಿಕ ಇಬ್ಬರ ನಡುವೆ ಆತ್ಮೀಯತೆ ಬೆಳೆದಿತ್ತು. ಆಗಾಗ ವಿಡಿಯೊ ಕಾಲ್ ಮಾಡಿ ಮಾತನಾಡುತ್ತಿದ್ದರು. ನಗ್ನವಾಗಿ ಕರೆ ಮಾಡುವಂತೆ ಒತ್ತಾಯಿಸಿದಾಗ, ನಾನು ನಿರಾಕರಿಸಿದ್ದೆ.

ಒಮ್ಮೆ ಕರೆ ಮಾಡಿ, ನಿಮ್ಮಿಂದ ಒಂದು ಸಹಾಯವಾಗಬೇಕು ಎಂದು ಕೇಳಿ, ಸ್ಥಳವೊಂದಕ್ಕೆ ಬರಲು ಸೂಚಿಸಿದ್ದರು. ಅದರಂತೆ, ನಾನು ಹೋದಾಗ ನಿನ್ನ ನೋಡಿದರೆ ಮೈ ಜುಮ್ ಎನ್ನುತ್ತದೆ ಎಂದು ಮಾತನಾಡಿ ತಬ್ಬಿಕೊಳ್ಳಲು ಮುಂದಾದ. ನಾನು ಆಕ್ಷೇಪಿಸಿದಾಗ, ರಾಜಕೀಯಕ್ಕೆ ಬರಬೇಕಾದರೆ ಇವೆಲ್ಲಾ ಕಾಮನ್ ಎಂದು ಹೇಳಿ ಮುಂದುವರಿದ.

ನಾನು ಕಿರುಚಿಕೊಳ್ಳುತ್ತೇನೆ ಎಂದು ಹೇಳಿದಾಗ, ನಾನು ಶಾಸಕ. ಅಪಾರ ಜನಬೆಂಬಲವಿದೆ. ನಿನ್ನ ವಿರುದ್ಧವೇ ಕಂಪ್ಲೆಂಟ್ ಮಾಡುತ್ತೇನೆ. ಸುಮ್ಮನಿದ್ದರೆ ಸರಿ ಎಂದು ಬೆದರಿಸಿ ಅತ್ಯಾಚಾರ ಎಸಗಿದ್ದಾನೆ. ಇಲ್ಲಿ ನಡೆದ ವಿಷಯವನ್ನು ಯಾರಿಗೂ ತಿಳಿಸಬೇಡ. ಈ ಕೊಠಡಿಯಲ್ಲಿ ಕ್ಯಾಮೆರಾ ಅಳವಡಿಸಿದ್ದು, ಎಲ್ಲವೂ ರೆಕಾರ್ಡ್ ಆಗಿದೆ. ನಿನ್ನ ವಿಡಿಯೊ ಎಡಿಟ್ ಮಾಡಿ ಹಂಚುತ್ತೇನೆ ಎಂದು ಹೆದರಿಸಿದ್ದಾನೆ. ಅಲ್ಲದೇ ಚಿತ್ರೀಕರಿಸಿದ್ದ ದೃಶ್ಯವನ್ನು ಟಿವಿಯಲ್ಲಿ ಹಾಕಿ ನನಗೆ ತೋರಿಸಿದ್ದಾನೆ.

ವಿಡಿಯೊ ಇಟ್ಟುಕೊಂಡು ಹಲವು ಬಾರಿ ಅತ್ಯಾಚಾರ ಎಸಗಿದ್ದು, ನಾನು ಹೇಳಿದಂತೆ ಕೇಳಬೇಕು. ಇಲ್ಲದಿದ್ದರೆ ನಿನ್ನ ಗಂಡ ಮತ್ತು ಮಕ್ಕಳಿಗೆ ವಿಡಿಯೊ ತೋರಿಸುತ್ತೇನೆ ಎಂದು ಬೆದರಿಕೆ ಹಾಕಿದ್ದಾನೆ. ನಂತರ, ಆತನಿಗೆ ಪರಿಚಿತವಿರುವ ಮತ್ತೊಬ್ಬ ಮಹಿಳೆ ಜೊತೆ ಸೇರಿ ಆತ ಹೇಳಿದವರನ್ನು ಹನಿಟ್ರ್ಯಾಪ್ ಮಾಡಿಸಿದ್ದಾನೆ. ಮರ್ಯಾದೆ ಹಾಗೂ ಪ್ರಾಣಕ್ಕೆ ಅಂಜಿ ಆತ ಹೇಳಿದಂತೆ ಕೇಳಿದ್ದೇನೆ ಎಂದು ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.

ಎಚ್‌ಐವಿ ಸೋಂಕಿತ ಮಹಿಳೆ ಬಳಕೆ: ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕಾರ್ಪೊರೇಟರ್ ಒಬ್ಬರ ಪತಿಗೆ ಎಚ್‌ಐವಿ ಸೋಂಕಿತ ಮಹಿಳೆಯ ಜತೆ ಲೈಂಗಿಕ ಸಂಪರ್ಕ ನಡೆಸಿ ಆ ದೃಶ್ಯವನ್ನು ಚಿತ್ರೀಕರಿಸಿ ಹನಿಟ್ರ್ಯಾಪ್ ಮಾಡಿದ್ದಾರೆ ಎಂದು ಸಂತ್ರಸ್ತ ಮಹಿಳೆ ದೂರಿನಲ್ಲಿ ಆರೋಪಿಸಿದ್ದು, ಕಾರ್ಪೊರೇಟರ್ ಮಗನಿಗೂ ಎಚ್‌ಐವಿ ಸೋಂಕಿತರೊಂದಿಗೆ ಲೈಂಗಿಕ ಸಂಪರ್ಕ ನಡೆಸುವಂತೆ ಇಲ್ಲಾ ಎಚ್‌ಐವಿ ಸೋಂಕಿತರ ರಕ್ತದ ಇಂಜೆಕ್ಷನ್ ನೀಡುವಂತೆ ನನ್ನನ್ನು ಬಲವಂತ ಮಾಡಿದ್ದರು. ಆದರೆ ಇದಕ್ಕೆ ನಾನು ಒಪ್ಪಲಿಲ್ಲ ಎಂದು ದೂರಿನಲ್ಲಿ ಸಂತ್ರಸ್ತ ಮಹಳೆ ತಿಳಿಸಿದ್ದಾರೆ.

ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ: ಮಹಿಳೆಯೊಬ್ಬರನ್ನು ತಮ್ಮ ಟ್ರಾಪ್‌ಗೆ ಸಿಕ್ಕಿಸಲು ಕಗ್ಗಲಿಪುರ ಠಾಣೆ ವ್ಯಾಪ್ತಿಯ ಗುಹಾಂತರ ರೆಸಾರ್ಟ್, ಚಿಕ್ಕಬಳ್ಳಾಪುರ ಸಮೀಪದ ಹಲಗುರಕಿ ರೆಸಾರ್ಟ್‌ಗೆ ಆರೋಪಿಗಳು ನಮ್ಮೊಂದಿಗೆ ತೆರಳಿ, ಅಲ್ಲಿ ಮಹಿಳೆಯೊಬ್ಬರಿಗೆ ಮದ್ಯ ಸೇವನೆ ಮಾಡಿಸಿ, ಆಕೆಯ ಸ್ವಿಮ್ಮಿಂಗ್ ದೃಶ್ಯಗಳನ್ನು ಚಿತ್ರೀಕರಣ ಮಾಡಿಕೊಂಡಿದ್ದು, ಬಳಿಕ ಆ ಮಹಿಳೆಯ ವಿರುದ್ಧ ಲೋಕಿ ಎಂಬ ವ್ಯಕ್ತಿಯಿಂದ ಬೆಂಗಳೂರಿನ ಪೊಲೀಸ್ ಠಾಣೆಯಲ್ಲಿ ಬ್ಲಾಕ್‌ಮೇಲ್ ಮಾಡುತ್ತಿದ್ದಾಳೆ ಎಂದು ದೂರು ಕೊಡಿಸಿ, ಬಳಿಕ ಆ ಮಹಿಳೆಯನ್ನು ಪೊಲೀಸರು ಬಂಧಿಸುವಂತೆ ಮಾಡಿ, ಪ್ರಕರಣವನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ ಎಂದು ಸಂತ್ರಸ್ತ ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.

ಯಾರ್‍ಯಾರಿಗೆ ಹನಿ ಟ್ರ್ಯಾಪ್: ಮಹಾನಗರ ಪಾಲಿಕೆ ಸದಸ್ಯರು, ಪೊಲೀಸರು, ರಾಜಕೀಯ ಎದುರಾಳಿಗಳು, ಅಧಿಕಾರಿಗಳು ಸೇರಿದಂತೆ ಹಲವರನ್ನು ಹನಿಟ್ರ್ಯಾಪ್ ಮಾಡಲು ಮುನಿರತ್ನ ನನ್ನನ್ನು ಹಾಗೂ ಇತರ ಮಹಿಳೆಯರನ್ನು ಬಳಸಿಕೊಂಡಿದ್ದಾನೆ. ರೆಸಾರ್ಟ್, ಹೋಟೆಲ್, ಹೋಮ್ ಸ್ಟೇಗಳಿಗೆ ಅವರನ್ನು ಕರೆಯಿಸಿ ಹನಿಟ್ರ್ಯಾಪ್ ಮಾಡಿಸಿದ್ದಾರೆ. ಈ ಪೈಕಿ, ಕೆಲ ಎಚ್‌ಐವಿ ಸೋಂಕು ಇರುವ ಮಹಿಳೆಯರನ್ನು ಸಹ ಬಳಸಿಕೊಂಡಿದ್ದಾನೆ. ಎಲ್ಲದರ ವಿಡಿಯೊಗಳನ್ನು ತನ್ನ ಬಳಿ ಇಟ್ಟುಕೊಂಡಿದ್ದಾನೆ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ. ಜತೆಗೆ ಕೆಲ ಹನಿಟ್ರ್ಯಾಪ್ ಬಳಿಕ ಪೊಲೀಸರೇ ನಮ್ಮನ್ನು ಎಸ್ಕಾರ್ಟ್ ಮಾಡುತ್ತಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಟೀಂ ಕಟ್ಟಿದ್ದರೆ ಮುನಿರತ್ನ: ಹನಿಟ್ರ್ಯಾಪ್ ಮಾಡುವ ಮೊದಲೆ, ಒಂದಷ್ಟು ಮಂದಿಯಿಂದ ಕ್ಯಾಮಾರಾ ಅಳವಡಿಕೆ ಮಾಡುತ್ತಿದ್ದರು. ಬಳಿಕ ಅಲ್ಲಿ ನಡೆಯುವ ರಾಸಲೀಲೆಯನ್ನು ಲೈವ್‌ನಲ್ಲಿ ನೋಡಲು ವೈಫೈ ಸಹ ಅಳವಡಿಸಲಾಗುತ್ತಿತ್ತು. ಇದಕ್ಕಾಗಿ ಪೂರ್ವನಿಯೋಜಿತವಾಗಿ ಒಂದಷ್ಟು ಟೀಂ ಸಹ ಇತ್ತು. ಇನ್ನು ಮಹಿಳೆಯರನ್ನು ಅತ್ಯಾಚಾರ ಮಾಡಿ, ಅದನ್ನು ವಿಡಿಯೋ ಮಾಡಿ, ಟಿವಿಯಲ್ಲಿ ನೋಡುತ್ತಿದ್ದರು. ಇದನ್ನು ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೂ ತೋರಿಸಿ, ಬ್ಲಾಕ್‌ಮೇಲ್ ಮಾಡಿ, ಆಕೆಯನ್ನು ಹನಿಟ್ರ್ಯಾಪ್‌ಗೆ ಬಳಸಿಕೊಳ್ಳುತ್ತಿರುವುದರ ಬಗ್ಗೆ ಮಹಿಳೆ ನೀಡಿರುವ ದೂರಿನಲ್ಲಿ ಉಲ್ಲೇಖಗೊಂಡಿದೆ.

ಜಾಮೀನು ಮಂಜೂರು

ಶಾಸಕ ಮುನಿರತ್ನ ಅವರಿಗೆ ಕೋರ್ಟ್‌ನಿಂದ ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶ ಹೊರಡಿಸಿದೆ. ನ್ಯಾಯಾಲಯದಿಂದ ಮುನಿರತ್ನರಿಗೆ ಜಾಮೀನು ಮಂಜೂರಾದರೂ ಅವರ ಪರವಾದ ವಕೀಲರು ಜೈಲಿಗೆ ಆಗಮಿಸಿ, ಪ್ರಕ್ರಿಯೆಗಳನ್ನು ಪೂರ್ಣಗೊಳಿಸದ ಕಾರಣ ಇಂದು ಅವರು ಜೈಲಿನಲ್ಲೇ ಇರಬೇಕಾಗುತ್ತದೆ. ನಾಳೆ ಬೆಳಗ್ಗೆ ಮುನಿರತ್ನ ಜೈಲಿನಿಂದ ಹೊರಬರುವ ಸಾಧ್ಯತೆ ಇದೆ. ಅದೇ ವೇಳೆ ಕಗ್ಗಲಿಪುರ ಠಾಣೆ ಪೊಲೀಸರು ಅತ್ಯಾಚಾರ ಪ್ರಕರಣದಲ್ಲಿ ಅವರನ್ನು ಬಂಧಿಸುವರು ಎಂದು ಮೂಲಗಳು ತಿಳಿಸಿವೆ.

ಪ್ರಾಣಿ ಕೊಬ್ಬು ಬಳಕೆ

ಪ್ರಸಾದ ಕಲಬೆರಕೆ ಮಾಡುವ ಮೂಲಕ ತಿರುಮಲ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದ ಪಾವಿತ್ರ್ಯತೆಗೆ ಧಕ್ಕೆ ತಂದು ಅಪವಿತ್ರಗೊಳಿಸಿದ್ದಾರೆ ಎಂದು ಟೀಕಿಸಿದ್ದಾರೆ. ಸಾಮಾನ್ಯವಾಗಿ ತಿರುಮಲ ಲಡ್ಡು ಪ್ರಸಾದಕ್ಕೆ ಶುದ್ಧ ಹಸುವಿನ ತುಪ್ಪ ಬಳಸಬೇಕು ಆದರೆ ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬನ್ನು ಬಳಸುವ ಮೂಲಕ ವೆಂಕಟೇಶ್ವರ ಸ್ವಾಮಿಗೆ ಅವಮಾನ ಮಾಡಿದ್ದಾರೆ. ನಮ್ಮ ಸರ್ಕಾರ ಬಂದ ಬಳಿಕ ಎಲ್ಲ ಗುಣಮಟ್ಟದ ಪದಾರ್ಥಗಳೊಂದಿಗೆ ಲಡ್ಡು ಪ್ರಸಾದವನ್ನು ತಯಾರಿಸುತ್ತಿದ್ದೇವೆ ಎಂದಿದ್ದಾರೆ.

ಜಗನ್ ಅಕ್ರಮದ ಬಗ್ಗೆ ತನಿಖೆ: ಕಳೆದ ವರ್ಷಗಳಲ್ಲಿ ವೈಎಸ್‌ಆರ್‌ಸಿಪಿ ಸರ್ಕಾರ ಹಲವು ಅಕ್ರಮಗಳನ್ನು ಮಾಡಿದೆ. ಇಂತಹ ತಪ್ಪು ಮಾಡಿ ಹಣ ವಸೂಲಿ ಮಾಡಿದವರು ಕಾನೂನಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆಯಾಗುತ್ತದೆ ಎಂದರು.

ತಮ್ಮ ಸರ್ಕಾರದಲ್ಲಿ ಅಣ್ಣಾ ಕ್ಯಾಂಟೀನ್ ರದ್ದು ಮಾಡುವ ಮೂಲಕ ಜಗನ್ ಕೆಟ್ಟ ಕೆಲಸ ಮಾಡಿದ್ದಾರೆ. ಜಗನ್ ಆಡಳಿತಾವಧಿಯಲ್ಲಿ ಅನೇಕ ಭ್ರಷ್ಟಾಚಾರವನ್ನು ಮಾಡಿದ್ದಾರೆ. ತಪ್ಪು ಮಾಡಿದವರನ್ನು ನಮ್ಮ ಸರ್ಕಾರ ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಎಲ್ಲ ಪ್ರಕರಣಗಳ ಬಗ್ಗೆ ತನಿಖೆ ನಡೆಸುತ್ತೇವೆ ಎಂದರು. ಇದೇ ವೇಳೆ ನಮ್ಮ ಸರ್ಕಾರದಲ್ಲಿ ಒಂದೇ ಒಂದು ಅಂತಹ ತಪ್ಪುಗಳಾಗಲು ಬಿಡುವುದಿಲ್ಲ. ಎಲ್ಲರೂ ಜಾಗರೂಕರಾಗಿರಬೇಕು ಎಂದು ಪಕ್ಷದ ಶಾಸಕರಿಗೆ ಕಿವಿಮಾತು ಹೇಳಿದರು. ತಿರುಮಲ ಪ್ರಸಾದ ಕುರಿತು ಸಿಎಂ ಚಂದ್ರಬಾಬು ನಾಯ್ಡು ಅವರ ಹೇಳಿಕೆಯನ್ನು ಖಂಡಿಸಿರುವ ವೈಎಸ್‌ಆರ್‌ಸಿ ರಾಜ್ಯಸಭಾ ಸದಸ್ಯ ಹಾಗೂ ವೈಎಸ್‌ಆರ್‌ಸಿ ಆಡಳಿತದಲ್ಲಿ ಟಿಟಿಡಿ (ತಿರುಮಲ ತಿರುಪತಿ ದೇವಸ್ಥಾನಗಳು) ಅಧ್ಯಕ್ಷರಾಗಿದ್ದ ವೈ.ವಿ.ಸುಬ್ಬಾರೆಡ್ಡಿ, ಚಂದ್ರಬಾಬು ನಾಯ್ಡು ಅವರು ತಿರುಮಲದ ಪಾವಿತ್ರ್ಯತೆಯನ್ನು ಹಾಳು ಮಾಡಿದ್ದಾರೆ. ಕೋಟ್ಯಾಂತರ ಹಿಂದೂಗಳ ನಂಬಿಕೆ. ತಿರುಮಲ ಪ್ರಸಾದದ ಬಗ್ಗೆ ಅವರ ಹೇಳಿಕೆಗಳು ಅತ್ಯಂತ ದುರುದ್ದೇಶಪೂರಿತವಾಗಿವೆ. ಯಾವುದೇ ವ್ಯಕ್ತಿ ಅಂತಹ ಮಾತುಗಳನ್ನು ಮಾತನಾಡುವುದಿಲ್ಲ ಅಥವಾ ಅಂತಹ ಆರೋಪ ಗಳನ್ನು ಮಾಡುವುದಿಲ್ಲ ಎಂದಿದ್ದಾರೆ. ರಾಜಕೀಯ ಲಾಭಕ್ಕಾಗಿ ಚಂದ್ರಬಾಬು ನಾಯ್ಡು ಯಾವುದೇ ಹಂತಕ್ಕೆ ಇಳಿಯುತ್ತಾರೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಭಕ್ತರ ನಂಬಿಕೆಯನ್ನು ಬಲಪಡಿಸಲು, ನಾನು ನನ್ನ ಕುಟುಂಬದೊಂದಿಗೆ ತಿರುಮಲ ಪ್ರಸಾದದ ಬಗ್ಗೆ ಸರ್ವೇಶ್ವರನ ಮುಂದೆ ಪ್ರಮಾಣ ಮಾಡಲು ಸಿದ್ಧನಿದ್ದೇನೆ. ಚಂದ್ರಬಾಬು ತಮ್ಮ ಕುಟುಂಬದೊಂದಿಗೆ ಅದೇ ರೀತಿ ಮಾಡಲು ಸಿದ್ಧರಿದ್ದಾರೆಯೇ ಎಂದು ಪ್ರಶ್ನಿಸಿದ್ದಾರೆ.

ಲಡ್ಡುಗೆ ಹಂದಿ, ದನದ ಕೊಬ್ಬು, ಮೀನಿನ ಎಣ್ಣೆ ಬಳಕೆ

ತಿರುಪತಿ, ಸೆ.19– ವಿಶ್ವವಿಖ್ಯಾತ ತಿರುಪತಿ ಲಡ್ಡು ತಯಾರಿಕೆಯಲ್ಲಿ ಗುಣಮಟ್ಟವಿಲ್ಲದ ಪದಾರ್ಥಗಳು ಮತ್ತು ಪ್ರಾಣಿಗಳ ಕೊಬ್ಬನ್ನು ಬಳಸಲಾಗುತ್ತಿದೆ ಎಂದು ಸ್ವತಃ ಆಂಧ್ರ ಪ್ರದೇಶ ಮುಖ್ಯಮಂತ್ರಿ ಆರೋಪಿಸಿದ ಬೆನ್ನಲ್ಲೇ, ತಿರುಪತಿ ಲಡ್ಡುವಿನಲ್ಲಿ ದನದ ಕೊಬ್ಬು, ಮೀನಿನ ಎಣ್ಣೆ ಬಳಸಿರುವುದು ಲ್ಯಾಬ್ ವರದಿಯಲ್ಲಿ ದೃಢಪಟ್ಟಿದೆ. ತಿರುಪತಿ ಲಡ್ಡುವಿನಲ್ಲಿ ಹಂದಿ, ದನದ ಕೊಬ್ಬು, ಮೀನಿನ ಎಣ್ಣೆ ಬಳಸಿರುವುದನ್ನು ಗುಜರಾತ್ ಮೂಲದ ಜಾನುವಾರು ಪ್ರಯೋಗಾಲಯ, NDDB CALF Ltd ದೃಢಪಡಿಸಿದೆ ಎಂದು ಆಡಳಿತಾರೂಢ ತೆಲುಗು ದೇಶಂ ಪಕ್ಷ(ಟಿಡಿಪಿ) ಹೇಳಿದೆ.

ಇಂದು ಪತ್ರಿಕಾಗೋಷ್ಠಿಯಲ್ಲಿ ಪ್ರಯೋಗಾಲಯದ ವರದಿಯನ್ನು ಪ್ರದರ್ಶಿಸಿದ ಟಿಡಿಪಿ ವಕ್ತಾರ ಆನಂ ವೆಂಕಟ ರಮಣ ರೆಡ್ಡಿ ಅವರು, ತಿರುಪತಿಯ ಲಡ್ಡು ತಯಾರಿಕೆಗೆ ಬಳಸುವ ತುಪ್ಪದಲ್ಲಿ ಮೀನಿನ ಎಣ್ಣೆ, ಪ್ರಾಣಿಗಳ ಕೊಬ್ಬು ಇರುವುದು ಲ್ಯಾಬ್ ವರದಿಯಲ್ಲಿ ದೃಢಪಟ್ಟಿದೆ. ಇದರಲ್ಲಿ ಹಂದಿಯ ಕೊಬ್ಬು, ದನದ ಕೊಬ್ಬು, ಪಾಮಾಯಿಲ್, ಸೋಯಾಬಿನ್, ಸೂರ್ಯಕಾಂತಿ ಎಣ್ಣೆ, ಮೆಕ್ಕೆಜೋಳ ಎಣ್ಣೆ ಬೆರೆಸಿದ ಕಡಿಮೆ ಗುಣಮಟ್ಟದ ತುಪ್ಪ ಬಳಕೆ ಮಾಡಲಾಗುತ್ತಿದೆ ಎಂಬುದು ಖಚಿತವಾಗಿದೆ ಎಂದರು. ಪ್ರಯೋಗಾಲಯದ ವರದಿಯು ತುಪ್ಪದ ಮಾದರಿಯಲ್ಲಿ 'ದನದ ಕೊಬ್ಬು' ಇರುವಿಕೆಯನ್ನು ದೃಢಪಡಿಸಿದೆ ಎಂದು ಹೇಳಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ

ಅನಾವರಣ ಮಾಡಲು ಸಿದ್ಧತೆ ನಡೆದಿದೆ. ರಾಜ್ಯದ ನಾಲ್ಕು ವಲಯಗಳಲ್ಲಿ ವಿಶೇಷ ಕಾರ್ಯಕ್ರಮ ಆಯೋಜನೆ ಮಾಡಲಾಗುವುದು, ಮೈಸೂರಿನಲ್ಲಿ ಚಿಂತನಾ ಸಮಾವೇಶ, ರಾಯಚೂರಿನಲ್ಲಿ ಗೋಕಾಕ್ ಚಳವಳಿ ಸಂಸ್ಮರಣೆ, ಮಹಾರಾಷ್ಟ್ರದ ಜತ್ ತಾಲೂಕಿನಲ್ಲಿ ಗಡಿನಾಡು ಸಾಂಸ್ಕೃತಿಕ ಉತ್ಸವ ಮತ್ತು ಮಂಗಳೂರಿನಲ್ಲಿ ವಿವಿಧ ಅಕಾಡೆಮಿ ಸಹಯೋಗದಲ್ಲಿ ಬಹುಸಂಸ್ಕೃತಿ ಉತ್ಸವ ಆಯೋಜನೆ ಮಾಡಲಾಗುತ್ತಿದೆ.

ಕರ್ನಾಟಕದ ಬಹುಸಂಸ್ಕೃತಿ, ಸೌಹಾರ್ದ ಸಂಸ್ಕೃತಿ, ಬಹುತ್ವದ ಕುರಿತು 100 ಪುಸ್ತಕ ಗಳನ್ನು ಸಿದ್ಧಪಡಿಸಲಾಗುತ್ತಿದ್ದು, ಡಿಸೆಂಬರ್ ವೇಳೆಗೆ ಬಿಡುಗಡೆ ಮಾಡಲಾಗುವುದು. ನಾಡಿನ ಕಲೆ, ಸಾಹಿತ್ಯ, ಕೃಷಿ, ತೋಟ ಗಾರಿಕೆ, ಕೈಗಾರಿಕೆ ಕುರಿತಾದ 5 ಸಂಪುಟಗಳನ್ನು ಸಿದ್ಧಪಡಿಸಲಾಗುತ್ತಿದೆ, ಇದೇ ಸಂದರ್ಭದಲ್ಲಿ ಸ್ಮರಣ ಸಂಭ್ರಮ ಸಂಪುಟ ಹೊರತರಲಾಗುತ್ತಿದೆ. ಕನ್ನಡದ ಸಾಹಿತಿಗಳ ನುಡಿಮುತ್ತುಗಳನ್ನು ಎಲ್ಲಾ ಜಿಲ್ಲೆಗಳ ಪ್ರಮುಖ ಸ್ಥಳಗಳಲ್ಲಿ, ಕೆಎಸ್‌ಆರ್‌ಟಿಸಿ ಬಸ್ ಮತ್ತಿತರ ಕಡೆಗಳಲ್ಲಿ ಪ್ರಚುರಪಡಿಸ ಲಾಗುವುದು. ಎಲ್ಲಾ ಶಾಲಾ–ಕಾಲೇಜು ಗಳಲ್ಲಿ ಈ ಬಾರಿ ಕನ್ನಡ ರಾಜ್ಯೋತ್ಸವ ಸಂಭ್ರಮವನ್ನು ಅದ್ಧೂರಿಯಾಗಿ ಆಚರಿಸಲು ಕ್ರಮಕೈಗೊಳ್ಳಲಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮಾತನಾಡಿ, ಕೊರಗ ಭಾಷೆ ಯಂತಹ ಸಣ್ಣ ಭಾಷೆಗಳ ಅಭಿವೃದ್ಧಿಗೆ ತಜ್ಞರ ಸಮಿತಿ ರಚಿಸುವಂತೆ ಮನವಿ ಮಾಡಿದರು.

ಆಸ್ತಿ ಲೂಟಿ ಆರೋಪ

ಕುಮಾರಸ್ವಾಮಿ ಅವರ ಟಿಪ್ಪಣಿಗೆ ಕೆಳಹಂತದಿಂದ ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿವರೆಗೂ ಡಿ–ನೋಟಿಫಿಕೇಷನ್ ಮಾಡಲು ಸಾಧ್ಯವಿಲ್ಲ ಎಂದು ಕಡತವನ್ನು ತಳ್ಳಿಹಾಕುತ್ತಾರೆ. ಕುಮಾರಸ್ವಾಮಿ ನಂತರ ಅಧಿಕಾರಕ್ಕೆ ಬಂದ ಯಡಿಯೂರಪ್ಪ, ಈ ಕಡತವನ್ನು ಮತ್ತೆ ತರಿಸಿಕೊಂಡು ಈ ಭೂಮಿಯನ್ನು ಸ್ವಾಧೀನದಿಂದ ಕೈಬಿಡುವಂತೆ ಆದೇಶ ಮಾಡುತ್ತಾರೆ.

ಮುಖ್ಯಮಂತ್ರಿ ಆದೇಶದ ಮೇರೆಗೆ ಈ ಭೂಮಿ ಡಿ–ನೋಟಿಫೈ ಆಗಿ ಭೂಮಿ ಅರ್ಜಿದಾರರ ವಶಕ್ಕೆ ಹೋಗುತ್ತದೆ. ಡಿ–ನೋಟಿಫೈ ಆದ 21 ದಿನದಲ್ಲೇ ಕುಮಾರಸ್ವಾಮಿ ಅತ್ತೆ, ತಮ್ಮ ಪುತ್ರ ಚನ್ನಪ್ಪ ಅವರ ಹೆಸರಿನಲ್ಲಿ 60 ಲಕ್ಷ ರೂ.ಗೆ ಖರೀದಿ ಮಾಡುತ್ತಾರೆ.

ಈ ಬಗ್ಗೆ ಲೋಕಾಯುಕ್ತಕ್ಕೆ ದೂರು ನೀಡಿದ್ದು, ತನಿಖೆಯೂ ನಡೆಯುತ್ತಿದೆ. ದೂರು ವಜಾ ಮಾಡುವಂತೆ ಯಡಿಯೂರಪ್ಪ ಅವರು ಹೈಕೋರ್ಟ್ ಮೊರೆ ಹೋಗುತ್ತಾರೆ. ಆದರೆ, ನ್ಯಾಯಾಲಯ ಯಡಿಯೂರಪ್ಪ ಅವರ ಅರ್ಜಿ ತಿರಸ್ಕರಿಸಿ 20,000 ರೂ. ದಂಡ ವಿಧಿಸಿದ್ದಲ್ಲದೆ, ಲೋಕಾಯುಕ್ತ ತನಿಖೆ ಮುಂದುವರೆಸುವಂತೆ ಆದೇಶ ಮಾಡುತ್ತದೆ. ಅಧಿಕಾರಿಗಳು ಭೂಮಿ ಡಿ–ನೋಟಿಫಿಕೇಷನ್ ಸಾಧ್ಯವಿಲ್ಲ ಎಂದಿದ್ದರೂ, ಕಾನೂನಿನ ಸಲಹೆ ಪಡೆಯದೆ, ಯಡಿಯೂರಪ್ಪ ಅವರು ಭೂಸ್ವಾಧೀನದಿಂದ ಕೈಬಿಡಲು ಆದೇಶ ಮಾಡಿದರು. ಆ ಸಂದರ್ಭದಲ್ಲಿ ಯಡಿಯೂರಪ್ಪ ಮತ್ತು ಕುಮಾರಸ್ವಾಮಿ ದಿನನಿತ್ಯ ಕಿತ್ತಾಡುತ್ತಿದ್ದರು, ಇದೇ ವೇಳೆಯಲ್ಲಿ ಬಿಎಸ್‌ವೈ ಅವರು ಎಚ್‌ಡಿಕೆ ಸಂಬಂಧಿಕರ ಪರವಾಗಿ ಭೂಸ್ವಾಧೀನದಿಂದ ಕೈಬಿಟ್ಟಿದ್ದಾರೆ.

ಈ ವಿಚಾರದಲ್ಲಿ ಇಬ್ಬರ ನಡುವಿನ ಒಳ ಒಪ್ಪಂದವೇನು, ಇದನ್ನು ಬಹಿರಂಗಪಡಿಸಬೇಕು. ರಾಜಕೀಯವಾಗಿ ಮೇಲ್ನೋಟಕ್ಕೆ ಕಿತ್ತಾಡಿಕೊಂಡು ಲೂಟಿ ಹೊಡೆಯಲು ಮಾತ್ರ ಇಬ್ಬರು ನಾಯಕರು ಒಂದಾಗಿದ್ದಾರೆಂದು ಆರೋಪಿಸಿದರು.

ಮಹಿಳೆಯರ ಸುರಕ್ಷತೆಗೆ ಕಠಿಣ ಕಾಯ್ದೆ ಅನುಷ್ಠಾನ ಅಗತ್ಯ

ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಆಗ್ರಹ

ಮೈಸೂರು, ಸೆ.19(ಜಿಎ)–ಕರ್ನಾಟಕ ದಲ್ಲಿ ಮಹಿಳೆಯರ ಸುರಕ್ಷತೆಗಾಗಿ ಚಾಲ್ತಿ ಯಲ್ಲಿರುವ ಕಠಿಣ ಕಾಯ್ದೆಗಳನ್ನು ರಾಜ್ಯ ಸರ್ಕಾರ ಸಮರ್ಪಕವಾಗಿ ಅನುಷ್ಠಾನ ಮಾಡಬೇಕು ಎಂದು ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಪ್ರೊ.ಕಾಳಚನ್ನೇಗೌಡ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಲ್ಕತ್ತಾದ ಆರ್.ಜಿ. ಕರ್ ಆಸ್ಪತ್ರೆ ಯಲ್ಲಿ ನಡೆದ ಭೀಕರ ಘಟನೆ ಮಹಿಳಾ ಸುರಕ್ಷತೆಯ ಬಗ್ಗೆ ಅನುಮಾನ ಮೂಡಿ ಸಿದ್ದು, ಕರ್ನಾಟಕವೂ ಈ ರೀತಿಯ ಘಟನೆ ಯಿಂದ ಹೊರತಾಗಿಲ್ಲ. ಅಪ್ರಾಪ್ತರ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯಗಳು ಎಗ್ಗಿಲ್ಲದೆ ನಡೆಯುತ್ತಿದ್ದು, ನೂರಾರು ಪೋಕ್ಸೋ ಪ್ರಕರಣ ದಾಖಲಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ಹೆಣ್ಣು ಭ್ರೂಣ ಹತ್ಯೆ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಸಾಮಾಜಿಕ ಮಾಧ್ಯಮಗಳ ಮೂಲಕ ಅನಿರ್ಬಂಧಿತವಾಗಿ ಪ್ರಸಾರವಾಗುತ್ತಿರುವ ಅಶ್ಲೀಲ ವಿಡಿಯೋಗಳನ್ನು ಕೂಡಲೇ ನಿಷೇಧಿಸಬೇಕು. ಅವುಗಳ ಮೇಲಿನ ನಿರ್ಬಂಧ ವನ್ನು ಕಾನೂನಿನಡಿ ರೂಪಿಸಬೇಕು. ಮಾದಕ ವಸ್ತುಗಳ ಮಾರಾಟ, ವಿತರಣೆ ಮತ್ತು ಸಂಗ್ರಹದ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಂಡು ಡ್ರಗ್ಸ್ ಹಾವಳಿಯನ್ನು ತಡೆಗಟ್ಟಬೇಕು ಎಂದು ಆಗ್ರಹಿಸಿದರು. ಸಂಘಟನೆಯ ಸದಸ್ಯೆ ಸುಶೀಲಾ ಮಾತ ನಾಡಿ, ಸರ್ಕಾರ ಮಹಿಳಾ ಆಯೋಗಕ್ಕೆ ಸದಸ್ಯರನ್ನು ನೇಮಿಸಿಲ್ಲ. ಕೇವಲ ಅಧ್ಯಕ್ಷರಿಂದ ಆಯೋಗ ನಡೆಯಲು ಸಾಧ್ಯವೇ ಎಂದು ಪ್ರಶ್ನಿಸಿದರು. ಸುದ್ದಿಗೋಷ್ಠಿಯಲ್ಲಿ ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಪರಶು, ನಾ.ದಿವಾ ಕರ್, ರತಿರಾವ್, ಜಿ.ಎಸ್.ಸೀಮಾ, ಸುಮನಾ, ಸಬೀನಾ ಮತ್ತಿತರರು ಉಪಸ್ಥಿತರಿದ್ದರು.

ದ್ವಿಚಕ್ರ ವಾಹನ ಡಿಕ್ಕಿ; ಚಿರತೆ ಸಾವು



ಮೈಸೂರು,ಸೆ.19(ಪಿಎಂ)– ದ್ವಿಚಕ್ರ ವಾಹನ ಡಿಕ್ಕಿ ಹೊಡೆದ ಪರಿಣಾಮ ಚಿರತೆಯೊಂದು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಗುರುವಾರ ರಾತ್ರಿ ಮೈಸೂರು–ಮಳವಳ್ಳಿ ಮುಖ್ಯ ರಸ್ತೆಯಲ್ಲಿ ಬನ್ನೂರು ಸಮೀಪದ ಸಂಭವಿಸಿದೆ. ಚಿರತೆಗೆ ಡಿಕ್ಕಿ ಹೊಡೆದ ರಭಸಕ್ಕೆ ದ್ವಿಚಕ್ರ ಸವಾರನೂ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾನೆ ಎನ್ನಲಾಗಿದೆ. ಸವಾರನ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

ಮೈಸೂರು ಮಿತ್ರ
ಶುಕ್ರವಾರ 20 ಸೆಪ್ಟೆಂಬರ್ 2024

ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡು ದಿನ ಮೈಸೂರು ಪ್ರವಾಸ



ಮೈಸೂರು, ಸೆ.19(ಬಿಎಲ್‌ಯು)– ಮೈಸೂರಿನಲ್ಲಿ ಎರಡು ದಿನಗಳ ಪ್ರವಾಸ ಕೈಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ಸೆಪ್ಟೆಂಬರ್ 20) ನಗರಕ್ಕೆ ಆಗಮಿಸಲಿದ್ದಾರೆ.

ನಾಳೆ ಬೆಳಗ್ಗೆ ಬೆಂಗಳೂರಿನಿಂದ ವಿಶೇಷ ವಿಮಾನದಲ್ಲಿ ಹೊರಡುವ ಸಿದ್ದರಾಮಯ್ಯ 11 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು.

ನಗರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಬೆಳಗ್ಗೆ 11.15 ಗಂಟೆಗೆ ಆಯೋಜಿಸಿರುವ ಸುವರ್ಣ ಸಂಭ್ರಮ ಕರ್ನಾಟಕ 50 ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ, ಕರ್ನಾಟಕ ಸಾಂಸ್ಕೃತಿಕ ಮುನ್ನೋಟ ಚಿಂತನಾ ಸಮಾವೇಶದಲ್ಲಿ ಭಾಗವಹಿಸುವರು. ಸಂಜೆ 4 ಗಂಟೆಗೆ ವಿಜಯನಗರ 2ನೇ ಹಂತದಲ್ಲಿರುವ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನಲ್ಲಿ ಆಯೋಜಿಸಿರುವ ಪಿ.ಆರ್.ತಿಪ್ಪೇಸ್ವಾಮಿ ಜನ್ಮ ಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಭಾಗವಹಿಸುವ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡುವರು.

ಸೆಪ್ಟೆಂಬರ್ 21ರಂದು ಬೆಳಗ್ಗೆ 10.30 ಗಂಟೆಗೆ ನಗರದ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಆಯೋಜಿಸಿರುವ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ವೇಳೆ ಹಿರಿಯ ಪತ್ರಕರ್ತರಿಗೆ ಅಭಿನಂದನೆ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ತರುವಾಯ ಮಧ್ಯಾಹ್ನ 3 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳುವರು.

ಭಾರತ-ಬಾಂಗ್ಲಾ ಮೊದಲ ಟೆಸ್ಟ್

ದಿನದಂತ್ಯಕ್ಕೆ ಭಾರತ 339/6



ಚೆನ್ನೈ, ಸೆ.19– ರವಿಚಂದ್ರನ್ ಅಶ್ವಿನ್ ಅವರ ಭರ್ಜರಿ ಶತಕ ಹಾಗೂ ಯಶಸ್ವಿ ಜೈಸ್ವಾಲ್, ರವೀಂದ್ರ ಜಡೇಜಾ ಅವರ ಅರ್ಧಶತಕಗಳ ನೆರವಿನಿಂದ ಬಾಂಗ್ಲಾದೇಶದ ವಿರುದ್ಧ ಭಾರತ ಮೊದಲ ಟೆಸ್ಟ್‌ನ ಮೊದಲ ದಿನದ ಅಂತ್ಯಕ್ಕೆ 6 ವಿಕೆಟ್ ನಷ್ಟಕ್ಕೆ 339 ರನ್ ಗಳಿಸಿದೆ.

ಇಲ್ಲಿನ ಎಂಎ ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡದ ಮೊತ್ತ 34 ರನ್ ಆಗುವಷ್ಟರಲ್ಲೇ ತಲಾ 6 ರನ್ ಗಳಿಸಿದ್ದ ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಹಾಗೂ ಶೂನ್ಯಕ್ಕೆ ಶುಭ್‌ಮನ್ ಗಿಲ್ ಅವರ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಜೊತೆಯಾದ ಯಶಸ್ವಿ ಜೈಸ್ವಾಲ್ ಹಾಗೂ ರಿಷಬ್ ಪಂತ್ 62 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ 39 ರನ್ ಗಳಿಸಿ ಪಂತ್ ನಿರ್ಗಮಿಸಿದರೇ, ಮತ್ತೊಂದೆಡೆ ಅರ್ಧಶತಕ ಸಿಡಿಸಿದ್ದ ಜೈಸ್ವಾಲ್ 56 ರನ್ ಗಳಿಸಿ ಔಟಾದರು. ಈ ವೇಳೆ 7ನೇ ವಿಕೆಟ್‌ಗೆ ಜೊತೆಯಾದ ರವಿಚಂದ್ರನ್ ಅಶ್ವಿನ್ ಹಾಗೂ ರವೀಂದ್ರ ಜಡೇಜಾ 195 ರನ್‌ಗಳ ಜೊತೆ ಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಉತ್ತಮವಾಗಿ ಬ್ಯಾಟ್ ಬೀಸಿದ ಅಶ್ವಿನ್ ವೃತ್ತಿ ಜೀವನದ 6ನೇ ಶತಕ ಸಿಡಿಸಿ ಮಿಂಚಿದರು. ಅಂತಿಮವಾಗಿ 112 ಎಸೆತಗಳಲ್ಲಿ 10 ಬೌಂಡರಿ, 2 ಸಿಕ್ಸರ್ ಒಳಗೊಂಡ 102 ರನ್ ಗಳಿಸಿದ್ದು, ಮತ್ತೊಂದೆಡೆ ಇವರಿಗೆ ಉತ್ತಮ ಸಾಥ್ ನೀಡಿದ ಜಡೇಜಾ ಅಜೇಯ 86 ರನ್ ಗಳಿಸಿ ಎರಡನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಬಾಂಗ್ಲಾ ಪರ ಹಸನ್ ಮಹಮೂದ್ 4, ನಹೀದ್ ರಾಣಾ ಹಾಗೂ ಮೆಹೆದಿ ಹಸನ್ ಮಿರ್ಜಾ ತಲಾ ಒಂದೊಂದು ವಿಕೆಟ್ ಪಡೆದರು.

ಮೈಸೂರು ಬಿಗ್ ಟೆಕ್ ಶೋ-2024

ಮೈಸೂರಲ್ಲಿ ಹೊಸ ಉದ್ಯಮ ಸ್ಥಾಪನೆಗೆ ಪೂರಕ ಪರಿಸ್ಥಿತಿ ಬಗ್ಗೆ ಚರ್ಚೆ

● ಉದ್ಯಮ ಸ್ಥಾಪನೆಗೆ ಇರುವ ಪ್ರೋತ್ಸಾಹಕ ಪರಿಸ್ಥಿತಿ ಬಗ್ಗೆಯು ವಿಚಾರ–ವಿನಿಮಯ ● ಭವಿಷ್ಯದಲ್ಲಿ ಮೈಸೂರು ಜಾಗತಿಕ ಸಾಮರ್ಥ್ಯ ಕೇಂದ್ರವಾಗುವ ಆಶಾಭಾವ



ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ನಡೆದ 'ಮೈಸೂರು ಬಿಗ್ ಟೆಕ್ ಶೋ–2024' 4ನೇ ಆವೃತ್ತಿಯಲ್ಲಿ ನವೋದ್ಯಮಿಗಳನ್ನು ಅಭಿನಂದಿಸಲಾಯಿತು. ಐಟಿ, ಬಿಟಿ ಇಲಾಖೆ ಕಾರ್ಯದರ್ಶಿ ಡಾ.ಏಕ್‌ರೂಪ್ ಕೌರ್, ಕೆಡೆಮ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸಂಜೀವ್ ಗುಪ್ತಾ ಮತ್ತಿತರರಿದ್ದರು

ಮೈಸೂರು, ಸೆ.19(ಎಂಕೆ)– ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್(ಕೆಡೆಮ್), ಐಟಿ–ಬಿಟಿ ಇಲಾಖೆ ಸಹಭಾಗಿತ್ವದಲ್ಲಿ ನಡೆದ 'ಮೈಸೂರು ಬಿಗ್ ಟೆಕ್ ಶೋ–2024' 4ನೇ ಆವೃತ್ತಿಯಲ್ಲಿ ಮೈಸೂರನ್ನು ಜಾಗತಿಕ ಮಟ್ಟದಲ್ಲಿ ಗುರ್ತಿಸಿ, ಬಂಡವಾಳ ಹೂಡಿಕೆಯ ಕೇಂದ್ರವನ್ನಾಗಿಸಿ, ಇಲ್ಲಿ ಹೊಸ ಉದ್ಯಮಗಳ ಉತ್ತೇಜನಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಚರ್ಚಿಸಲಾಯಿತು. ಇದೇ ವೇಳೆ ನವೋದ್ಯಮಿಗಳಿಗೆ ಅಭಿನಂದನಾ ಪ್ರೋತ್ಸಾಹ ನೀಡಲಾಯಿತು.

ಬೆಂಗಳೂರಿನ ನಂತರ ಮೈಸೂರನ್ನು ಸಿಲಿಕಾನ್ ಸಿಟಿಯನ್ನಾಗಿಸುವ ನಿಟ್ಟಿನಲ್ಲಿ ಪ್ರತಿಭೆಗಳ ಗುರ್ತಿಸುವಿಕೆ, ಮಾಹಿತಿ ತಂತ್ರಜ್ಞಾನಕ್ಕೆ ಹೊತ್ತು ನೀಡುವುದು ಹಾಗೂ ಜ್ಞಾನ ಹಂಚಿಕೆ, ಉದ್ಯಮ ಬೆಳವಣಿಗೆಗೆ ಇರುವ ಅವಕಾಶಗಳನ್ನು ಉತ್ತೇಜಿಸಲು ನಿರ್ಧರಿಸಲಾಯಿತು. ಮಾಹಿತಿ ತಂತ್ರಜ್ಞಾನ ಹಾಗೂ ಸಂಬಂಧಿತ ಕ್ಷೇತ್ರಕ್ಕೆ ಮೈಸೂರು ನಗರದ ಕೊಡುಗೆ 2 ಬಿಲಿಯನ್ ಅಮೆರಿಕನ್ ಡಾಲರ್ ಆಗಿದ್ದು ಮುಂದಿನ ಐದು ವರ್ಷದಲ್ಲಿ ಶೇ.8 ರಿಂದ 9 ಪಟ್ಟದಲ್ಲಿ ಬೆಳೆಯುವ ಭರವಸೆ ವ್ಯಕ್ತವಾಯಿತು.

ಒಡಂಬಡಿಕೆ...

ಇದೇ ವೇಳೆ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್(ಕೆಡೆಮ್)ನೊಂದಿಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್(ಎಸ್‌ಡಿಎಂಐಎಂಡಿ), ಕ್ಲೌಡ್ ಸೆಕ್ಯುರಿಟಿ ಅಲೈಯನ್ಸ್(ಸಿಎಸ್‌ಎ) ಹಾಗೂ ಮಾಹಿತಿ ಭದ್ರತಾ ಒಕ್ಕೂಟ(ಐಎಸ್‌ಎ2) ಒಡಂಬಡಿಕೆ ಮಾಡಿಕೊಳ್ಳಲಾಯಿತು. ಹಾಗೆಂಯೇ ಹಣಕಾಸಿನ ನೆರವು ಪಡೆಯಲಿರುವ ನವೋದ್ಯಮಗಳಾದ 'ಮೊಮ್ಮಿ ಮಿಲ್ಸ್ ಫುಡ್ಸ್ ಪ್ರೈವೇಟ್ ಲಿಮಿಟೆಡ್', 'ಟಿಯು ಕನೆಕ್ಟರ್ಸ್ ಪ್ರೈವೇಟ್ ಲಿಮಿಟೆಡ್' ಹಾಗೂ 'ಕನ್ನಡ ಫೊನೆಟಿಕ್ಸ್'ಗೆ ಅಭಿನಂದನಾ ಪತ್ರ ನೀಡಲಾಯಿತು.

ದೇಶ–ವಿದೇಶಗಳಿಂದ 450ಕ್ಕೂ ಹೆಚ್ಚು ಪ್ರತಿನಿಧಿಗಳು, 45 ಮಂದಿ ಜಾಗತಿಕ ಭಾಷಣಕಾರರು (ಮೈಸೂರು ಹೊರಗಿನಿಂದ ಹೆಚ್ಚಿನವರು), 60 ವಿದ್ಯಾರ್ಥಿಗಳು, 6 ದೇಶದ ಪಾಲುದಾರರು, 15 ಕಾಲೇಜುಗಳು, 25 ನವೋದ್ಯಮ ಪ್ರದರ್ಶನ ಬೂತ್‌ಗಳು ಹಾಗೂ ಮಾಧ್ಯಮ ಮತ್ತು ತಂತ್ರಜ್ಞಾನದ ಪಾಲುದಾರರು ಬಿಗ್ ಟೆಕ್ ಶೋನಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು.

ಮೈಸೂರು ಜಾಗತಿಕ ಸಾಮರ್ಥ್ಯ ಕೇಂದ್ರ: ಐಟಿ, ಬಿಟಿ ಇಲಾಖೆ ಕಾರ್ಯದರ್ಶಿ ಡಾ.ಏಕ್‌ರೂಪ್ ಕೌರ್ ಮಾತನಾಡಿ, ಮೈಸೂರು ಜಾಗತಿಕ ಸಾಮರ್ಥ್ಯವುಳ್ಳ ಕೇಂದ್ರವಾಗಲಿದೆ. ಸುಸ್ಥಿರ ಬೆಳವಣಿಗೆ ಸಾಧಿಸುವ ನಿಟ್ಟಿನಲ್ಲಿ ಮೈಸೂರು ಅಪಾರ ಸಾಮರ್ಥ್ಯ ಹೊಂದಿದ್ದು, ನೂತನವಾಗಿ ಅನಾವರಣಗೊಳಿಸಿದ ಸೈಬರ್ ಸೆಕ್ಯುರಿಟಿ ನೀತಿ ಹಾಗೂ ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರ ಮೈಸೂರಿನಲ್ಲಿ ಸೈಬರ್ ಸೆಕ್ಯುರಿಟಿ ಹಬ್ ಉತ್ತೇಜಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಬೆಂಗಳೂರು ನಂತರ ಮೈಸೂರು, ಮಂಗಳೂರು, ಹುಬ್ಬಳ್ಳಿ– ಧಾರವಾಡ ಮತ್ತು ಬೆಳಗಾವಿ ನಗರದಲ್ಲಿ ಮಾಹಿತಿ ತಂತ್ರಜ್ಞಾನ ಆಧಾರಿತ ಕಂಪನಿಗಳ ಆರಂಭ, ಸ್ಟಾರ್ಟ್‌ಅಪ್‌ಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಜಾಗತಿಕ ಸಾಮರ್ಥ್ಯ ಕೇಂದ್ರಗಳ ನೀತಿ ರೂಪಿಸಲಾಗಿದೆ ಮೈಸೂರಿಗೆ ಈಗ ಹೊಸದಾಗಿ 8 ಕಂಪನಿಗಳು ಬಂದಿವೆ. ಕೋಚನಹಳ್ಳಿಯಲ್ಲಿ ಕೈಗಾರಿಕಾ ಪ್ರದೇಶದಲ್ಲಿ ಸೆಮಿಕಂಡಕ್ಟರ್ ಯೋಜನೆ ಜಾರಿಗೊಳಿಸುವುದು ಸೇರಿದಂತೆ ಅನೇಕ ಉದ್ದೇಶವನ್ನು ಹೊಂದಲಾಗಿದೆ. ದ್ವಿತೀಯ ದರ್ಜೆಯ ನಗರಗಳಲ್ಲಿ ಮೈಸೂರು ಎಲ್ಲಾ ರೀತಿಯ ಸೌಲಭ್ಯವನ್ನು ಹೊಂದಿರುವ ನಗರವಾಗಿದ್ದು, ಇಲ್ಲಿಗೆ ಅಗತ್ಯವಿರುವ ಎಲ್ಲಾ ರೀತಿಯ ನೆರವು ನೀಡಲು ಸರ್ಕಾರ ಸಿದ್ಧವಿದೆ ಎಂದರು.

ಕೌಶಲ್ಯ ತರಬೇತಿ: 'ನಿಪುಣ ಕರ್ನಾಟಕ' ಯೋಜನೆಯಡಿ ಯುವಕ–ಯುವತಿಯರಿಗೆ ಕೌಶಲ್ಯ ತರಬೇತಿ ನೀಡಲಾ ಗುತ್ತಿದೆ. ಪ್ರತೀ ವರ್ಷ ವಿದ್ಯಾಭ್ಯಾಸ ಮುಗಿಸಿ ಹೊರಬರುವ 25 ಸಾವಿರ ಇಂಜಿನಿಯರ್ ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿ ನೀಡುವ ಗುರಿಯನ್ನು ಹೊಂದಲಾಗಿದೆ. ಹಾಗೆಯೇ ಶಿಕ್ಷಣ ಹಾಗೂ ಉದ್ಯಮ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಕೌಶಲ್ಯ ತರಬೇತಿ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಬಿಗ್ ದೃಷ್ಟಿಕೋನ: ಎಕ್ಸೆಲ್ ಸಾಫ್ಟ್‌ನ ಸಂಸ್ಥಾಪಕ ಸುಧನ್ವ ಧನಂಜಯ ಮಾತನಾಡಿ, ಮೈಸೂರು ಬಿಗ್ ಟೆಕ್ ಶೋ ದೃಷ್ಟಿಕೋನವೆಂದರೆ ಮೈಸೂರಿನಲ್ಲಿ ಇರಿ, ಮೈಸೂರಿನಲ್ಲಿ ಹೂಡಿಕೆ ಮಾಡಿ ಹಾಗೂ ಮೈಸೂರಿನಲ್ಲಿ ಬೆಳೆಯಿರಿ(B-Be in Mysuru, I-Invest in Mysuru, G-Grow in Mysuru-BIG) ಎಂಬುದಾಗಿದೆ. ಕರ್ನಾಟಕ ಸರ್ಕಾರವು ಮೈಸೂರನ್ನು ಎಲ್ಲಾ ರೀತಿಯಲ್ಲೂ ಉತ್ತೇಜಿಸುತ್ತಿದೆ ಮತ್ತು ನಂಜನಗೂಡಿನ ಬಳಿ ಎಲೆಕ್ಟ್ರಾನಿಕ್ಸ್ ಉತ್ಪಾದನಾ ಸಮೂಹದ ಬೆಳವಣಿಗೆಗೆ ದೊಡ್ಡ ಯೋಜನೆಗಳನ್ನು ಜಾರಿಗೆ ತರುತ್ತಿದೆ ಎಂದು ತಿಳಿಸಿದರು.

ಗಮನಾರ್ಹ ಸೌಲಭ್ಯ: ಇನ್ಫೋಸಿಸ್ ಮೈಸೂರು ಕ್ಯಾಂಪಸ್ ನ ಉಪಾಧ್ಯಕ್ಷ ವಿನಾಯಕ ಹೆಗ್ಡೆ ಮಾತನಾಡಿ, ಮೈಸೂರಿನಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಮತ್ತು ಮಾಹಿತಿ ತಂತ್ರಜ್ಞಾನ ಆಧಾರಿತ ಉದ್ಯಮಕ್ಕೆ ಉತ್ತಮವಾದ ಸೌಲಭ್ಯವಿದೆ. ರಾಜ್ಯದ ದ್ವಿತೀಯ ದರ್ಜೆಯ ನಗರಗಳಲ್ಲಿ ಇಷ್ಟೊಂದು ರೀತಿಯ ಸೌಲಭ್ಯವಿದೆ ಎಂಬುದೇ ಗಮನಾರ್ಹ. ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಸುಮಾರು 15 ಸಾವಿರ ಮಂದಿ ಇದ್ದಾರೆ ಎಂದು.

ಉತ್ತಮ ಸಂಪರ್ಕ: ಕೆಡೆಮ್ ಅಧ್ಯಕ್ಷ ಬಿ.ವಿ. ನಾಯ್ಡು ಮಾತನಾಡಿ, ಮೈಸೂರು ಉತ್ತಮ ಸಂಪರ್ಕ ಸೌಲಭ್ಯವನ್ನು ಹೊಂದಿದ್ದು, ಎಲ್ಲಾ ರೀತಿಯ ಮೂಲಭೂತ ಸೌಲಭ್ಯವನ್ನು ಒಳಗೊಂಡಿದೆ. ರಾಜಧಾನಿ ಯಿಂದ ಕೇವಲ ಒಂದೂವರೆ ಗಂಟೆಯಲ್ಲಿ ನಾವು ಮೈಸೂರನ್ನು ತಲುಪಬಹುದಾಗಿದೆ. ಹಾಗೆಂಯೇ ಮೈಸೂರಿಗೆ 3 ಇಎಂಎ ಕಂಪನಿಗಳು ಮೈಸೂರಿಗೆ ಬಂದಿವೆ ಎಂದು ಹೇಳಿದರು.

ಕಂಟ್ರಿ ಸಂಸ್ಥೆ ನಿರ್ದೇಶಕ ನೀರಜ್ ಜೈನ್, ರಂಗಸನ್ಸ್ ಏರೋಸ್ಪೇಸ್ ಸಿಇಓ ಪವನ್ ರಂಗ, ಕಂಟ್ರಿ ಹೆಡ್ ಇಂಡಿಯಾದ ಉಪಾಧ್ಯಕ್ಷ ಜೀತೇಂದ್ರ ಚಡ್ಡ, ಕೆಡೆಮ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸಂಜೀವ್ ಗುಪ್ತಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್ ಸ್ಥಾಪನೆ!

ಮೈಸೂರು, ಸೆ.19(ಎಂಕೆ)– ಮೈಸೂರಲ್ಲಿ ದೇಶದ ಮೊಟ್ಟ ಮೊದಲ ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್(ಪಿಸಿಬಿ) ಹಾಗೂ ಪೂರೈಕೆ ಸರಪಳಿ ಕ್ಲಸ್ಟರ್ ಸ್ಥಾಪನೆ ಆಗುತ್ತಿದ್ದು, ಈ ಮೂಲಕ ಮೈಸೂರು ದೇಶದ ಸಿಲಿಕಾನ್ ನಗರವಾಗಲಿದೆ ಎಂದು ವಿದ್ಯುನ್ಮಾನ, ಐಟಿ, ಬಿಟಿ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದರು.

'ಮೈಸೂರು ಬಿಗ್ ಟೆಕ್ ಶೋ–2024' ಸಮಾರೋಪ ಸಂದೇಶ ನೀಡಿದ ಅವರು, ಉದ್ಯಮಿಗಳ ಜೊತೆಗೆ ಎಲೆಕ್ಟ್ರಾನಿಕ್ಸ್ ವ್ಯವಸ್ಥೆ, ವಿಜ್ಞಾನ, ಸಿಸ್ಟಮ್ ಸೈನ್ಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ನೀತಿಯನ್ನು ಪರಿಷ್ಕರಿಸುವ ಕುರಿತ ಚರ್ಚೆ ನಡೆಯುತ್ತಿದೆ. ಮೈಸೂರು ಭಾಗದಲ್ಲಿ ವಿಶೇಷ ಪಿಸಿಬಿ ಕ್ಲಸ್ಟರ್ ಸ್ಥಾಪಿಸಲು ಎದುರು ನೋಡುತಿದ್ದೇವೆ ಎಂದರು.

ಕಳೆದ 12 ತಿಂಗಳಲ್ಲಿ 8ಕ್ಕೂ ಹೆಚ್ಚು ತಂತ್ರಜ್ಞಾನ ಕಂಪನಿಗಳು ಮೈಸೂರು ಕ್ಲಸ್ಟರ್‌ನಲ್ಲಿ ಕಾರ್ಯಾಚರಣೆ ಆರಂಭಿಸಿ, ತಮ್ಮ ಸೇವೆಯನ್ನು ವಿಸ್ತರಿಸಿವೆ. ಇಎಂಸಿ 2.0 ಅಡಿಯಲ್ಲಿ ಸುಮಾರು 235 ಎಕರೆ ಪ್ರದೇಶವನ್ನು ಸೇರ್ಪಡೆಗೊಳಿಸಲಾಗಿದೆ. ಈ ಮೂಲಕ ಹೂಡಿಕೆದಾರರಿಗೆ ಅಗತ್ಯ ಮೂಲ ಸೌಕರ್ಯ ಒದಗಿಸಲಾಗುತ್ತಿದೆ. ಇದರ ಪರಿಣಾಮವಾಗಿ ಮುಂಬರುವ ದಿನಗಳಲ್ಲಿ 5,000 ಕೋಟಿ ರೂ. ಹೂಡಿಕೆ ಮತ್ತು 3,000ಕ್ಕೂ ಹೆಚ್ಚು ಹೊಸ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಅವರು ಹೇಳಿದರು.

ಸ್ವಚ್ಛತಾ ಪ್ರತಿಜ್ಞಾ ಕಾರ್ಯಕ್ರಮ...



ಮೈಸೂರು ವಿಭಾಗೀಯ ರೈಲ್ವೆ ಕಚೇರಿಯ ಎಸ್‌ಆರ್‌ಎಂನ ಸಂಪರ್ಕ ಮತ್ತು ದೂರ ಸಂಪರ್ಕ ಶಾಖೆ ವತಿಯಿಂದ 'ಸ್ವಚ್ಛತಾ ಸೇವೆ'ಯ ಜಾಗೃತಿ ಅಂಗವಾಗಿ ಸ್ವಚ್ಛತಾ ಪ್ರತಿಜ್ಞಾ ಕಾರ್ಯಕ್ರಮವನ್ನು ಐಆರ್‌ಎಸ್‌ಎಸ್‌ಇ ಹಿರಿಯ ವಿಭಾಗೀಯ ಇಂಜಿನಿಯರ್ ಜೆ.ಚಂದ್ರಶೇಖರ್ ಸಸಿ ನೆಡುವ ಮೂಲಕ ಉದ್ಘಾಟಿಸಿದರು. ಈ ವೇಳೆ ಶಾಖೆಯ ಮುಖ್ಯ ಮೇಲ್ವಿಚಾರಕ ಬಿ.ವಿ.ಕುಮಾರ್, ಕಿರಿಯ ಇಂಜಿನಿಯರ್ ಷರೀಫ್, ಡಿ.ವೆಂಕಟರಾಜು, ನಾಗರಾಜು, ಪ್ರವೀಣ್, ಯಶವಂತ್, ಮಂಜುನಾಥ್, ಇರ್ಫಾನ್, ಪ್ರವೀಣ್, ಸತೀಶ್, ಮಧುಸೂದನ್, ನ್ಯೂಮನ್, ರಂಜಿತಾ, ಪುಷ್ಪ, ಸುಸ್ಮಿತಾ, ಯೋಗೇಶ್ವರಿ, ಸುಧೇಶ, ಯಶಸ್ವಿನಿ ಉಪಸ್ಥಿತರಿದ್ದರು.

ಸೆ.22, ವಾರಾಂತ್ಯ ನಾಟಕ ಪ್ರದರ್ಶನ

ಮೈಸೂರು,ಸೆ.19– ರಂಗಾಯಣದ ವಾರಾಂತ್ಯ ರಂಗಪ್ರದರ್ಶನದಲ್ಲಿ ಬೆಂಗಳೂರಿನ ಪಯಣ ರಂಗತಂಡ ಶ್ರೀಜಿತ್ ಸುಂದರಂ ಅವರು ನಿರ್ದೇಶನ ಮಾಡಿ ರುವ 'ತಲ್ಕಿ–ಟ್ರುತ್ ಡ್ರೀಮ್ ವಯಾ ಬೆಂಗಳೂರು' ನಾಟಕ ಪ್ರದರ್ಶನವನ್ನು ಹವ್ಯಾಸಿ ರಂಗ ಪ್ರಯೋಗವಾಗಿ ಸೆ.22 ರದು ಭಾನುವಾರ ಸಂಜೆ 6:30ಕ್ಕೆ ಭೂಮಿ ಗೀತ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದ್ದಾರೆ.

ಸೆ.21, ಸಾಹಿತಿಗಳಾದ ಡಾ.ಸಿಪಿಕೆ, ಸತೀಶ್ ಜವರೇಗೌಡರಿಗೆ ಮಹಾತ್ಮ ಗಾಂಧಿ ಸದ್ಭಾವನ ಪ್ರಶಸ್ತಿ ಪ್ರದಾನ



ಸಿಪಿಕೆ



ಟಿ.ಸತೀಶ್

ಮೈಸೂರು, ಸೆ.19–ಪಂಪ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್(ಸಿಪಿಕೆ) ಹಾಗೂ ಯುವ ಸಾಹಿತಿ ಟಿ.ಸತೀಶ್ ಜವರೇಗೌಡ ಅವರು ಬೆಂಗಳೂರಿನ ಕನ್ನಡಾಂಬೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘ ಮತ್ತು ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ಕೊಡಮಾಡುವ 'ರಾಷ್ಟ್ರಪಿತ ಮಹಾತ್ಮಗಾಂಧಿ ಸದ್ಭಾವನಾ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ.ಗುಣವಂತ ಮಂಜು ತಿಳಿಸಿದ್ದಾರೆ. ಕನ್ನಡ ಸಾಹಿತ್ಯದ ಬಹುಮುಖಿ ಪ್ರಕಾರಗಳಲ್ಲಿ ಮತ್ತು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಡಾ.ಸಿಪಿಕೆ ಸಲ್ಲಿಸಿರುವ ಮೌಲಿಕ ಸೇವೆ ಹಾಗೂ ಸಾಂಸ್ಕೃತಿಕ ಸಂಘಟನೆ, ಸಾಹಿತ್ಯ ಮತ್ತು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಟಿ.ಸತೀಶ್ ಜವರೇಗೌಡ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ, ಇಬ್ಬರೂ ಸಾಧಕರಿಗೂ ಮಹಾತ್ಮಗಾಂಧಿ ಸದ್ಭಾವನಾ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಮೈಸೂರಿನ ವಿಜಯನಗರ ಮೊದಲನೆಯ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಸೆ.21ರಂದು ಮಧ್ಯಾಹ್ನ 2 ಗಂಟೆಗೆ 78ನೆಯ ಸ್ವಾತಂತ್ರ್ಯೋತ್ಸವ ಸಂಭ್ರಮದ ಅಂಗವಾಗಿ ಜರುಗಲಿರುವ ಸುಗಮ ಸಂಗೀತ, ಜಾನಪದ ಗಾಯನ ಮತ್ತು ಭರತನಾಟ್ಯ ಪ್ರದರ್ಶನ ಸಮಾರಂಭದಲ್ಲಿ ಪ್ರಸಿದ್ಧ ಶಿಕ್ಷಣ ತಜ್ಞರು, ಹಿರಿಯ ರಾಜಕೀಯ ವಿಶ್ಲೇಷಕರು ಮತ್ತು ಸಾಹಿತಿ ಪ್ರೊ.ಕೆ.ಇ.ರಾಧಕೃಷ್ಣ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದು, 'ಇಂದು ಸಂಜೆ' ಪತ್ರಿಕೆಯ ಪ್ರಧಾನ ವ್ಯವಸ್ಥಾಪಕ ಸಂಪಾದಕಿ ಡಾ.ಟಿ.ವೈ.ಪದ್ಮನಾಗರಾಜ್, ಸಮಾಜ ಸೇವಕ ಕೃಷ್ಣೇಗೌಡ, ಗೌಡ್ತಿಯರ ಸೇನೆ ಕಾರ್ಯಾಧ್ಯಕ್ಷೆ ಹೆಚ್. ಪುಷ್ಪಗೌಡ, ನಟಿಯರಾದ ತನುಷ, ನಿರೋಷ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಶಾಸಕ ಮುನಿರತ್ನ ವಿರುದ್ಧ ಮೈಸೂರಲ್ಲಿ ದಸಂಸ ಪ್ರತಿಭಟನೆ



ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಶಾಸಕ ಮುನಿರತ್ನ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಮೈಸೂರು, ಸೆ.19(ಎಂಟಿವೈ)– ದಲಿತರ ಬಗ್ಗೆ ಹಗುರವಾಗಿ ಮಾತನಾಡಿ ಜಾತಿನಿಂದನೆ ಮಾಡಿರುವ ಮುನಿರತ್ನ ಅವರನ್ನು ಶಾಸಕ ಸ್ಥಾನವನ್ನು ರದ್ದುಗೊಳಿಸಿ ಬಿಜೆಪಿ ಪಕ್ಷದಿಂದ ಉಚ್ಚಾಟಿಸಬೇಕು ಎಂದು ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಗುರುವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ದಸಂಸ ಕಾರ್ಯಕರ್ತರು, ಮಹಿಳೆಯರನ್ನು ಕೀಳಾಗಿ ಕಾಣುವ ಮನಸ್ಥಿತಿಯುಳ್ಳ ಶಾಸಕ ಮುನಿರತ್ನ ಅವರನ್ನು ವಜಾಗೊಳಿಸುವಂತೆ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ಮಾತನಾಡಿ, ಈಗಾಗಲೇ ಮುನಿರತ್ನ ವಿರುದ್ಧ ಏಳು ಪ್ರಕರಣಗಳು ದಾಖಲಾಗಿದ್ದು, ಕಾನೂನಿನ ಕುಣಿಕೆಯನ್ನು ಬಿಗಿ ಮಾಡಿ, ಕಠಿಣ ಶಿಕ್ಷೆ ವಿಧಿಸಿ ಜಾತಿ ನಿಂದನೆ ಮಾಡುವ ಜನಪ್ರತಿನಿಧಿಗಳಿಗೆ ಎಚ್ಚರಿಕೆ ನೀಡಬೇಕು. ದುರ್ನಡತೆಯ ಮುನಿರತ್ನ ಜನಪ್ರತಿನಿಧಿ ಸ್ಥಾನದಲ್ಲಿ ಮುಂದುವರೆಯುವ ನೈತಿಕ ಅರ್ಹತೆಗಳನ್ನು ಕಳೆದುಕೊಂಡಿದ್ದಾರೆ ಎಂದರು. ಮುನಿರತ್ನ ನಡೆಸಿರುವ ದುಷ್ಕೃತ್ಯಗಳ ವಿರುದ್ಧ ದಾಖಲಾಗಿರುವ ದೂರುಗಳ ಆಧಾರದ ಮೇಲೆ ಹಾಗೂ ಭುಗಿಲೆದ್ದಿರುವ ಸಾರ್ವಜನಿಕ ಆಕ್ರೋಶ, ಪ್ರತಿಭಟನೆಗಳನ್ನು ಗಂಭೀರವಾಗಿ ಪರಿಗಣಿಸಿ ಮುನಿರತ್ನ ಅವರ ಶಾಸಕ ಸ್ಥಾನವನ್ನು ವಿಧಾನಸಭಾಧ್ಯಕ್ಷರು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿಯ ಅಂತರಿಕ ಶಿಸ್ತು ಮತ್ತು ಸಂಘಟನೆಯ ಜಿಲ್ಲಾ ಸಂಚಾಲಕ ಶಂಭುಲಿಂಗಸ್ವಾಮಿ, ಸಾಂಸ್ಕೃತಿಕ ವಿಭಾಗದ ಹೆಗ್ಗನೂರು ನಿಂಗರಾಜು, ಜಿಲ್ಲಾ ಖಜಾಂಚಿ ಬಿ.ಡಿ.ಶಿವಬುದ್ಧಿ, ಎಸ್.ರಾಜಣ್ಣ, ಮಹೇಶ, ಸೋಮಣ್ಣ, ಶಿವು, ರಾಮ್, ಸಾಧಿಕ್, ಅಫ್ಸರ್ ಅಹಮದ್, ಶೇಖರ್, ಕೃಷ್ಣ, ಶಿವಕುಮಾರ್, ಡಾ.ಟಿ.ಮಂಜು, ದಿಲೀಪ್, ಎನ್.ರಮೇಶ್, ಕುಮಾರ್ ಮಧುವನ, ಸೋಮಣ್ಣ, ಮಹದೇವಮ್ಮ, ಗೌರಮ್ಮ, ಪ್ರೇಮ, ರಾಜೇಶ್ವರಿ, ಮಂಗಳಾ, ಸೆಲ್ವಿ, ಪುಟ್ಟತಾಯಮ್ಮ, ಸಿದ್ದಮ್ಮ, ಲಕ್ಷ್ಮೀ, ತಾಯಮ್ಮ, ಚಿಕ್ಕತಾಯಮ್ಮ, ಜಯಲಕ್ಷ್ಮೀ, ಕುಮಾರಿ, ಶಶಿಕಲಾ, ಪುಷ್ಪಾ, ಶಿವಮ್ಮ, ಜಯಮ್ಮ, ಲೀಲಾ, ಲೀಲಾವತಿ, ಕಾಳಮ್ಮ, ಮಂಚಮ್ಮ, ವಿಜಯಲಕ್ಷ್ಮೀ, ಸ್ವರ್ಣಗೌರಿ, ಗೌರಮ್ಮ ಇನ್ನಿತರರು ಪಾಲ್ಗೊಂಡಿದ್ದರು.

ದೇಶ - ವಿದೇಶ

ದಿನನಿತ್ಯ ನೂರಕ್ಕೂ ಹೆಚ್ಚು ಬಾರಿ ಕರೆ; ಬೇಸತ್ತ ಪತ್ನಿ ದೂರು, ಪತಿ ಬಂಧನ




ಟೋಕಿಯೋ: ದಿನಕ್ಕೆ ನೂರಕ್ಕೂ ಅಧಿಕ ಬಾರಿ ಕರೆ ಮಾಡಿದ ಪತಿಯನ್ನೇ ಪತ್ನಿಯೊಬ್ಬಳು ಜೈಲಿಗಟ್ಟಿರುವ ವಿಲಕ್ಷಣ ಘಟನೆ ಜಪಾನ್‌ನಲ್ಲಿ ನಡೆದಿದೆ. ಸಂಗಾತಿಯನ್ನು ನಿರ್ಲಕ್ಷಿಸುವುದು ತಪ್ಪು. ಏಕೆಂದರೆ ಅದು ಸಂಬಂಧದಲ್ಲಿ ವಿವಿಧ ಸಮಸ್ಯೆಗಳನ್ನು ಉಂಟು ಮಾಡಬಹುದು. ಅಂತೆಯೇ ಸಂಗಾತಿ ಕುರಿತ ಅತಿಯಾದ ಕಾಳಜಿಯು ಸಮಸ್ಯೆಯಾಗಬಹುದು. ವಿಶೇಷವಾಗಿ ಆ ಕಾಳಜಿಯು ಒಂದು ನಿರ್ದಿಷ್ಟ ಗಡಿ ದಾಟಿದರೆ ಅದು ಸಂಪೂರ್ಣ ವಿಭಿನ್ನ ಸಮಸ್ಯೆಗೆ ಕಾರಣವಾಗುತ್ತದೆ ಎಂಬುದಕ್ಕೆ ಇದು ಉದಾಹರಣೆ ಇದೆ. ಜಪಾನ್‌ನಲ್ಲಿ ಓರ್ವ ವ್ಯಕ್ತಿ ಪತ್ನಿ ಕುರಿತು ಅತಿಯಾದ ಕಾಳಜಿ ತೋರಿದ್ದಕ್ಕೆ ಇದೀಗ ಜೈಲು ಪಾಲಾಗಿದ್ದಾನೆ. ಜಪಾನ್‌ನ ಅಮಗಸಾಕಿ ನಗರದ ನಿವಾಸಿ 38 ವರ್ಷದ ಪತಿ ತನ್ನ 31 ವರ್ಷದ ಪತ್ನಿಗೆ ಪದೇ ಪದೇ ಕರೆ ಮಾಡಿ ಇದೀಗ ಜೈಲು ಹಕ್ಕಿಯಾಗಿದ್ದಾನೆ. ಮಹಿಳೆ ಹೇಳಿಕೊಂಡಿರುವಂತೆ ಆತ ದಿನಕ್ಕೆ 100ಕ್ಕೂ ಅಧಿಕ ಬಾರಿ ಕರೆ ಮಾಡಿದ್ದಾನೆ. ಮಹಿಳೆ ಕರೆ ಸ್ವೀಕರಿಸದಿದ್ದಾಗ ಅಪರಿಚಿತ ಸಂಖ್ಯೆಗಳಿಂದ ಕರೆ ಮಾಡಲಾರಂಭಿಸಿದ್ದಾನೆ. ಆರಂಭದಲ್ಲಿ ಮಹಿಳೆ ಕರೆ ಸ್ವೀಕರಿಸಿದ್ದಾಳೆ. ಆದರೆ ಆತ ಏನೂ ಮಾತನಾಡದೇ ಕರೆ ಕಟ್ ಮಾಡಿದ್ದಾನೆ.

ಭೂ ವಿವಾದ; 80 ಮನೆಗಳಿಗೆ ಬೆಂಕಿ ಹಚ್ಚಿದ ದುಷ್ಕರ್ಮಿಗಳು



ಪಾಟ್ನಾ: ಭೂ ವಿವಾದ ಸಂಬಂಧ ನಡೆದ ಗುಂಡಿನ ದಾಳಿಯ ನಂತರ ಬುಧವಾರ ತಡರಾತ್ರಿ ನವಾಡ ಜಿಲ್ಲೆಯ ಮುಫಾಸಿಲ್ ಪೊಲೀಸ್ ಠಾಣಾ ವ್ಯಾಪ್ತಿಯ ಮಹಾದಲಿತ್ ತೊಲಾ ಗ್ರಾಮದಲ್ಲಿ ದುಷ್ಕರ್ಮಿಗಳ ಗುಂಪೊಂದು ಸುಮಾರು 80 ಮನೆಗಳಿಗೆ ಬೆಂಕಿ ಹಚ್ಚಿದೆ. ಮಹಾದಲಿತ ಸಮುದಾಯದ ಜನರು ಕಳೆದ 10 ವರ್ಷಗಳಿಂದ ಸರ್ಕಾರಿ ಭೂಮಿಯಲ್ಲಿ ವಾಸಿಸುತ್ತಿದ್ದಾರೆ. ದುಷ್ಕರ್ಮಿಗಳು ಮಹಾದಲಿತ ತೊಲಾಗೆ ಬಂದು ಗುಂಡಿನ ದಾಳಿ ನಡೆಸಿದ್ದಾರೆ. ನಂತರ, ಜನರು ಒಳಗೆ ಇದ್ದಾಗ ಅವರು ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ. ಕೂಡಲೇ ಬೆಂಕಿ ನಂದಿಸಿದ ಕಾರಣ ಮನೆಗಳು ಸಂಪೂರ್ಣವಾಗಿ ಸುಟ್ಟುಹೋಗಿಲ್ಲ, ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ತಡೆಯಲು ಗ್ರಾಮದಲ್ಲಿ 100ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದೆ. ಪ್ರಮುಖ ಆರೋಪಿಯನ್ನು ಮತ್ತು ಇತರ 10 ಜನರನ್ನು ಬಂಧಿಸಲಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ನಡೆಸಲಾಗುತ್ತಿದೆ. ಪರಿಸ್ಥಿತಿ ಈಗ ನಿಯಂತ್ರಣದಲ್ಲಿದೆ. ಇನ್ನು ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ತಡೆಯಲು ಪೊಲೀಸ್ ತುಕಡಿಗಳನ್ನು ನಿಯೋಜಿಸಲಾಗಿದೆ.

ಅಮೆರಿಕದಲ್ಲಿ ಭಾರತೀಯನ ಜ್ಯುವೆಲರಿಗೆ ಸಿನಿಮೀಯ ರೀತಿ ಕನ್ನ



ಷಿಕಾಗೋ: ಕ್ರೈಂ ಥ್ರಿಲ್ಲರ್ ಸಿನಿಮಾಗಳಲ್ಲಿ ತೋರಿಸುವಂತಹ ದರೋಡೆ ಅಮೆರಿಕದ ಷಿಕಾಗೋದಲ್ಲಿ ನಡೆದಿದೆ. ಕಪ್ಪು ಬಣ್ಣದ ಉಡುಪಿನಲ್ಲಿ ಬಂದ ಮೂವರು ಮುಸುಕುಧಾರಿಗಳು ಭಾರತ ಮೂಲದ ವ್ಯಕ್ತಿಯ ದರ್ಬಾರ್ ಜ್ಯುವೆಲರ್ಸ್ ಆಭರಣ ಮಳಿಗೆಯನ್ನು ದೋಚಿದ್ದಾರೆ. ಈ ಘಟನೆಯ ಮೈ ಜುಮ್ಮೆನಿಸುವ ವಿಡಿಯೋ ವೈರಲ್ ಆಗಿದೆ. ಸುತ್ತಿಗೆಯಿಂದ ಮುಂಭಾಗದ ಬಾಗಿಲು ಒಡೆದ ದುಷ್ಕರ್ಮಿ ಗಳು 1 ಲಕ್ಷ ಡಾಲರ್‌ಗೂ ಅಧಿಕ ಮೊತ್ತದ ಆಭರಣ ಹೊತ್ತು ಪರಾರಿಯಾಗಿದ್ದಾರೆ. ಮೇ ತಿಂಗಳಲ್ಲಿ ಇದೇ ಬೀದಿಯ ಜಾರ್ ಜ್ಯುವೆಲರ್ಸ್ ಶಾಪ್ ಬಾಗಿಲನ್ನು ಸುತ್ತಿಗೆಯಿಂದ ಬಾಗಿಲು ಒಡೆದು ಒಳಗೆ ನುಗ್ಗಿದ್ದ ಮೂವರು ದರೋಡೆಕೋರರು ಕೈಗೆ ಸಿಕ್ಕಷ್ಟು ಆಭರಣಗಳನ್ನು ದೋಚಿದ್ದರು. ಆ ದರೋಡೆಗೂ, ಈಗ ನಡೆದಿರುವ ದರೋಡೆ ಶೈಲಿಗೂ ಯಾವ ವ್ಯತ್ಯಾಸವೂ ಇಲ್ಲ. ಕಳೆದ ಬಾರಿ ಅವರು ಬಿಳಿ ಜೀಪ್ ಗ್ರಾಂಡ್ ಚೆರೋಕೀ ಕಾರು ಬಳಸಿದ್ದರೆ, ಈಗ ಬಿಳಿ ಡಾಡ್ಜ್ ಚಾರ್ಜರ್ ಅನ್ನು ಬಳಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಎರಡೂ ಕೃತ್ಯಗಳಿಗೆ ಸಂಬಂಧ ಇರುವ ಅನುಮಾನದೊಂದಿಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

18 ಗಂಟೆ ಕಾರ್ಯಾಚರಣೆ; 28 ಅಡಿ ಆಳದ ಬೋರ್‌ವೆಲ್‌ನಿಂದ ಮಗು ರಕ್ಷಣೆ



ದೌಸಾ: ಸುಮಾರು 28 ಅಡಿ ಆಳದ ತೆರೆದ ಕೊಳವೆ ಬಾವಿಗೆ ಬುಧವಾರ ಬಿದ್ದಿದ್ದ ಎರಡು ವರ್ಷದ ಮಗುವನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ ಗುರುವಾರ ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

ರಾಜಸ್ಥಾನದ ದೌಸಾದಲ್ಲಿ ಈ ಘಟನೆ ನಡೆದಿದೆ. ರಕ್ಷಣೆ ನಂತರ ಬಾಲಕಿಯನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳಿಂದ ಬಾಲಕಿ ರಕ್ಷಣಾ ಕಾರ್ಯಾಚರಣೆ ಯಶಸ್ವಿಯಾಗಿದೆ ಎಂದು ಎಸ್‌ಪಿ ರಂಜಿತಾ ಶರ್ಮಾ ತಿಳಿಸಿದ್ದಾರೆ.

18 ಗಂಟೆಗಳ ರಕ್ಷಣಾ ಕಾರ್ಯಾಚರಣೆ ಬಳಿಕ ಬಾಲಕಿಯನ್ನು ಬೋರ್‌ವೆಲ್‌ನಿಂದ ರಕ್ಷಿಸಲು ಸಾಧ್ಯವಾಯಿತು. ಇದು ತುಂಬಾ ಕಷ್ಟದ ಕೆಲಸವಾಗಿತ್ತು. ಆದರೆ NDRF ಮತ್ತು SDRF ತಂಡಗಳ ನೆರವಿನಿಂದ ಯಶಸ್ವಿ ಕಾರ್ಯಾಚರಣೆ ನಡೆಸಲಾಗಿದ್ದು, ಬಾಲಕಿಯನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. 21 ಅಡಿ ಎತ್ತರದಲ್ಲಿ ಆಕೆಯ ಶೂ ಪತ್ತೆಯಾಯಿತು. ಎನ್‌ಡಿಆರ್‌ಎಫ್‌ನ 30 ಜನರು, ಎಸ್‌ಡಿಆರ್‌ಎಫ್‌ನ 10 ಜನರು ರಕ್ಷಣಾ ಕಾರ್ಯಾಚರಣೆಯಲ್ಲಿ ಕೆಲಸ ಮಾಡಿದ್ದಾರೆ ಎಂದು ಯೋಗೇಶ್‌ಕುಮಾರ್ ಹೇಳಿದರು.

ಸಲ್ಮಾನ್ ಖಾನ್ ತಂದೆಗೆ ಮಹಿಳೆಯಿಂದ ಕೊಲೆ ಬೆದರಿಕೆ



ಮುಂಬೈ: ಬಾಲಿವುಡ್ ನಟ ಸಲ್ಮಾನ್ ಖಾನ್ ಅವರ ತಂದೆ, ಖ್ಯಾತ ಬರಹಗಾರ ಸಲೀಂ ಖಾನ್ ಅವರಿಗೆ ಕೊಲೆ ಬೆದರಿಕೆ ಬಂದಿದೆ.

ಗುರುವಾರ ಸಲೀಂ ಖಾನ್ ಬೆಳಗಿನ ವಾಕಿಂಗ್‌ಗೆಂದು ಹೊರಗೆ ಹೋದಾಗ ಮಹಿಳೆಯೊಬ್ಬರು 'ಸರಿಯಾಗಿ ವರ್ತಿಸುವುದನ್ನು ಕಲಿಯಿರಿ. ಇಲ್ಲವೇ ಲಾರೆನ್ಸ್ ಬಿಷ್ಣೋಯ್ ಅವರನ್ನು ಕಳುಹಿಸುತ್ತೇನೆ' ಎಂದು ಬೆದರಿಕೆ ಹಾಕಿದ್ದರು. ಆ ವೇಳೆ ಆಕೆ ಬುರ್ಖಾ ಧರಿಸಿದ್ದಳು ಎಂದು ವರದಿಯಾಗಿದೆ.

ಈ ಸಂಬಂಧ ಅಪರಿಚಿತ ಮಹಿಳೆ ವಿರುದ್ಧ ಬಾಂದ್ರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಕೂಲಂಕುಷವಾಗಿ ತನಿಖೆ ನಡೆಸುತ್ತಿದ್ದಾರೆ. ಸಲೀಂ ಖಾನ್‌ಗೆ ಅಪರಿಚಿತ ಮಹಿಳೆಯಿಂದ ಬೆದರಿಕೆ ಬಂದಿರುವುದು ಇದೇ ಮೊದಲು. ಈ ಮಹಿಳೆ ಯಾರು, ಅವಳು ನಿಜವಾಗಿಯೂ ಬಿಷ್ಣೋಯ್ ಗ್ಯಾಂಗ್ ಸದಸ್ಯಳೇ ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಿವೆ. ತನಿಖೆ ಭಾಗವಾಗಿ ಆ ಪ್ರದೇಶದ ಸಿಸಿಟಿವಿ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ. ಕೆಲ ತಿಂಗಳ ಹಿಂದೆ ಸಲ್ಮಾನ್ ಖಾನ್ ಅವರ ಮನೆ ಮೇಲೆ ಗುಂಡಿನ ದಾಳಿ ನಡೆದಿತ್ತು. ಲಾರೆನ್ಸ್ ಬಿಷ್ಣೋಯ್ ಒಬ್ಬ ಭಾರತೀಯ ದರೋಡೆಕೋರ. ಅವನ ವಿರುದ್ಧ ಕೊಲೆ ಮತ್ತು ಸುಲಿಗೆ ಸೇರಿದಂತೆ ಮೊಕದ್ದಮೆಗಳಿವೆ.

ಸ್ವಚ್ಛತೆಗೆ ಸಾರ್ವಜನಿಕರ ಸಹಭಾಗಿತ್ವ ಮುಖ್ಯ

• ಜಿಲ್ಲಾಧಿಕಾರಿ ವೆಂಕಟ್ ರಾಜಾ ಅಭಿಮತ • ಸ್ವಚ್ಛತಾ ಹೀ ಸೇವಾ ಪಾಕ್ಷಿಕ ಅಭಿಯಾನಕ್ಕೆ ಚಾಲನೆ



ಮಡಿಕೇರಿ ಜಿಪಂನಲ್ಲಿ ನಡೆದ ಸ್ವಚ್ಛತಾ ಅಭಿಯಾನದಲ್ಲಿ ಜಿಲ್ಲಾ ನೋಡಲ್ ಅಧಿಕಾರಿ ಜಿ.ಧನರಾಜು ಸ್ವಚ್ಛತೆ ಕುರಿತು ಪ್ರತಿಜ್ಞಾನವಿಧಿ ಬೋಧಿಸಿದರು.

ಮಡಿಕೇರಿ, ಸೆ.19–ಪರಿಸರದ ಸ್ವಚ್ಛತೆ ಕಾಪಾಡುವಲ್ಲಿ ಸಾರ್ವಜನಿಕರ ಸಹಭಾಗಿತ್ವ ಪ್ರಮುಖವಾಗಿದೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಆವರಣದಲ್ಲಿ ಗಿಡ ನೆಡುವ ಮೂಲಕ ಸ್ವಚ್ಛತಾ ಹೀ ಸೇವಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿವರ್ಷದಂತೆ ಈ ವರ್ಷವೂ ಸ್ವಚ್ಛತಾ ಹೀ ಸೇವಾ ಪಾಕ್ಷಿಕ ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅ.2ರವರೆಗೆ ಕಾರ್ಯಕ್ರಮ ನಡೆಯಲಿದೆ. ಸ್ವಭಾವ ಸ್ವಚ್ಛತೆ, ಸಂಸ್ಕಾರ ಸ್ವಚ್ಛತೆ ಘೋಷ ವಾಕ್ಯದೊಂದಿಗೆ ಈ ಬಾರಿ ಸ್ವಚ್ಛತಾ ಹೀ ಸೇವಾ ಅಭಿಯಾನ ಜಿಲ್ಲೆಯಾದ್ಯಂತ ನಡೆಯಲಿದೆ ಎಂದರು.

ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ ಮಾತನಾಡಿ, ಈ ಅಭಿಯಾನ ಸ್ವಚ್ಛತೆಗೆ ಸಮುದಾಯದ ಭಾಗವಹಿಸುವಿಕೆಗೆ ಹೆಚ್ಚು ಅನುಕೂಲ ಮಾಡಿಕೊಡುತ್ತದೆ. ಎಲ್ಲೆಂದರಲ್ಲಿ ತ್ಯಾಜ್ಯ ಸುರಿಯುವ ಸ್ಥಳಗಳನ್ನು ಗುರುತಿಸಿ, ಅಲ್ಲಿ ಸಮುದಾಯದ ಭಾಗವಹಿಸುವಿಕೆಯೊಂದಿಗೆ ಆ ಸ್ಥಳವನ್ನು ಸ್ವಚ್ಛಗೊಳಿಸಲಾಗುತ್ತದೆ. ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುವುದು. ತ್ಯಾಜ್ಯ ಸುರಿಯುವವರಿಗೆ ದಂಡ ವಿಧಿಸಲಾಗುತ್ತದೆ ಎಂದು ಅವರು ತಿಳಿಸಿದರು. ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಜಿಲ್ಲಾ ನೋಡಲ್ ಅಧಿಕಾರಿ ಜಿ.ಧನರಾಜು, ಮುಂದಿನ ಪೀಳಿಗೆಗೆ ಉತ್ತಮ ಪರಿಸರ ಉಳಿಸುವ ಉದ್ದೇಶ, ಎಲ್ಲರ ಆರೋಗ್ಯದ ದೃಷ್ಟಿಯಿಂದ ಪ್ಲಾಸ್ಟಿಕ್ ಬಳಕೆ ತ್ಯಜಿಸುತ್ತೇನೆ. ದಿನನಿತ್ಯ ಬಳಕೆಯಲ್ಲಿ ಪ್ಲಾಸ್ಟಿಕ್ ಬಳಸದೆ ಪರಿಸರ ಸ್ನೇಹಿ ಕೈಚೀಲಗಳನ್ನು ಉಪಯೋಗಿಸುತ್ತೇನೆ ಎಂದು ಪ್ರತಿಜ್ಞಾನವಿಧಿ ಬೋಧಿಸಿದರು.

ಇದೇ ವೇಳೆ ತಾಯಿ ಹೆಸರಲ್ಲಿ ಒಂದು ವೃಕ್ಷ (ಏಕ್ ಪೇಡ್ ಮಾ ಕೇ ನಾಮ್) ಅಭಿಯಾನದ ಅಂಗವಾಗಿ ಸಸಿ ನೆಟ್ಟು ನೀರೆರೆಯಲಾಯಿತು. ಕಾರ್ಯಕ್ರಮದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯನಿರ್ವಾಹಕ ಇಂಜಿನಿಯರ್ ಸುರೇಶ್ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಸತೀಶ್ ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಟರಾಜ್, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಗಂಗಾಧರ್ ನಾಯಕ್, ಸಹಾಯಕ ಯೋಜನಾಧಿಕಾರಿ ಜೀವನ್ ಕುಮಾರ್, ಸ್ವಚ್ಛ ಭಾರತ್ ಮಿಷನ್ ಯೋಜನೆ ಜಿಲ್ಲಾ ಸಮಾಲೋಚಕರಾದ ಹರ್ಷಿತಾ, ಪೆಮ್ಮಯ್ಯ, ಸೂರಜ್, ವಾಸುದೇವ್ ಇತರರು ಇದ್ದರು.

ವಿಷ್ಣು ಕಾರ್ಯಪ್ಪಗೆ ಬಸವಶ್ರೀ ಪ್ರಶಸ್ತಿ ಪ್ರದಾನ



ವಿರಾಜಪೇಟೆ ಗೌರಿ–ಗಣೇಶೋತ್ಸವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಅವರಿಗೆ ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿರಾಜಪೇಟೆ, ಸೆ.19–ಬಾಳಗೋಡುವಿನ ಫೆಡರೇಷನ್ ಆಫ್ ಕೊಡವ ಸಮಾಜ ಹಾಗೂ ಕುಟ್ಟ ಕೊಡವ ಸಮಾಜದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಅವರಿಗೆ ಸಮಾಜ ಸೇವೆ ಗುರುತಿಸಿ ವಿರಾಜಪೇಟೆ ಜೈನರ ಬೀದಿಯ ಬಸವೇಶ್ವರ ದೇವಸ್ಥಾನದ ಗೌರಿ–ಗಣೇಶ ಉತ್ಸವ ಸಮಿತಿ ವತಿಯಿಂದ ಬಸವಶ್ರೀ ಪ್ರಶಸ್ತಿ ನೀಡಲಾಯಿತು.

ಗೌರಿ–ಗಣೇಶೋತ್ಸವ ಅಂಗವಾಗಿ ಬಸವೇಶ್ವರ ದೇವಸ್ಥಾನದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕಳ್ಳಿಚಂಡ ವಿಷ್ಣು ಕಾರ್ಯಪ್ಪ, ನನಗೆ ಉತ್ತಮ ಅವಕಾಶ ಸಿಕ್ಕಾಗ ಗೌರವ ಮತ್ತು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದೇನೆ. ಮುಂದೆಯೂ ಕೊಡವ ಸಮಾಜ ಅಭಿವೃದ್ಧಿಗೆ ಹೆಚ್ಚು ಶ್ರಮಿಸಲಾಗುವುದು ಎಂದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ವಿರಾಜಪೇಟೆಯಲ್ಲಿ ಏಕಕಾಲದಲ್ಲಿ ನಡೆದ ಗೌರಿ–ಗಣೇಶ ಮೂರ್ತಿ ವಿಸರ್ಜನೋತ್ಸವ ಮೆರವಣಿಗೆಯಲ್ಲಿ ಎಲ್ಲರೂ ಸಹಬಾಳ್ವೆಯಿಂದ ಭಾಗವಹಿಸಿರುವುದು ಸಂತೋಷವಾಗಿದೆ. ಬಸವೇಶ್ವರ ದೇವಸ್ಥಾನ ಉತ್ಸವ ಸಮಿತಿ ವತಿಯಿಂದ ಹಲವಾರು ವರ್ಷಗಳಿಂದ ನಡೆಯುತ್ತಿರುವ ಗಣೇಶೋತ್ಸವದಲ್ಲಿ ವಿವಿಧ ಕಲಾವಿದರು, ಗ್ರಾಮೀಣ ಭಾಗದ ಪ್ರತಿಭೆಗಳಿಗೆ ಸೂಕ್ತ ವೇದಿಕೆ ಕಲ್ಪಿಸಿ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಎಂದರು.

ಗೌರಿ–ಗಣೇಶ ಉತ್ಸವ ಸಮಿತಿಯ ರವೀಂದ್ರ ಕಾಮತ್ ಮಾತನಾಡಿ, ಗೌರಿ–ಗಣೇಶ ಮೂರ್ತಿ ವಿಸರ್ಜನೆಗೆ ವೇಳೆ ಗೌರಿಕೆರೆ ಸುತ್ತ ಸಾರ್ವಜನಿಕರು ಕುಳಿತುಕೊಳ್ಳಲು ಅನುಕೂಲವಾಗಲು ಅಭಿವೃದ್ಧಿ ಪಡಿಸುವಂತೆ ಶಾಸಕರಿಗೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಶಾಲಿನಿ ವಿಷ್ಣು ಕಾರ್ಯಪ್ಪ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕಾಂತಿ ಸತೀಶ್, ಐತಿಹಾಸಿಕ ಗೌರಿ–ಗಣೇಶ ಜನೋತ್ಸವ ಸಮಿತಿ ಕಾರ್ಯಾಧ್ಯಕ್ಷ ಕೆ.ಸಿ.ಶಬರೀಶ್ ಶೆಟ್ಟಿ, ಕಾಂಗ್ರೆಸ್ ಮುಖಂಡ ಕೆ.ಬಿ.ಶಾಂತಪ್ಪ, ಉತ್ಸವ ಸಮಿತಿಯ ನರೇಂದ್ರ ಕಾಮತ್ ಹಾಗೂ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಅಪ್ರಾಪ್ತೆ ಅಪಹರಿಸಿದ್ದ ಯುವಕನಿಗೆ ಐದು ವರ್ಷ ಜೈಲು ಶಿಕ್ಷೆ



ಸೂರಜ್

ಮಡಿಕೇರಿ, ಸೆ.19–ಅಪ್ರಾಪ್ತೆ ಅಪಹರಿಸಿದ್ದ ಅಸ್ಸಾಂ ಮೂಲದ ಯುವಕನಿಗೆ ಮಡಿಕೇರಿ 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 5 ವರ್ಷ ಕಠಿಣ ಜೈಲು ಶಿಕ್ಷೆ ಮತ್ತು 5 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಅಸ್ಸಾಂನ ಸೂರಜ್ ಅಲಿಯಾಸ್ ಸುರುಸ್ ಅಲಿ(22) ಶಿಕ್ಷೆಗೆ ಗುರಿಯಾದ ಅಪರಾಧಿ. ಈತ ಸುಂಟಿಕೊಪ್ಪ ವ್ಯಾಪ್ತಿಯ ಮತ್ತಿಕಾಡು ಗ್ರಾಮದ ಅತ್ತೂರು–ನಲ್ಲೂರು ಗೇರುಬಾಣೆ ಬಿ.ಎ.ಸ್ಟೇಟ್‌ನ ಲೈನ್ ಮನೆಯಲ್ಲಿ ವಾಸವಾಗಿದ್ದ. ಅದೇ ಲೈನ್ ಮನೆಯಲ್ಲಿ ವಾಸವಿದ್ದ ಅಸ್ಸಾಂ ಮೂಲದ ಅಪ್ರಾಪ್ತೆಯನ್ನು 2021ರ ಆ.8ರಂದು ಅಪಹರಿಸಿದ್ದ. ಈ ಕುರಿತು ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಈತನ ವಿರುದ್ಧ ಪೋಕ್ಸೊ ಹಾಗೂ ಎಸ್‌ಸಿ, ಎಸ್‌ಟಿ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು.

ಆ.11ರಂದು ಈತನನ್ನು ಬಂಧಿಸಿದ ಪೊಲೀಸರು, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಪ್ರಕರಣದ ತನಿಖೆ ನಡೆಸಿದ ಅಂದಿನ ಸೋಮವಾರಪೇಟೆ ಡಿವೈಎಸ್‌ಪಿ ಶೈಲೇಂದ್ರ, 2021ರ ಸೆ.28ರಂದು ನ್ಯಾಯಾಲಯಕ್ಕೆ ಸೂರಜ್ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯದ ನ್ಯಾಯಾಧೀಶ ಜಿ.ಪ್ರಶಾಂತಿ, ಆರೋಪಿ ಸೂರಜ್‌ಗೆ 5 ವರ್ಷ ಕಠಿಣ ಶಿಕ್ಷೆ ಮತ್ತು 5 ಸಾವಿರ ರೂ. ದಂಡ ವಿಧಿಸಿದ್ದಾರೆ. ದಂಡ ಪಾವತಿಸಲು ತಪ್ಪಿದಲ್ಲಿ ಮತ್ತೆ 6 ತಿಂಗಳು ಶಿಕ್ಷೆ ಅನುಭವಿಸುವಂತೆ ತೀರ್ಪು ನೀಡಿದ್ದಾರೆ.

ನಾಳೆ ವಾಹನ ಸಂಚಾರ ತಾತ್ಕಾಲಿಕ ಬದಲಾವಣೆ

ಮಡಿಕೇರಿ, ಸೆ.19–ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ಅಂಗವಾಗಿ ಸೆ.21ರಂದು ನಗರದ ಇಂದಿರಾ ಗಾಂಧಿ ವೃತ್ತದಿಂದ ಎವಿ ಶಾಲೆ ಜಂಕ್ಷನ್ ವರೆಗೆ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ಬದಲಾವಣೆ ಮಾಡಲಾಗಿದೆ.

ಬಸ್ ಡಿಪೋ ಬಳಿಯ ಶಾಂತಿನಿಕೇತನ ಬಡಾವಣೆಯ ಗಣೇಶ ಪ್ರತಿಷ್ಠಾಪನಾ ಸಮಿತಿ ವತಿಯಿಂದ ವಿಸರ್ಜನಾ ಮೆರವಣಿಗೆ ಸೆ.21ರಂದು ಸಂಜೆ ನಗರದ ಮುಖ್ಯ ಬೀದಿಗಳಲ್ಲಿ ನಡೆಯಲಿದೆ. ಮುಂಜಾಗ್ರತೆ ಹಾಗೂ ವಾಹನಗಳ ಸುಗಮ ಸಂಚಾರ ಹಿನ್ನೆಲೆಯಲ್ಲಿ ಸಂಚಾರ ಠಾಣೆ ಪೊಲೀಸರು, ಮೆರವಣಿಗೆ ತೆರಳುವ ರಸ್ತೆ, ಐಜಿ ವೃತ್ತದಿಂದ ಎವಿ ಶಾಲೆ ವರೆಗೆ, ಮಹದೇವಪೇಟೆ–ಮಾರ್ಕೆಟ್ ರಸ್ತೆಯ ಎರಡು ಬದಿಯಲ್ಲೂ ಅಂದು ಸಂಜೆ 6 ಗಂಟೆ ನಂತರ ತಾತ್ಕಾಲಿಕ ವಾಹನ ಸಂಚಾರ ಹಾಗೂ ನಿಲುಗಡೆ ನಿಷೇಧಿಸಿದ್ದಾರೆ.

'ನವ ಗ್ರಾಮ' ಜಾಗ ಉಳ್ಳವರ ಪಾಲು: ಆರೋಪ



ಸುದ್ದಿಗೋಷ್ಠಿಯಲ್ಲಿ ಸೋಲಿಗ ಸಮಿತಿ ಉಪಾಧ್ಯಕ್ಷ ಬಿ.ಬಿ.ಮಹೇಶ್ ಮಾತನಾಡಿದರು.

ಮಡಿಕೇರಿ, ಸೆ.19–ನಿವೇಶನ ರಹಿತರು ಹಾಗೂ ದುರ್ಬಲರಿಗೆ ಮೀಸಲಾಗಿದ್ದ ಬಸವನಹಳ್ಳಿ ಗ್ರಾಮದ 'ನವ ಗ್ರಾಮ' ಯೋಜನೆಯ ಜಾಗವನ್ನು ಸ್ಥಳೀಯರನ್ನು ಕಡೆಗಣಿಸಿ, ಉಳ್ಳವರಿಗೆ ಮತ್ತು ಇತರೆ ಪ್ರದೇಶದವರಿಗೆ ನೀಡಲಾಗಿದೆ ಎಂದು ಸೋಲಿಗ ಸಮಿತಿ ಉಪಾಧ್ಯಕ್ಷ ಬಿ.ಬಿ.ಮಹೇಶ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಶಾಲನಗರ ಹೋಬಳಿ ಬಸವನಹಳ್ಳಿ ಗ್ರಾಮದ ರಾಜ್ಯ ಹೆದ್ದಾರಿ ಪಕ್ಕದ 2 ಎಕರೆ ಜಾಗವನ್ನು ನವ ಗ್ರಾಮ ಯೋಜನೆಗೆ ಎಂದು 2013ರಲ್ಲಿ ಅಂದಿನ ಜಿಲ್ಲಾಧಿಕಾರಿಗಳು ಕಾಯ್ದಿರಿಸಿದ್ದರು. ಈ ಜಾಗವನ್ನು ಗುಡ್ಡೆಹೊಸೂರು ಗ್ರಾಪಂ ವ್ಯಾಪ್ತಿಯ ಬಡವರು, ನಿರ್ಗತಿಕರು, ವಸತಿ ರಹಿತರಿಗೆ ನಿವೇಶನಗಳನ್ನಾಗಿ ನೀಡಲು ನಿರ್ಧರಿಸಲಾಗಿತ್ತು. ಆದರೆ, ಪ್ರಸ್ತುತ ಉಳ್ಳವರು ಹಾಗೂ ಇತರೆ ಪ್ರದೇಶದವರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಕೆಲ ನಿವೇಶನಗಳಲ್ಲಿ ಎರಡಂತಸ್ತಿನ ಮನೆಗಳ ನಿರ್ಮಾಣವಾಗುತ್ತಿವೆ ಎಂದರು.

ನವಗ್ರಾಮ ಯೋಜನೆಯಡಿ ನಿವೇಶನಕ್ಕಾಗಿ ಬಸವನಹಳ್ಳಿ ಸುತ್ತಮುತ್ತಲ ನೂರಾರು ನಿವೇಶನ ರಹಿತರು ಅರ್ಜಿ ಸಲ್ಲಿಸಿದ್ದಾರೆ. ಇವರಲ್ಲಿ ಕೇವಲ 8 ಮಂದಿಗಷ್ಟೇ ನಿವೇಶನ ನೀಡಲಾಗಿದ್ದು, ಉಳಿದವುಗಳನ್ನು ಬೇರೆಯವರಿಗೆ ಹಂಚಿಕೆ ಮಾಡಲಾಗಿದೆ. ಈ ಬಗ್ಗೆ ಶಾಸಕರು, ಜಿಲ್ಲಾಧಿಕಾರಿ, ತಹಸೀಲ್ದಾರ್‌ಗೆ ದೂರು ನೀಡಲಾಗಿದೆ ಎಂದು ತಿಳಿಸಿದರು.

ತನಿಖೆಗೆ ಆಗ್ರಹ: ಅರ್ಜಿ ಸಲ್ಲಿಸಿದ ನಿವೇಶನ ಮಂಜೂರಾಗದವರಿಗೆ ಪಂಚಾಯಿತಿ ಕೇವಲ ಸಬೂಬುಗಳನ್ನಷ್ಟೇ ನೀಡುತ್ತಿದೆ. ಈ ಕುರಿತು ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ ಗ್ರಾಮ ಸಭೆಯಲ್ಲೂ ಪ್ರಸ್ತಾಪ ಮಾಡಲಾಗಿದೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಿ, ವಸತಿ ರಹಿತರಿಗೆ ಜಿಲ್ಲಾಡಳಿತ ಅಗತ್ಯ ನ್ಯಾಯ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಬಸವನಹಳ್ಳಿ ಸೋಲಿಗ ಸಮಿತಿ ಗೌರವಾಧ್ಯಕ್ಷ ಪಿ.ಹೆಚ್.ಸಿದ್ದಲಿಂಗ, ದೊಡ್ಡಬೆಟ್ಟಗೇರಿ ಹಾಡಿ ನಿವಾಸಿ ಬಿ.ಆರ್. ಅನಿತಾ, ಬಸವನಹಳ್ಳಿ ಹೊಸೂರು ಗ್ರಾಮದ ಎ.ತಾಹೀರ, ಪಿ.ಲಕ್ಷ್ಮಿ ಉಪಸ್ಥಿತರಿದ್ದರು.

ಮೈಸೂರು ವಿಭಾಗೀಯ ಮಟ್ಟಕ್ಕೆ ಆಯ್ಕೆ...



ಪೊನ್ನಂಪೇಟೆ ತಾಲೂಕಿನ ಹುದಿಕೇರಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆದ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಕುಶಾಲನಗರ ತಾಲೂಕಿನ ಬಸವನಹಳ್ಳಿ ಸರ್ಕಾರಿ ಪ್ರೌಢಶಾಲೆ ಬಾಲಕಿಯರ ತಂಡ ಪ್ರಥಮ ಸ್ಥಾನ ಗಳಿಸಿ ಮೈಸೂರು ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದೆ.

ಗುಂಡು ಹೊಡೆಯುವ ಸ್ಪರ್ಧೆ: ಮೇಕೇರಿರ ಅರುಣ್ ಪ್ರಥಮ



ಚೆನ್ನಂಗಿ ಕಾವೇರಿ ಸೇವಾ ಸಂಘದ ಆವರಣದಲ್ಲಿ ನಡೆದ ತೆಂಗಿನ ಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ವಿಜೇತರು.

ಸಿದ್ದಾಪುರ: ಚೆನ್ನಯ್ಯನಕೋಟೆ ಸಮೀಪದ ಚೆನ್ನಂಗಿ ಕಾವೇರಿ ಸೇವಾ ಸಂಘದ ವತಿಯಿಂದ ಕೈಲ್ ಮುಹೂರ್ತ ಹಬ್ಬದ ಅಂಗವಾಗಿ ಏರ್ಪಡಿಸಿದ್ದ ತೆಂಗಿನ ಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆಯಲ್ಲಿ ಮೇಕೇರಿರ ಅರುಣ್ ಪ್ರಥಮ ಸ್ಥಾನಗಳಿಸಿದರು.

ಸಂಘದ ಕಟ್ಟಡ ಆವರಣದಲ್ಲಿ ನಡೆದ ಸ್ಪರ್ಧೆಯಲ್ಲಿ ಪುಲ್ಲಂಗಡ ಮಂದಣ್ಣ ದ್ವಿತೀಯ ಹಾಗೂ ಕುಟ್ಟಂಡ ಅದಿತಿ ತೃತೀಯ ಸ್ಥಾನ ಗಳಿಸಿದ್ದಾರೆ. ಸಂಘದ ಅಧ್ಯಕ್ಷ ಅಜ್ಜಿನಿಕಂಡ ಪಿ.ಕಾರ್ಯಪ್ಪ ವಿಜೇತರಿಗೆ ಬಹುಮಾನ ವಿತರಿಸಿದರು.

ಈ ಸಂದರ್ಭ ಸಂಘದ ಸ್ಥಾಪಕಾಧ್ಯಕ್ಷ ಡಾ.ಎ.ಸಿ.ಗಣಪತಿ, ಉಪಾಧ್ಯಕ್ಷ ವಿ.ಸಿ. ಡಾಲು, ಕಾರ್ಯದರ್ಶಿ ಕಾಡ್ಯಮಾಡ ಸುಬ್ಬಯ್ಯ, ಸ್ಥಾಪಕ ಕಾರ್ಯದರ್ಶಿ ಕೆ.ಜಿ.ಉತ್ತಪ್ಪ, ಪ್ರಮುಖರಾದ ಕುಪ್ಪಂಡ ಕಿರಣ್ ಕಾರ್ಯಪ್ಪ, ಕುಪ್ಪಂಡ ತಶೀನಾ, ಮುದ್ದಯ್ಯ, ಕಾರ್ಯಪ್ಪ, ಮಾಚಯ್ಯ, ಮೇಕೇರಿರ ರವಿ, ಅಜ್ಜಿನಿಕಂಡ ಶ್ಯಾಮ್ ಚಂದ್ರ, ವಾಟೇರಿರ ವಿನು ಸೋಮಣ್ಣ, ಮುದ್ದಯ್ಯ, ಕುಪಂಡ ಸುಬ್ರಮಣಿ, ಕುಪ್ಪಂಡ ಪೊನ್ನಪ್ಪ ಹಾಗೂ ಕುಪ್ಪಂಡ ಸಚಿ ಪೊನ್ನಪ್ಪ ಮತ್ತಿತರರು ಇದ್ದರು.

ಚಾಮರಾಜನಗರದಲ್ಲಿ ಹುಣ್ಣಿಮೆ ರಥೋತ್ಸವ



ಚಾಮರಾಜೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ರಥೋತ್ಸವ ನಡೆಯಿತು.

ಚಾಮರಾಜನಗರ, ಸೆ.19–ನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಬುಧವಾರ ರಾತ್ರಿ ರಥೋತ್ಸವ ನಡೆಯಿತು.

ದೇವರ ಉತ್ಸವ ಮೂರ್ತಿಯನ್ನು ರಥದ ಬೀದಿ ದೊಡ್ಡ ಅಂಗಡಿ ಹಾಗೂ ಚಿಕ್ಕ ಅಂಗಡಿ ಬೀದಿ, ಅಗ್ರಹಾರಗಳಲ್ಲಿ ಮೆರವಣಿಗೆ ನಡೆಸಲಾಯಿತು. ವಿಶೇಷವಾಗಿ ದೇವರಿಗೆ ಅಲಂಕರಿಸಿ, ಪೂಜಾ ಕಾರ್ಯಗಳು ನೆರವೇರಿದವು. ಆಗಮಿಕ ದರ್ಶನ್, ಅರ್ಚಕ ರಾಮಕೃಷ್ಣ ಭಾರದ್ವಾಜ್, ಉತ್ಸವ ಸಮಿತಿ ಸದಸ್ಯ ಮಹದೇವ ಶೆಟ್ಟಿ, ಮಸಣ ಶೆಟ್ಟಿ, ಚೆನ್ನಲಿಂಗ ಶೆಟ್ಟಿ, ನಂಜಪ್ಪ ನಾಗಶೆಟ್ಟಿ, ನಾಗಶೆಟ್ರು, ಶ್ರೀನಿವಾಸ್, ನಾಗೇಶ್, ಸೋಮು, ಹುಚ್ಚಯ್ಯ, ಉಪ್ಪಾರ ಜನಾಂಗದ ಯಜಮಾನರು ಹಾಗೂ ಮುಖಂಡರು ಭಾಗವಹಿಸಿದ್ದರು.

ಚಿರತೆ ಸೆರೆ ಕಾರ್ಯಾಚರಣೆ

ಗುಂಡು ತಗುಲಿ ನಾಲ್ವರಿಗೆ ಗಾಯ

ಯಳಂದೂರು, ಸೆ.19–ತಾಲೂಕಿನ ಅಗರಕೆರೆ ಸುತ್ತಮುತ್ತ ಸಾರ್ವಜನಿಕರಿಗೆ ಉಪಟಳ ನೀಡುತ್ತಿದ್ದ ಚಿರತೆ ಸೆರೆ ಕಾರ್ಯಾಚರಣೆ ವೇಳೆ ಆಕಸ್ಮಿಕವಾಗಿ ಸಿಡಿದ ಗುಂಡು ತಗುಲಿ ನಾಲ್ವರು ಕೂಲಿ ಕಾರ್ಮಿಕರು ಗಾಯಗೊಂಡಿದ್ದಾರೆ.

ಮದ್ದೂರು ಗ್ರಾಮದ ಮೂರ್ತಿ, ರಂಗಸ್ವಾಮಿ, ಶಿವು ಹಾಗೂ ರವಿ ಗಾಯಗೊಂಡವರು. ಮದ್ದೂರು ಮತ್ತು ಅಗರಕೆರೆ ಭಾಗದಲ್ಲಿ ಚಿರತೆ ಸೆರೆ ಹಿಡಿಯಲು ಬೋನು ಇರಿಸಲಾಗಿತ್ತು. ಗುರುವಾರ ಬೆಳಗ್ಗೆ ಚಿರತೆ ಕಾಣಿಸಿಕೊಂಡಿದ್ದು, ಸ್ಥಳೀಯರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು. ಕೂಡಲೇ ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಸೆರೆಗೆ ಮುಂದಾದಾಗ ಏಕಾಏಕಿ ಮೈಮೇಲೆ ಎರಗಿದೆ. ಈ ವೇಳೆ ಅರಣ್ಯ ಸಿಬ್ಬಂದಿ ಬಂದೂಕಿನಿಂದ ಆಕಸ್ಮಿಕವಾಗಿ ಗುಂಡು ಸಿಡಿದು ಸ್ಥಳದಲ್ಲಿದ್ದ ಕೂಲಿ ಕಾರ್ಮಿಕರಿಗೆ ತಗುಲಿದೆ.

ಗಾಯಗೊಂಡ ನಾಲ್ವರಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ, ನಂತರ ಕೊಳ್ಳೇಗಾಲ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದ ಕೂಲಿ ಕಾರ್ಮಿಕರಿಗೆ ಗುಂಡೇಟು ಬಿದ್ದರೂ ಅರಣ್ಯ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಸಂಬಂಧಿಗಳು ದೂರಿದ್ದಾರೆ.

ಪ್ರಾಣಾಪಾಯದಿಂದ ಪಾರು: ಗಾಯಾಳುಗಳು ಪ್ರಾಣಾಪಾಯದಿಂದ ಪಾರಾಗಿದ್ದು, ಆತಂಕ ಪಡುವ ಅಗತ್ಯ ಇಲ್ಲ ಎಂದು ಆಸ್ಪತ್ರೆ ವೈದ್ಯಾಧಿಕಾರಿ ಡಾ.ಶ್ರೀಧರ್ ತಿಳಿಸಿದ್ದಾರೆ.

ಚಿರತೆ ಸಾವು: ಚಿರತೆ ಸೆರೆ ಕಾರ್ಯಾಚರಣೆ ವೇಳೆ ಅರಣ್ಯ ಸಿಬ್ಬಂದಿ ಮೇಲೆ ಚಿರತೆ ಎರಗಿದಾಗ ಆಕಸ್ಮಿಕವಾಗಿ ಬಂದೂಕಿನಿಂದ ಗುಂಡು ಸಿಡಿದು ಚಿರತೆ ಸಾವನ್ನಪ್ಪಿದೆ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಚಿರತೆ ಸಾವಿಗೆ ನಿಖರವಾದ ಕಾರಣ ತಿಳಿಯಲಿದೆ ಎಂದು ಆರ್‌ಎಫ್‌ಓ ಎನ್.ನಾಗರಾಜ ನಾಯಕ್ ತಿಳಿಸಿದ್ದಾರೆ.

ನಾಲೆಯಲ್ಲಿ ಬಾಲಕನ ಶವ ಪತ್ತೆ



ರೋಹಿತ್

ಚಾಮರಾಜನಗರ, ಸೆ.19–ತಾಲೂಕಿನ ಬಸವಟ್ಟಿ ಗ್ರಾಮದ ಕಬಿನಿ ನಾಲೆಯಲ್ಲಿ ಬಾಲಕನ ಶವ ಗುರುವಾರ ಪತ್ತೆಯಾಗಿದೆ. ಬಸವಟ್ಟಿ ಗ್ರಾಮದ ಮಹದೇವಮ್ಮ ಪುತ್ರ ರೋಹಿತ್(14) ಮೃತ ಬಾಲಕ. ಈತ ಬುಧವಾರ ಸಂಜೆ ಶಾಲೆ ಮುಗಿದ ನಂತರ ಮನೆ ಕಡೆಗೆ ತೆರಳಿದ್ದ. ಆದರೆ ಗುರುವಾರ ಬೆಳಗ್ಗೆ ಆದರೂ ಮನೆಗೆ ಬಂದಿರಲಿಲ್ಲ. ಇದರಿಂದ ಗಾಬರಿಗೊಂಡ ತಾಯಿ ಹುಡುಕಾಟ ನಡೆಸಿದಾಗ ಮಧ್ಯಾಹ್ನ ಕಬಿನಿ ನಾಲೆಯಲ್ಲಿ ಶವ ಪತ್ತೆಯಾಗಿದೆ.

ಈತ ನಾಲೆಯ ಬಳಿ ತೆರಳಿದಾಗ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಮೃತಪಟ್ಟಿರಬಹುದು ಎನ್ನಲಾಗಿದೆ. ಸಂತೇಮರಹಳ್ಳಿ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಟ್ಟುಗುಳಿಪುರದಲ್ಲಿ ಎಸ್ಪಿ, ಆರ್‌ಟಿಓ, ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಅಧಿಕಾರಿಗಳ ಸಭೆ

ಅಪಘಾತ ತಡೆಗೆ ರಸ್ತೆ ಅಗಲೀಕರಣಕ್ಕೆ ಗ್ರಾಮಸ್ಥರ ಆಗ್ರಹ



ಅಟ್ಟುಗುಳಿಪುರದ ಹೆದ್ದಾರಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಹೆದ್ದಾರಿ ಪ್ರಾಧಿಕಾರದ ಎಇಇ ವೆಂಕಟಲಕ್ಷ್ಮಿ, ಪ್ರಾದೇಶಿಕ ಆಯುಕ್ತೆ ಗಾಯತ್ರಿ ಪರಿಶೀಲಿಸಿದರು.

ಚಾಮರಾಜನಗರ, ಸೆ.19–ಚಾಮರಾಜನಗರ ಮಾರ್ಗವಾಗಿ ಸತ್ತಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯನ್ನು ಅಗಲೀಕರಣಗೊಳಿಸಿ, ಏಕಮುಖ ಸಂಚಾರ ಮಾಡಿದರೆ ಅಪಘಾತಗಳನ್ನು ತಡೆಯಬಹುದು. ಇದರಿಂದ ಹೆದ್ದಾರಿ ಗ್ರಾಮಗಳ ಜನರು ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯ ಎಂದು ಅಟ್ಟುಗುಳಿಪುರ, ಚೆಕ್‌ಪೋಸ್ಟ್, ಸಿದ್ದಯ್ಯನಪುರ ಹಾಗೂ ಚಿಕ್ಕಹೊಳೆ ಗ್ರಾಮಸ್ಥರು ಮನವಿ ಮಾಡಿದರು.

ತಾಲೂಕಿನ ಅಟ್ಟುಗುಳಿಪುರದ ಮಾರಮ್ಮ ದೇವಸ್ಥಾನದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎಇಇ ವೆಂಕಟಲಕ್ಷ್ಮಿ ಹಾಗೂ ಪ್ರಾದೇಶಿಕ ಆಯುಕ್ತೆ ಗಾಯತ್ರಿ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮಸ್ಥರು ಹಾಗೂ ಸಾರ್ವಜನಿಕರ ಸಭೆಯಲ್ಲಿ ಗ್ರಾಮಸ್ಥರು ರಸ್ತೆ ಅಗಲೀಕರಣಗೊಳಿಸುವಂತೆ ಒತ್ತಾಯಿಸಿದರು.

ಸಭೆಯಲ್ಲಿ ಜಿಲ್ಲಾ ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕೆ.ವೀರಭದ್ರಸ್ವಾಮಿ ಮಾತನಾಡಿ, ಸತ್ತಿಗೆ ಸಂಪರ್ಕ ಹೆದ್ದಾರಿಯಲ್ಲಿ ಹೆಚ್ಚಿನ ಅಪಘಾತಗಳು ನಡೆಯುತ್ತಿವೆ. ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ವೈಜ್ಞಾನಿಕವಾಗಿ ರಸ್ತೆ ನಿರ್ಮಾಣ ಮಾಡಿಲ್ಲ. ರಸ್ತೆ ಅಗಲೀಕರಣ ನೆಪದಲ್ಲಿ ಅಕ್ಕಪಕ್ಕದ ಗ್ರಾಮಸ್ಥರ ಜಾಗವನ್ನು ತೆರವುಗೊಳಿಸಿದ್ದಾರೆ. ಆದರೆ, ನಿವಾಸಿಗಳಿಗೆ ಯಾವುದೇ ರೀತಿ ಪರಿಹಾರ ನೀಡಿಲ್ಲ ಎಂದು ಆರೋಪಿಸಿದರು.

ಹೆದ್ದಾರಿ ಹಾಗೂ ವಾಸದ ಮನೆಗಳಿಗೆ ಐದು ಅಡಿ ದೂರವಿದ್ದು, ಇದರಿಂದ ವೃದ್ಧರು, ಮಕ್ಕಳು ತಿರುಗಾಡಗಲು ತೊಂದರೆಯಾಗುತ್ತಿದೆ. ಗುಣಮಟ್ಟದ ರಸ್ತೆ ನಿರ್ಮಿಸದಿದ್ದರಿಂದ ಅಲ್ಲಲ್ಲಿ ಹಳ್ಳಕೊಳ್ಳ ಬಿದ್ದಿವೆ. ಜೊತೆಗೆ ಯಾವುದೇ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ. ಸುಗಮ ಸಂಚಾರಕ್ಕೆ ರಸ್ತೆ ಉಬ್ಬು, ಸಿಸಿ ಕ್ಯಾಮರಾ, ಸಿಗ್ನಲ್ ಲೈಟ್ ಹಾಗೂ ತಿರುವುಗಳಲ್ಲಿ ರಸ್ತೆ ಸೂಚನಾಫಲಕ ಅಳವಡಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ರಸ್ತೆಯಲ್ಲಿ ಅಪಘಾತಗಳು ನಡೆಯುತ್ತಿದ್ದು, ಇದನ್ನು ತಪ್ಪಿಸಲು ಸಂಬಂಧಪಟ್ಟ ಮೂರು ಇಲಾಖೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ರಸ್ತೆ ಬದಿಯಲ್ಲಿ ಪೊಲೀಸ್ ಚೌಕಿ ನಿರ್ಮಾಣ ಮಾಡಬೇಕು. ವ್ಹೀಲಿಂಗ್ ಮಾಡುವವರ ವಿರುದ್ಧ ಕ್ರಮ ವಹಿಸುವ ಮೂಲಕ ಅಮೂಲ್ಯ ಜೀವಗಳನ್ನು ಉಳಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಡಿವೈಎಸ್ಪಿ ಲಕ್ಷ್ಮಯ್ಯ, ಇನ್ಸ್‌ಪೆಕ್ಟರ್‌ಗಳಾದ ದಿವಾಕರ್, ರವಿಕುಮಾರ್, ಹೆದ್ದಾರಿ ಗುತ್ತಿಗೆದಾರರಾದ ಅಜಯ್, ಗುರುದಯಾಳ್, ಎಪಿಎಂಸಿ ಮಾಜಿ ನಿರ್ದೇಶಕ ಬಿ.ಶಿವಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಚನ್ನಂಜಪ್ಪ ಗೌಡರ ಪಾರ್ವತಮ್ಮ, ಪುಟ್ಟಪ್ಪ, ಖಾವಿ ಬಸವರಾಜು, ಎಂಕೆಪಿ ಮಹೇಶ್ ಕುಮಾರ್, ಸಿದ್ದಯ್ಯನಪುರ ಗೋವಿಂದರಾಜು, ಸಿದ್ದರಾಜು, ಮೂಡ್ಲುಪುರ ಸತೀಶ್ ಹಾಗೂ ಸಂಘ ಸಂಸ್ಥೆ ಮುಖಂಡರು ಹಾಜರಿದ್ದರು.

ಏಕಮುಖ ಸಂಚಾರಕ್ಕೆ ಸೂಚನೆ

ಹೆದ್ದಾರಿಯಲ್ಲಿ ಅಪಘಾತಗಳನ್ನು ತಪ್ಪಿಸಲು ಈಗಾಗಲೇ ಸರ್ವೆ ನಡೆಸಲಾಗಿದೆ. ರಸ್ತೆ ನಿರ್ಮಿಸಿರುವ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ಏಕಮುಖ ಸಂಚಾರ ಮಾಡಬೇಕು. ಜೊತೆಗೆ ರಸ್ತೆ ಅಗಲೀಕರಣಗೊಳ್ಳಬೇಕು. ಚಾಮರಾಜನಗರದಿಂದ ಅಟ್ಟುಗುಳಿಪುರ ಟೋಲ್‌ಗೇಟ್ ವರೆಗೆ ಏಕಮುಖ ಸಂಚಾರ ಮಾಡಬೇಕು. ಜೊತೆಗೆ ಹೆದ್ದಾರಿ ಬದಿಯ ಗ್ರಾಮಗಳಲ್ಲಿ ಸಿಸಿ ಕ್ಯಾಮರಾ, ಸಿಗ್ನಲ್ ಲೈಟ್ ಅಳವಡಿಸಲು ಎಸ್ಪಿ ಡಾ.ಬಿ.ಟಿ.ಕವಿತಾ ಸೂಚನೆ ನೀಡಿದರು.

ಶಾಲಾ ವಾಹನ ಹರಿದು ಮಗು ಸಾವು



ಆರ್ಯ

ಚಾಮರಾಜನಗರ, ಸೆ.19– ಖಾಸಗಿ ಶಾಲಾ ವಾಹನ ಹರಿದು ಒಂದೂವರೆ ವರ್ಷದ ಗಂಡು ಮಗು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಕಮರವಾಡಿ ಗ್ರಾಮದಲ್ಲಿ ಗುರುವಾರ ನಡೆದಿದೆ.

ಗ್ರಾಮದ ನವೀನ್ ಮತ್ತು ಚೈತ್ರಾ ದಂಪತಿ ಪುತ್ರ ಆರ್ಯ ಮೃತಪಟ್ಟ ಮಗು. ಸಂತೇಮರಹಳ್ಳಿಯ ಲೋಟಸ್ ಆಂಗ್ಲ ಮಾಧ್ಯಮ ಶಾಲೆಯ ಬಸ್ ಬೆಳಗ್ಗೆ ಕಮರವಾಡಿ ಗ್ರಾಮದಿಂದ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗುತ್ತಿದ್ದಾಗ ಬಸ್ ಹಿಂದಕ್ಕೆ ಚಲಿಸಿದೆ. ಈ ವೇಳೆ ಮನೆ ಮುಂಭಾಗ ನಿಂತಿದ್ದ ಮಗುವಿನ ಮೇಲೆ ಬಸ್‌ನ ಚಕ್ರ ಹರಿದಿದೆ. ಪರಿಣಾಮ ಮಗು ಸ್ಥಳದಲ್ಲೇ ಸಾವನ್ನಪ್ಪಿದೆ. ಮೃತಪಟ್ಟ ಮಗುವನ್ನು ಕಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಈ ಸಂಬಂಧ ಸಂತೇಮರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಬಸ್ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ.

ವಿಷ್ಣುವರ್ಧನ್ ಕನ್ನಡ ಚಿತ್ರರಂಗದ ಶ್ರೇಷ್ಠ ನಟ



ಚಾಮರಾಜನಗರದಲ್ಲಿ ಏರ್ಪಡಿಸಿದ್ದ ವಿಷ್ಣುವರ್ಧನ್ ಜನ್ಮದಿನೋತ್ಸವ ಕಾರ್ಯಕ್ರಮವನ್ನು ವಕೀಲರ ಸಂಘದ ಮಾಜಿ ಅಧ್ಯಕ್ಷ ಉಮ್ಮತ್ತೂರು ಇಂದು ಶೇಖರ್ ಉದ್ಘಾಟಿಸಿದರು.

ಚಾಮರಾಜನಗರ, ಸೆ.19–ಕನ್ನಡ ಚಿತ್ರರಂಗದ ಶ್ರೇಷ್ಠ ನಟ ಡಾ.ವಿಷ್ಣುವರ್ಧನ್ ಅವರು ಮಾನವೀಯ ಮೌಲ್ಯಗಳ ಮೂಲಕ ಕೋಟ್ಯಾಂತರ ಅಭಿಮಾನಿಗಳ ಹೃದಯದಲ್ಲಿ ನೆಲೆಸಿದ್ದಾರೆ ಎಂದು ಜಿಲ್ಲಾ ವಕೀಲರ ಸಂಘದ ನಿಕಟ ಪೂರ್ವ ಅಧ್ಯಕ್ಷ ಉಮ್ಮತ್ತೂರು ಇಂದು ಶೇಖರ್ ಸ್ಮರಿಸಿದರು.

ನಗರದ ನ್ಯಾಯಾಲಯ ರಸ್ತೆಯ ವಿಶ್ವ ಹಿಂದೂ ಪರಿಷತ್ ಶಾಲೆಯ ಸಮೀಪ ಡಾ.ವಿಷ್ಣುವರ್ಧನ್ ಅಭಿಮಾನಿಗಳ ಸ್ನೇಹ ಬಳಗ ಹಮ್ಮಿಕೊಂಡಿದ್ದ ವಿಷ್ಣುವರ್ಧನ್ ಜನ್ಮದಿನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಷ್ಣುವರ್ಧನ್ ಭಾರತದ ಶ್ರೇಷ್ಠ ಚಲನಚಿತ್ರ ನಟರಾಗಿದ್ದರು. ಸುಸಂಸ್ಕೃತ ಹಾಗೂ ಜೀವನ ಮೌಲ್ಯ ಅಳವಡಿಸಿಕೊಂಡಿದ್ದರು. ವಿಷ್ಣುವರ್ಧನ್ ಚಿತ್ರಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡಿವೆ ಎಂದರು.

ಸರ್ಕಾರ ವಿಷ್ಣುವರ್ಧನ್ ಜಯಂತಿ ಆಚರಿಸಬೇಕು. ಜಿಲ್ಲಾ ಕೇಂದ್ರದ ಯಾವುದಾದರೂ ಒಂದು ವೃತ್ತ ಹಾಗೂ ರಸ್ತೆಗೆ ವಿಷ್ಣುವರ್ಧನ್ ಹೆಸರನ್ನು ನಾಮಕರಣ ಮಾಡಬೇಕೆಂದು ಆಗ್ರಹಿಸಿದರು.

ಇದೇ ವೇಳೆ ವಿಷ್ಣುವರ್ಧನ್ ಅವರ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ, ವಿಷ್ಣುವರ್ಧನ್ ಅಭಿಮಾನಿ ಬಳಗದ ಜ.ಸುರೇಶ್ ನಾಗ್ ಹರದನಹಳ್ಳಿ, ಡಾ.ಸುಗಂಧರಾಜ್, ಕರಿನಂಜನಪುರ ಕೂಸಣ್ಣ, ವಕೀಲ ಮಲ್ಲು, ಸಿ.ಡಿ.ಪ್ರಕಾಶ್, ಉಷಾ ಗಂಧರ್ವ ಶಿವಣ್ಣ, ಪುಟ್ಟುವರ್ಧನ್, ನಾಗೇಂದ್ರ, ದೊರೆಸ್ವಾಮಿ, ನಾಗರಾಜು, ಇಲಿಯಾಜ್ ಬಾಬು ಇದ್ದರು.

ಅಪ್ರಾಪ್ತ ಮಗನಿಗೆ ಓಡಿಸಲು ದ್ವಿಚಕ್ರ ವಾಹನ ನೀಡಿದ

ತಂದೆಗೆ 25 ಸಾವಿರ ರೂ. ದಂಡ

ಚಾಮರಾಜನಗರ, ಸೆ.19– ತನ್ನ ಅಪ್ರಾಪ್ತ ಮಗನಿಗೆ ಓಡಿಸಲು ದ್ವಿಚಕ್ರ ವಾಹನ ನೀಡಿದ ತಂದೆಗೆ ನ್ಯಾಯಾಲಯ 25 ಸಾವಿರ ರೂ. ದಂಡ ವಿಧಿಸಿ, ಮತ್ತೆ ಬೈಕ್ ನೀಡದಂತೆ ಎಚ್ಚರಿಕೆ ನೀಡಿದೆ. ದಂಡ ಪಾವತಿಸಲು ತಪ್ಪಿದಲ್ಲಿ ಮೂರು ತಿಂಗಳ ಜೈಲು ಶಿಕ್ಷೆ ಎದುರಿಸಬೇಕಾಗುತ್ತದೆ ಎಂದು ನ್ಯಾಯಾಲಯ ಎಚ್ಚರಿಸಿದೆ. ನಗರದಲ್ಲಿ ಪೊಲೀಸರ ರೌಂಡ್ಸ್ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ ಅವರಿಗೆ 17 ವರ್ಷದ ಅಪ್ರಾಪ್ತ ದ್ವಿಚಕ್ರ ವಾಹನ ಓಡಿಸುವಾಗ ಸಿಕ್ಕಿಬಿದ್ದಿದ್ದ. ನಂತರ ಬಾಲಕನ ತಂದೆ ವಿರುದ್ಧ ಪ್ರಕರಣ ದಾಖಲಿಸಿದ್ದರು.


ಕೆ.ತೇಜಸ್ವಿಗೆ ಪಿಹೆಚ್.ಡಿ



ಮೈಸೂರು: ಡಾ. ಆರ್.ಕೆ.ಭಾರತಿ ಅವರ ಮಾರ್ಗದರ್ಶನದಲ್ಲಿ ಕೆ.ತೇಜಸ್ವಿ ಅವರು ಗಣಕ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಉಪೇಂದ್ರ ವಿಶೇಷ ಪೋಸ್ಟರ್ ರಿಲೀಸ್

ಸ್ಯಾಂಡಲ್‌ವುಡ್‌ನ ರಿಯಲ್ ಸ್ಟಾರ್ ಉಪೇಂದ್ರ ಅಭಿನಯದ '45' ಸಿನಿಮಾ ಫಸ್ಟ್ ಲುಕ್ ರಿಲೀಸ್ ಆಗಿದೆ. ಈ ಚಿತ್ರದಲ್ಲಿ ರಾಜ್ ಬಿ ಶೆಟ್ಟಿ, ಶಿವರಾಜ್‌ಕುಮಾರ್ ಇದ್ದಾರೆ. ಆದರೆ, ಇವರ ಲುಕ್‌ಗಳಲ್ಲಿ ಸದ್ಯ ಎರಡು ಲುಕ್ ರಿವೀಲ್ ಆಗಿವೆ. ಉಪೇಂದ್ರ ಜನ್ಮ ದಿನಕ್ಕೆ ಉಪ್ಪಿಯ ಮಸ್ತ್ ಲುಕ್ ರಿಲೀಸ್ ಆಗಿದೆ. 45 ಸಿನಿಮಾದ ಲುಕ್ ಸೂಪರ್ ಆಗಿದೆ. ಸಖತ್ ಸ್ಟೈಲಿಶ್ ಕೂಡ ಆಗಿದೆ. ಕೈಯಲ್ಲಿ ಸಿಗಾರ್ ಇದೆ. ಲುಕ್ ಅಲ್ಲಿ ಬೆಂಕಿ ಇದೆ. ಲಾಂಗ್ ಹೇರ್ ಸ್ಟೈಲ್, ಕೈಗಳಲ್ಲಿ ವಿಶೇಷ ರಿಂಗ್ ಇವೆ. ಕಣ್ಣಿಗೆ ಕೂಲಿಂಗ್ ಗ್ಲಾಸ್ ಕೂಡ ಇದೆ. ಧರಿಸಿರೋ ಡ್ರೆಸ್ ಕೂಡ ಸ್ಪೆಷಲ್ ಫೀಲ್ ಕೊಡುತ್ತವೆ. ಟೋಟಲ್ ಆಗಿ ಉಪ್ಪಿಯ ಯೋಚನೆಗೆ ತಕ್ಕನಾಗಿಯೇ ಡೈರೆಕ್ಟರ್ ಅರ್ಜುನ್ ಜನ್ಯ ಈ ಒಂದು ಕ್ಯಾರೆಕ್ಟರ್ ಡಿಸೈನ್ ಮಾಡಿದ್ದಾರೆ. ಇದು ಉಪ್ಪಿಯ ಸ್ಪೆಷಲ್ ದಿನವೇ ರಿಲೀಸ್ ಆಗಿದೆ. ಅಂದ್ರೆ, ಉಪ್ಪಿಯ ಜನ್ಮದಿನಕ್ಕೇನೆ ಈ ಒಂದು ಲುಕ್ ರಿವೀಲ್ ಆಗಿದೆ. ಮೋಷನ್ ಪೋಸ್ಟರ್ ಕೂಡ ಹೊರಬಂದಿದೆ. ಉಪೇಂದ್ರ ಜನ್ಮದಿನಕ್ಕೇನೆ ಡೈರೆಕ್ಟರ್ ಅರ್ಜುನ್ ಜನ್ಯ ಈ ಒಂದು ಲುಕ್ ರಿವೀಲ್ ಮಾಡಿದ್ದಾರೆ. ಆದರೆ, ಈ ಸಿನಿಮಾದ ಕ್ಯಾರೆಕ್ಟರ್‌ಗಳ ಬಗ್ಗೆ ಅರ್ಜುನ್ ಜನ್ಯ ಎಲ್ಲೂ ಏನೂ ಬಿಟ್ಟುಕೊಟ್ಟಿಲ್ಲ. 45 ಸಿನಿಮಾದಲ್ಲಿ ಆಸಕ್ತಿದಾಯಕ ತಾರಾಗಣವಿದೆ. ಕೌಸ್ತುಭ ಮಣಿ ನಾಯಕಿಯಾಗಿ ನಟಿಸಿದ್ದಾರೆ. ರಮೇಶ್ ರೆಡ್ಡಿ ಅವರ ಸೂರಜ್ ಪ್ರೊಡಕ್ಷನ್ಸ್ ನಿರ್ಮಿಸಿರುವ ಈ ಚಿತ್ರ ಸದ್ಯ ನಿರ್ಮಾಣ ಹಂತದಲ್ಲಿದೆ. ಉಪೇಂದ್ರ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ, ನಟ ಉಪೇಂದ್ರ ಮನೆಗೆ ತೆರಳಿದ್ದ ಚಿತ್ರತಂಡ ಶುಭಾಶಯ ತಿಳಿಸಿದೆ. ಚಿತ್ರದ ಪ್ರಮುಖ ಕ್ಲೈಮ್ಯಾಕ್ಸ್ ದೃಶ್ಯಕ್ಕಾಗಿ ಜಿಗಣಿಯಲ್ಲಿ ವಿಶೇಷವಾಗಿ ನಿರ್ಮಿಸಲಾದ ಎರಡು ಎಕರೆ ಸೆಟ್‌ನಲ್ಲಿ ಚಿತ್ರೀಕರಣ ನಡೆಯುತ್ತಿದೆ. ಮುಂದಿನ 40 ದಿನ ಶೂಟಿಂಗ್ ನಡೆಯಲಿದೆ. ಹೆಸರಾಂತ ಸ್ಟಂಟ್ ಮಾಸ್ಟರ್ ರವಿವರ್ಮ ಅವರು ಕೊರಿಯೋಗ್ರಾಫ್ ಮಾಡಿದ್ದಾರೆ. 100 ಫೈಟರ್‌ಗಳಿದ್ದಾರೆ.





ಸಾಹಸಸಿಂಹ ವಿಷ್ಣುವರ್ಧನ್‌ರ 74ನೇ ಜನ್ಮದಿನ: ಅಭಿಮಾನಿಗಳಿಂದ ನೆಚ್ಚಿನ ನಟನ ಸ್ಮರಣೆ

ಖ್ಯಾತ ನಟ, ಕನ್ನಡ ಚಿತ್ರರಂಗದ 'ಸಾಹಸಸಿಂಹ' ದಿವಂಗತ ವಿಷ್ಣುವರ್ಧನ್ ಅವರ 74ನೇ ಜನ್ಮದಿನವನ್ನು ಸೆ.18ರಂದು ಅವರ ಅಭಿಮಾನಿಗಳು ಬೆಂಗಳೂರು ಸೇರಿದಂತೆ ನಾಡಿನಾದ್ಯಂತ ಅನ್ನದಾನ, ಆಸ್ಪತ್ರೆಗಳಲ್ಲಿ ಹಣ್ಣು ವಿತರಣೆ, ರಕ್ತದಾನ ಶಿಬಿರಗಳನ್ನು ಆಯೋಜಿಸುವ ಮೂಲಕ ವಿಷ್ಣು ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಆಚರಿಸಿದರು.

ಚಂದನವನದ ತಾರೆಯರು, ಅಭಿಮಾನಿಗಳು ಹಾಗೂ ರಾಜಕೀಯ ನಾಯಕರು, ಸಂಘ ಸಂಸ್ಥೆಗಳ ಗಣ್ಯರು ಸಾಮಾಜಿಕ ಜಾಲತಾಣಗಳ ಮೂಲಕ ನೆಚ್ಚಿನ 'ದಾದಾ'ನನ್ನು ಸ್ಮರಿಸಿದ್ದಾರೆ. ಅಭಿನಯ ಭಾರ್ಗವ ವಿಷ್ಣುವರ್ಧನ್ ಅವರನ್ನು ಅಭಿಮಾನಿಗಳ ಪ್ರೀತಿಯಿಂದ ವಿಷ್ಣುದಾದಾ ಎಂದೇ ಕರೆಯುತ್ತಾರೆ. ಅವರು ಭೌತಿಕವಾಗಿ ಇಲ್ಲದಿದ್ದರೂ ಸಿನಿಮಾಗಳ ಮೂಲಕ ಜೀವಂತವಾಗಿದ್ದಾರೆ. 200 ಸಿನಿಮಾಗಳಲ್ಲಿ ನಟಿಸಿರುವ ವಿಷ್ಣು ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಹೊಂದಿದ್ದಾರೆ. ಬೆಂಗಳೂರು ನಗರದೆಲ್ಲೆಡೆ ಅಭಿಮಾನಿಗಳು ಸಂಭ್ರಮದಿಂದ ಆಚರಿಸಿದರು.ಹಲವೆಡೆ ಕೇಕ್ ಕತ್ತರಿಸಿ, ರಕ್ತದಾನ ಮಾಡಿದರು. ಅಭಿಮಾನ್ ಸ್ಟುಡಿಯೋದಲ್ಲಿರುವ ಅವರ ಸಮಾಧಿಗೆ ಅಭಿಮಾನಿಗಳು ಪುಷ್ಪಗುಚ್ಛ ಇರಿಸಿ ನಮನ ಸಲ್ಲಿಸಿದರು.


ಇದಕ್ಕೂ ಮುನ್ನ ಸಮಾಧಿ ದರ್ಶನಕ್ಕೆ ಅವಕಾಶ ಸಿಗದೆ ಪ್ರತಿಭಟನೆ ನಡೆದು ಗದ್ದಲ ಉಂಟಾಯಿತು. ಕೆಂಗೇರಿಯಲ್ಲಿರುವ ಅಭಿಮಾನ್ ಸ್ಟುಡಿಯೊ ಹೊರಗೆ ವಿಷ್ಣುವರ್ಧನ್ ಪುಣ್ಯಭೂಮಿ ಟ್ರಸ್ಟ್ ವತಿಯಿಂದ ಅನ್ನದಾನ, ರಕ್ತದಾನ ಶಿಬಿರ, ಇತರೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸ್ಟುಡಿಯೊ ಹೊರಭಾಗದ ಕಾರ್ಯಕ್ರಮಕ್ಕೆ ಮಾತ್ರ ಜಿಲ್ಲಾಧಿಕಾರಿ ಅನುಮತಿ ನೀಡಿದ್ದರು. ಆದ್ದರಿಂದ, ಸಮಾಧಿಗೆ ಪೂಜೆ ಸಲ್ಲಿಸದಂತೆ ಸ್ಟುಡಿಯೋದ ಸಿಬ್ಬಂದಿ ತಡೆಯೊಡ್ಡಿ ಗೇಟ್‌ಗೆ ಬೀಗ ಹಾಕಿದರು. ಇದರಿಂದ ಆಕ್ರೋಶಗೊಂಡ ಅಭಿಮಾನಿಗಳು ಸ್ಮಾರಕದ ಗೇಟ್ ಬಳಿ ಪ್ರತಿಭಟನೆಗೆ ಮುಂದಾದರು. ಪೊಲೀಸರ ಮಧ್ಯಪ್ರವೇಶದಿಂದ ದರ್ಶನಕ್ಕೆ ಮಾತ್ರ ಅವಕಾಶ ಕಲ್ಪಿಸಿದ ನಂತರ ವಾತಾವರಣ ತಿಳಿಗೊಂಡಿತು.

ವಿಷ್ಣುವರ್ಧನ್ ಮಂಟಪಕ್ಕೆ ಹೂವಿನ ಅಲಂಕಾರ ಮಾಡಲಾಗಿತ್ತು. ಸ್ಟುಡಿಯೋದ ಹೊರಗಡೆ ಪೆಂಡಾಲ್ ಹಾಕಿ ಆಯೋಜಕರು ವಿವಿಧ ಕಾರ್ಯಕ್ರಮಗಳನ್ನು ನಡೆಸಿದರು. ಸಮಾಧಿ ಹಾಗೂ ಸುತ್ತಮುತ್ತ ಹೂವಿನ ಅಲಂಕಾರ ಮಾಡುವುದು ಸ್ವಲ್ಪ ತಡವಾಗಿತ್ತು. ಈ ಕಾರಣಕ್ಕೆ ಪ್ರವೇಶ ಸಿಕ್ಕಿರಲಿಲ್ಲ. ನಂತರ, ಅಭಿಮಾನಿಗಳಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು. ಯಾವುದೇ ಸಮಸ್ಯೆ ಆಗಿಲ್ಲ ಎಂದು ಪೊಲೀಸರು ಹೇಳಿದರು.

ಸಿನಿಪದಬಂಧ-543



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು

ವಿಳಾಸ

ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ

1.ಅಂಬಿ – ಗೀತಾಳಿಗೆ ಭಗವದ್ಗೀತೆಯ ಅಧ್ಯಾಯವೊಂದರ ದರ್ಶನವಾಗಿದೆ 4
3.ಇಲ್ಲೇ ಮೇಲಿನಿಂದ ಕೆಳಕ್ಕೆ 7 ರಲ್ಲಿರುವ ಹಾಡಿನ ಚಿತ್ರವಿದು 5
5.ವೃಕ್ಷದ ನಡುವೆ ಗಂಡು ನವಿಲು ಪ್ರತ್ಯಕ್ಷ ! 3
6.ಕೆರೆಗೆ ಹಾರವಾದ ಹೆಣ್ಣಿಗೆ ಆರಂಭದಲ್ಲಿ ಅಲ್ಪಪ್ರಾಣವಿದೆ 4
7.ಜೇನಿನ ಹೊಳೆಯೊಂದಿಗೆ ಸುರಿದ ಕ್ಷೀರ ಧಾರೆ 5
8.ಕಮಲ ಅರಳಿದ "ಬಗ್ಗಡ" 3
10. ಮಣ್ಣು ತುಳಿದ ಭಕ್ತ 3
11. " _ _ _ _ ರಾಘವ ರಾಜ ರಾಮ ಪತೀತ ಪಾವನ ಸೀತಾರಾಮ..... " 4
13.ಬಂಗಾರದ ಮನುಷ್ಯ ವ್ಯವಸಾಯಗಾರ 3
14.ಸರ್ಪದ ಹೆಣ್ಣಿನ ಕೊನೆಯಲ್ಲಿ ಪಕ್ಷಿಯಿದೆ 3
15.ಗಣೇಶ್, ಪೂಜಾಗಾಂಧಿ, ಶರ್ಮಿಳಾ ಮಾಂಡ್ರೆ ಅಭಿನಯದ ಚಿತ್ರ 2
16.ಸಂಪತ್ತಿಗೆ ಸವಾಲ್ ಚಿತ್ರದ ನಾಯಕಿ 3
17.ಮಲ್ಲಿಗೆಯ ಊರು 3

ಮೇಲಿನಿಂದ ಕೆಳಕ್ಕೆ

1.ನಂಜು ತುಂಬಿಕೊಂಡ ಹೆಣ್ಣು 4
2.ಮಹಾಭಾರತದ ದೌಪ್ರದಿ ಕ್ರಿಕೆಟ್ ಆಟಗಾರನೊಂದಿಗಿದ್ದಾಳೆ 5
3.ಸತ್ಯ ಹರಿಶ್ಚಂದ್ರ ಚಿತ್ರದ ಎಂ. ಪಿ. ಶಂಕರ್ 4
4.ಅಂಬರೀಷ್ – ಮಹಾಲಕ್ಷ್ಮಿ ಅಭಿನಯಕ್ಕೆ ಡಿ.ರಾಜೇಂದ್ರ ಬಾಬು ನಿರ್ದೇಶಕ 5
5.ಸತಿ ಸುಕನ್ಯ ಚಿತ್ರದ ಹಾಡೊಂದರ ಆರಂಭ 10
7.ಇಲ್ಲೇ ಎಡದಿಂದ ಬಲಕ್ಕೆ 3ರಲ್ಲಿರುವ ಚಿತ್ರದ ಹಾಡಿದು 6
9.ಲಾಲಿ ಚಿತ್ರದ ನಾಯಕಿ 4
12.ಡಾ. ರಾಜ್ ಕುಮಾರ್ ತ್ರಿಪಾತ್ರಾಭಿನಯದ ಚಿತ್ರ 5

ಸಿನಿ ಪದಬಂಧ 542ರ ಉತ್ತರ

ಪೂ	ರ್ಣ	ಸ	ತ್ಯ			ನಾ	ಗ	ರ	ಹಾ	ವು
ರ್ಣ		ದೋ		ಭು	ಜಂ	ಗ		ಣ		
ಚಂ		ಜಾ		ಜಂ		ಕ	ಲಾ	ವಿ	ದ	
ದ್ರ		ದೇ		ಗ		ನ್ಯೆ		ಕ್ರ		
	ಜಿ	ವಿ	ಅ	ಯ್ಯ	ರ್			ಮ	ರ	ಣ
	ಕೆ			ನ			ಶಂ			
ಕು	ವೆಂ	ಪು		ದ	ಶ	ಮು	ಖ		ಕಾ	
	ಕ			ಶಾ			ನಾ	ವಿ	ಕ	
ಪ	ಟೇ	ಲ		ವ		ಪ	ದ		ನ	
	ಶ್		ಸಿ	ತಾ	ರ				ಕೋ	
				ರ			ಭ	ರಾ	ಟೆ	

ವಿಜೇತರು: ಎಸ್.ಶೈಲೇಶ್, ಮೈಸೂರು ಇಂಜಿನಿಯರ್ ಕಾಲೇಜು, ತಿ.ನರಸೀಪುರ, ರಸ್ತೆ, ಮೈಸೂರು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮಿಟೂಗೆ ಕೇರಳ ಮಾದರಿ ಸಮಿತಿ ಬೇಡ–ಫಿಲಂ ಚೇಂಬರ್



ಚಿತ್ರರಂಗದಲ್ಲಿ ಕೆಲಸ ಮಾಡೋ ಹೆಣ್ಣುಮಕ್ಕಳಿಗೆ ಯಾವುದೇ ರಕ್ಷಣೆಯಿಲ್ಲ ಎಂಬ ಕೂಗು ಮೊದಲಿಂದಲೂ ಕೇಳಿ ಬರುತ್ತಿದೆ. ಆಕೆ ಎದುರಿಸುವ ಲೈಂಗಿಕ ಕಿರುಕುಳ, ದೌರ್ಜನ್ಯ ಮತ್ತು ಇತರ ಸಮಸ್ಯೆಗಳನ್ನು ಪರಿಹರಿಸಲು ಕೇರಳ ಮಾದರಿಯಲ್ಲಿ ಸಮಿತಿ ರಚನೆ ಮಾಡುವ ಸಂಬಂಧ ಫಿಲಂ ಚೇಂಬರ್‌ನಲ್ಲಿ ಸಭೆ ನಡೆಸಲಾಯಿತು. ಅಲ್ಲಿ ಪರ–ವಿರೋಧ ಅಭಿಪ್ರಾಯಗಳು ವ್ಯಕ್ತವಾದವು, ಅಂತಿಮವಾಗಿ ನಮ್ಮಲ್ಲಿ ಸಮಿತಿ ರಚನೆ ಬೇಡ ಎಂಬ ತೀರ್ಮಾನಕ್ಕೆ ಬರಲಾಯಿತು.

ಕನ್ನಡ ಚಿತ್ರರಂಗಕ್ಕೆ ತನ್ನದೇ ಆದ ಇತಿಹಾಸವಿದೆ. ಇಲ್ಲಿ ಲೈಂಗಿಕ ದೌರ್ಜನ್ಯ ನಡೆದಿರೋದು ಚೇಂಬರ್ ಗಮನಕ್ಕೆ ಬಂದಿಲ್ಲ. ಒಂದು ಪಕ್ಷ ಹಾಗೇನಾದರೂ ಆದರೆ, ಸಮಸ್ಯೆ ಬಗೆಹರಿಸುವ ಕೆಲಸ ವಾಣಿಜ್ಯ ಮಂಡಳಿ ಮಾಡಲಿದೆ. ಹೀಗಾಗಿ ನಮ್ಮಲ್ಲಿ ಸಮಿತಿ ರಚನೆ ಬೇಡ ಎಂಬ ತೀರ್ಮಾನಕ್ಕೆ ಬರಲಾಯಿತು, ಮಹಿಳಾ ಕಲಾವಿದೆಯರ ಸಮಸ್ಯೆ ಪರಿಹರಿಸಲು ಕೇರಳದಲ್ಲಿ ನ್ಯಾಯಮೂರ್ತಿ ಹೇಮಾ ಸಮಿತಿ ರಚಿಸಿದಂತೆ ನಮ್ಮಲ್ಲೂ ಸಹ ಸಮಿತಿ ರಚನೆಯಾಗಬೇಕು ಎಂದು ಕೆಲ ಕಲಾವಿದೆಯರು ಸಿಎಂಗೆ ಮನವಿ ಪತ್ರ ಸಲ್ಲಿಸಿದ್ದರು.

ಈ ಸಂಬಂಧ ಚಿತ್ರೋದ್ಯಮದವರ ಅಭಿಪ್ರಾಯ ಸಂಗ್ರಹಿಸಲು ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಆಗಮಿಸಿದ್ದರು, ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ, ಕಿರುಕುಳದಂಥ ಸಮಸ್ಯೆಗಳನ್ನು ಪರಿಹರಿಸಲು ಸಮಿತಿ ರಚನೆಯಾಗಬೇಕು ಎಂದು ಕೆಲವು ನಟ–ನಟಿಯರು ಸಭೆಯಲ್ಲಿ ಮಂಡಿಸಿದರೆ, ಸಮಸ್ಯೆ ಪರಿಹಾರಕ್ಕೆ ನಮ್ಮಲ್ಲಿ ವಾಣಿಜ್ಯ ಮಂಡಳಿಯಿದೆ. ನಮ್ಮಲ್ಲೇ ಬಗೆಹರಿಸಿಕೊಳ್ಳೋಣ, ಸಮಿತಿ ಅಗತ್ಯವಿಲ್ಲ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು, ಮಹಿಳಾ ಮಣಿಗಳ ಗಲಾಟೆ ಗದ್ದಲಗಳು, ಮಾತಿನ ಚಕಮಕಿ ನಡುವೆ, ಕೆಲವು ನಟಿಯರು, ತಂತ್ರಜ್ಞರು ತಮ್ಮ ಮೇಲಾದ ದೌರ್ಜನ್ಯದ ಬಗ್ಗೆ ಹೇಳಿಕೊಂಡು ಧ್ವನಿ ಏರಿಸಿದರು. ಕೊನೆಯಲ್ಲಿ ಸಮಿತಿ ರಚನೆ ಬೇಡ ಎಂದು ಒಕ್ಕೊರಲಿನಿಂದ ನಿರ್ಧರಿಸಲಾಯಿತು.

ಈ ಸಭೆಯಲ್ಲಿ ನಿರ್ದೇಶಕಿ ಕವಿತಾ ಲಂಕೇಶ್, ನಟಿ ನೀತು ಶೆಟ್ಟಿ, ಭಾವನಾ ರಾಮಣ್ಣ, ಸಂಜನಾ, ತಾರಾ, ಅನಿತಾ ಭಟ್, ಅಶ್ವಿನಿಗೌಡ, ವಾಣಿಶ್ರೀ, ಸಿಂಧು ಲೋಕನಾಥ್, ಉಮೇಶ್ ಬಣಕಾರ್, ಸಾ.ರಾ.ಗೋವಿಂದು, ರಾಕ್‌ಲೈನ್ ವೆಂಕಟೇಶ್, ಜಯಸಿಂಹ ಮುಸುರಿ ಹಾಗೂ ಇತರರರು ಹಾಜರಿದ್ದರು.

ಕಲೆ, ಕೊಲೆ, ಹಣದ ಸುತ್ತ 'ಜೋಕರ್' ಆಕ್ಟರ್

ಕಲೆ, ಕೊಲೆ ಹಾಗೂ ಹಣದ ಸುತ್ತ ನಡೆಯೋ ಕಥೆಯಿರುವ ಜೋಕರ್ ಆಕ್ಟರ್ ಎಂಬ ಕಿರುಚಿತ್ರಕ್ಕೆ ಪ್ರಶಾಂತ್ ಮಯೂರ ಆಕ್ಷನ್ ಕಟ್ ಹೇಳಿದ್ದಾರೆ. ಹಣ ಅನ್ನೋದು ತುಂಬಾ ಕೆಟ್ಟದ್ದು, ಅದು ಮಾನವನ ಕೈಲಿ ಏನು ಬೇಕಾದ್ರೂ ಮಾಡಿಸುತ್ತೆ ಎಂದು ಈ ಚಿತ್ರದಲ್ಲಿ ತೋರಿಸಿದ್ದಾರೆ.

ಈ ಕುರಿತು ಮಾತನಾಡಿದ ನಾಯಕ, ನಿರ್ದೇಶಕ ಪ್ರಶಾಂತ್ ಮಯೂರ್, ನಮ್ಮ ಚಿತ್ರ ಅಣ್ಣಾವ್ರ ಧ್ವನಿಯಿಂದ ಆರಂಭವಾಗಿ, ಅಣ್ಣಾವ್ರ ಧ್ವನಿಯಿಂದಲೇ ಪೂರ್ಣಗೊಳ್ಳುತ್ತದೆ. ಸ್ನೇಹಿತರೆಲ್ಲಾ ಸೇರಿ ಸೀಮಿತ ಬಜೆಟ್‌ನಲ್ಲಿ ಇದನ್ನು ನಿರ್ಮಿಸಿದ್ದೇವೆ. ನಾನೇ ನಾಯಕನಾಗೂ ನಟಿಸಿದ್ದೇನೆ, ಯೂಟ್ಯೂಬ್‌ನಲ್ಲಿ ಇದನ್ನು ಉಚಿತವಾಗಿ ನೋಡಬಹುದು. ಚಿತ್ರ ತಮಗೆ ಇಷ್ಟವಾದರೆ, ಕ್ಯೂಆರ್ ಕೋಡ್ ಮೂಲಕ 20 ರೂ. ಪಾವತಿಸಬಹುದು ಎಂದರು. ಈ ಕಿರುಚಿತ್ರಕ್ಕೆ 5 ಲಕ್ಷ ಖರ್ಚಾಗಿದೆ. ಐದಾರು ದಿನಗಳಲ್ಲಿ ಚಿತ್ರೀಕರಿಸಿದ್ದೇವೆ. ಜನರಿಗೆ ಮೆಸೇಜ್ ಹೇಳಲೆಂದು ಈ ಚಿತ್ರ ಮಾಡಿದ್ದೇವೆ. ಹಣ ಗಳಿಸೋ ಉದ್ದೇಶದಿಂದಲ್ಲ ಎಂಬ ಮಾತನ್ನೂ ಅವರು ಸೇರಿಸಿದರು. ನಟಿ ಯುಕ್ತ ಪರ್ವಿ ಮಾತನಾಡಿ, ಚಿತ್ರದ ಪಾತ್ರಕ್ಕಾಗಿ ನಾನು ಸಿಗರೇಟ್ ಕೂಡ ಸೇದಿದ್ದೇನೆ. ಈ ಸೀನ್‌ಗೆ ನಾನು ಆರೇಳು ಟೇಕ್ ತೆಗೆದುಕೊಂಡಿದ್ದೇನೆ. ಹಾಗಂತ ಯಾರೂ ಟ್ರೈ ಮಾಡಬೇಡಿ ಎಂದು ಯುವತಿಯರಿಗೆ ಸಲಹೆ ನೀಡಿದರು. ಮತ್ತೊಬ್ಬ ನಟ ಶೈಲೇಶ್ ಮಾತನಾಡಿ, ನಿರ್ದೇಶಕರು ಈ ಕಥೆ ಹೇಳುವಾಗಲೇ ವಿಭಿನ್ನ ಸೃಜನಾತ್ಮಕ ಪ್ರಯತ್ನ ಎನಿಸಿತು. ತುಂಬಾ ಡೈಮೆನ್ಷನ್ ಇರೋ ಚಿತ್ರ ಎಂದರು. ಪಾಂಡಿಯನ್ ಕುಪ್ಪನ್ ಅವರ ಕ್ಯಾಮೆರಾ ವರ್ಕ್, ರಿಶಾನ್ ಆದಿತ್ಯ ಅವರ ಸಂಗೀತ ಈ ಚಿತ್ರಕ್ಕಿದೆ.



1.57 ಕೋಟಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಅಭಿವೃದ್ಧಿ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು.

ಹುಣಸೂರು, ಸೆ.19– ನಗರದ ಹೃದಯ ಭಾಗದಲ್ಲಿರುವ ಸಂತೆ ಮೈದಾನದ ಜಾಗವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವ ಮೂಲಕ ನಗರಸಭೆಗೆ ಆದಾಯ ತರಬೇಕಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಸಂತೆ ಮೈದಾನದಲ್ಲಿ ಅಮೃತ ನಗರೋತ್ಥಾನ 4ನೇ ಹಂತದ 1.57 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸಂತೆ ಮೈದಾನದಲ್ಲಿನ ಅಭಿವೃದ್ಧಿ ಕಾಮಗಾರಿಗಾಗಿ 3 ಕೋಟಿ ಹಣವಿದ್ದು, ಈ ಹಣದಲ್ಲಿ ಹಲವು ವರ್ಷಗಳಿಂದ ಅಭಿವೃದ್ಧಿಯಾಗದೇ ಪಾಳು ಬಿದ್ದಿರುವ ಸಂತೆ ಮೈದಾನವನ್ನು ಅಭಿವೃದ್ಧಿಪಡಿಸಲಾಗುವುದು. ಇದಕ್ಕೆ ನಗರಸಭೆ ಸದಸ್ಯರು ಸಂಪೂರ್ಣ ಸಹಕಾರ ನೀಡಲಿದ್ದು, ಎಲ್ಲಾ ರೀತಿಯ ವಾಣಿಜ್ಯ ವಹಿವಾಟನ್ನು ನಡೆಸುವ ಮೂಲಕ ನಗರಸಭೆ ಆದಾಯ ಹೆಚ್ಚಿಸಬೇಕಾದ ಕೆಲಸ ಮಾಡಬೇಕಿದೆ ಎಂದರು.

ಈ ವೇಳೆ ಇಲ್ಲಿನ ವ್ಯಾಪಾರಿಗಳು ನಗರಸಭೆಯೊಂದಿಗೆ ಸಹಕರಿಸಿ ಎಂದಾಗ ವ್ಯಾಪಾರಿಗಳು ಮಾತನಾಡಿ, ಅನೇಕ ವರ್ಷಗಳಿಂದ ವ್ಯಾಪಾರ ಮಾಡಿಕೊಂಡು ಬಂದ ನಮ್ಮನ್ನು, ನಗರಸಭಾ ಅಧಿಕಾರಿಗಳು ಹೊರಹಾಕಿ ಮಳಿಗೆಗಳಿಗೆ ಬೀಗ ಹಾಕಿ ಬೀದಿ ಪಾಲು ಮಾಡಿದರು. ಈ ಸಂಬಂಧ ನಮಗಾದ ಅನ್ಯಾಯದ ವಿರುದ್ಧ ಕೋರ್ಟ್‌ಮೊರೆ ಹೋದಾಗ ನ್ಯಾಯಾಲಯ ನಮಗಾದ ಅನ್ಯಾಯಕ್ಕೆ ನ್ಯಾಯ ಒದಗಿಸಿ ಕೊಟ್ಟಿತು. ಇದೀಗ ಇರುವ ಮಳಿಗೆಗಳಲ್ಲಿ ನಾವೇ ಮುಂದುವರೆಯುತ್ತೇವೆ, ಅಡ್ವಾನ್ಸ್, ಬಾಡಿಗೆಯನ್ನು ನಾವೇ ನೀಡುತ್ತೇವೆ. ನಮಗೆ ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು ಈ ಸಂಬಂಧ ನಿಮ್ಮ ಸಮ್ಮುಖದಲ್ಲೇ ಸಭೆ ಆಯೋಜಿಸಿ ಚರ್ಚಿಸಲಾಗುವುದು. ಇದರಿಂದ ನಿಮಗೂ ಅನುಕೂಲವಾಗಲಿದ್ದು, ನಗರಸಭೆಗೂ ಆದಾಯ ಬರಬೇಕು ಎಂದರು.

ನಗರದ ವಿವಿಧ ಬಡಾವಣೆಗಳಲ್ಲಿರುವ ಸಿಎ ನಿವೇಶಗಳನ್ನು ನಗರಸಭೆ ವಶಕ್ಕೆ ಪಡೆದು ಅವಶ್ಯವಿದ್ದ ಕಡೆ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲಾಗುವುದು. ಇದರಿಂದ ನಗರಸಭೆಗೆ ಆದಾಯ ಬರಲಿದೆ ಎಂದರು.

ನಗರಸಭೆ ನೂತನ ಅಧ್ಯಕ್ಷ ಶರವಣ ಮಾತನಾಡಿ, ನಾನು ಅಧ್ಯಕ್ಷನಾದ ಬಳಿಕ ಶಾಸಕರ ನೇತೃತ್ವದಲ್ಲಿ ನಗರದ ಸಂತೆ ಮೈದಾನದಲ್ಲಿ 1.57 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಈ ವೇಳೆ ಉಪಾಧ್ಯಕ್ಷೆ ಆಶಾ, ಸದಸ್ಯರಾದ ಕೃಷ್ಣರಾಜಗುಪ್ತ, ರಾಣಿಪೆರುಮಾಳ್, ಗೀತಾ, ರಾಧಮ್ಮ ಶ್ರೀನಾಥ್, ಹರೀಶ, ದೇವನಾಯ್ಕ, ರಮೇಶ್, ದೇವರಾಜ್, ಸಿರಾಜ್ ಪಾಷ, ರಿಜ್ವಾನ್, ಮಾಲೀಕ್ ಪಾಷ, ಹೆಚ್.ಪಿ.ಸತೀಶ್, ಎಇಇ ಶರ್ಮಿಳ, ಎಇ ಲೋಕೇಶ್, ಜೆಇ ಸುಮಂತ್, ಶಿವಕುಮಾರ್ ಇನ್ನಿತರರಿದ್ದರು.

ನಿಸ್ವಾರ್ಥ ಸೇವೆಯಿಂದ ಡೈರಿ ಅಭಿವೃದ್ಧಿ ಸಾಧ್ಯ

ಬೆನಕನಹಳ್ಳಿ ಡೈರಿ ಸಭೆಯಲ್ಲಿ ಮೈಮುಲ್ ಅಧ್ಯಕ್ಷ ಚೆಲುವರಾಜು ಅಭಿಪ್ರಾಯ



ಸಭೆಯಲ್ಲಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು, ಮಾಜಿ ಅಧ್ಯಕ್ಷ ಸಿ.ಓಂಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಸೆ.19– ನಿಸ್ವಾರ್ಥ ಸೇವೆಯಿಂದ ಸಂಘದ ಅಭಿವೃದ್ಧಿ ಸಾಧ್ಯ ಎಂದು ಮೈಮುಲ್ ಅಧ್ಯಕ್ಷ ಅಧ್ಯಕ್ಷ ಆರ್. ಚೆಲುವರಾಜು ಅಭಿಪ್ರಾಯಪಟ್ಟರು.

ತಾಲೂಕಿನ ಬೆನಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಗುರುವಾರ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಹಾಲು ಉತ್ಪಾದಕರ ಸಹಕಾರ ಸಂಘ ಅಭಿವೃದ್ಧಿ ಹೊಂದಲು ಉತ್ಪಾದಕರು ಗುಣಮಟ್ಟದ ಹಾಲು ಸರಬರಾಜು ಮಾಡಬೇಕು. ಅಲ್ಲದೇ ಆಡಳಿತ ಮಂಡಳಿ ಕೂಡ ಯಾವುದೇ ಸ್ವಾರ್ಥ ಇಟ್ಟುಕೊಳ್ಳದೇ ನಿಸ್ವಾರ್ಥ ಮನೋಭಾವದಿಂದ ಕೆಲಸ ಮಾಡಬೇಕು ಎಂದರು.

ಗ್ರಾಮದ ಅಭಿವೃದ್ಧಿ ಗಮನಿಸಿದರೆ ಆಡಳಿತ ಮಂಡಳಿ ನಿಸ್ವಾರ್ಥ ಸೇವೆ ಎದ್ದು ಕಾಣುತ್ತಿದೆ. ಹಾಗಾಗಿ ಆಡಳಿತ ಮಂಡಳಿಯ ಸೇವೆ ಶ್ಲಾಘನೀಯ. ಮೈಮುಲ್ ಸಂಘದ ಸದಸ್ಯರಿಗೆ ಕೊಡಬೇಕಾದ ಸವಲತ್ತುಗಳನ್ನು ನೇರವಾಗಿ ತಲುಪಿಸುವ ಕೆಲಸ ಮಾಡುತ್ತಿದೆ. ಮಿಲ್ಕಿಂಗ್ ಮಿಷನ್, ಚಾಪ್ ಕಟರ್, ಮ್ಯಾಟ್‌ಗಳನ್ನು ಅಗತ್ಯಕ್ಕೆ ತಕ್ಕಂತೆ ಪೂರೈಕೆ ಮಾಡುವ ಮೂಲಕ ಹೈನುಗಾರರ ಬೆನ್ನೆಲುಬಾಗಿ ನಿಂತಿದೆ. ಗ್ರಾಮಗಳಲ್ಲಿ ಹೆಚ್ಚಿನ ಜನರು ವ್ಯವಸಾಯದೊಂದಿಗೆ ಹೈನುಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ಒಕ್ಕೂಟ ಹೈನುಗಾರಿಕೆ ಮಾಡುವ ರೈತರಿಗೆ ಹೆಚ್ಚಿನ ಬೆಂಬಲ ನೀಡಲಿದೆ ಎಂದರು.

ಮಾಜಿ ಅಧ್ಯಕ್ಷ ಸಿ.ಓಂ.ಪ್ರಕಾಶ್ ಮಾತನಾಡಿ, ಬೆನಕನಹಳ್ಳಿ ಸಹಕಾರ ಸಂಘವು 40 ವರ್ಷಗಳ ಹಳೆಯ ಸಂಘವಾಗಿದ್ದು, ಸಂಘದ ಸಂಸ್ಥಾಪಕರು ಡೈರಿಗೆ ಕಟ್ಟಡ ನೀಡಿದ್ದಾರೆ. ಅಲ್ಲದೇ ಶಿಥಿಲಗೊಂಡಿದ್ದ ಕಟ್ಟಡವನ್ನು ಕೆಡವಿ 40 ಲಕ್ಷ ರೂ. ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಿಸಿ, ಬಿಎಂಸಿ ಕೇಂದ್ರ ಸಹ ನೀಡಲಾಗಿದೆ.

ಗ್ರಾಮ ಗಡಿ ಗ್ರಾಮವಾಗಿದ್ದು, ಸಹಕಾರ ಸಂಘಕ್ಕೆ 1500 ಲೀಟರ್ ಹಾಲು ಸರಬರಾಜು ಮಾಡುತ್ತಿದೆ. ಸಂಘದಲ್ಲಿ ಸೌಹಾರ್ದಯುತ ಚರ್ಚೆ ನಡೆದು ಸಂಘವು ಉತ್ತಮವಾಗಿ ನಡೆದುಕೊಂಡು ಹೋಗುತ್ತಿದೆ ತಾಲೂಕಿನ ಅತ್ಯುತ್ತಮ ಸಂಘಗಳಲ್ಲಿ ಬೆನಕನಹಳ್ಳಿ ಸಹಕಾರ ಸಂಘವು ಒಂದಾಗಿದೆ ಎಂದರು.

ಸಂಘದ ಕಾರ್ಯದರ್ಶಿ ಮಾದಪ್ಪ ವಾರ್ಷಿಕ ವರದಿ ಮಂಡಿಸಿ ಸಂಘವು ಪ್ರಸಕ್ತ ಸಾಲಿನಲ್ಲಿ 3,61,045 ರೂ. ನಿವ್ವಳ ಲಾಭ ಗಳಿಸಿದೆ ಎಂದರು. ಇದೇ ವೇಳೆ ಸಂಘದಿಂದ ಮೈಮುಲ್ ಅಧ್ಯಕ್ಷ ಚೆಲುವರಾಜು, ಮಾಜಿ ಅಧ್ಯಕ್ಷ ಓಂಪ್ರಕಾಶ್ ಅವರಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಬಿ.ಎಂ.ಬಸವಣ್ಣ ಸಭೆ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಬಿ.ಎನ್. ಪ್ರಕಾಶ್, ನಿರ್ದೇಶಕ ನಾಗೇಂದ್ರ ಎಂ.ಗಿರೀಶ್, ಬಿ.ಎಸ್. ಮಹೇಶ್, ಬಿ.ಎಂ.ಶಿವಕುಮಾರಸ್ವಾಮಿ, ಮಹದೇವಸ್ವಾಮಿ, ರಾಜಬುದ್ದಿ, ಸಿ.ಮರಿಸ್ವಾಮಿ, ಶಿವಮ್ಮಗವಿಸಿದ್ದಯ್ಯ, ಸಿ.ಎಂ. ಇಂದ್ರಮ್ಮ, ಶಿವಮ್ಮ, ಗ್ರಾಮದ ಮುಖಂಡರಾದ ಗೌಡ್ರ ರಾಜಶೇಖರ್, ಡೈರಿ ಮಾಜಿ ಅಧ್ಯಕ್ಷ ಬಸಪ್ಪ, ಬೆನಕನಹಳ್ಳಿ ಪ್ರಭುಸ್ವಾಮಿ, ಜಿಲ್ಲಾ ಹಾಲು ಒಕ್ಕೂಟದ ವ್ಯವಸ್ಥಾಪಕ ಡಾ.ಎಲ್. ಆರ್.ಕೆ ಬಸವರಾಜು, ತಾಲೂಕು ಮೇಲ್ವಿಚಾರಕ ಆರ್.ಪ್ರಮೋದ್, ಮಾರ್ಗ ವಿಸ್ತರಣಾಧಿಕಾರಿ ಸಿ.ಅನಿತಾ, ನಿವೃತ್ತ ವ್ಯವಸ್ಥಾಪಕ ಡಾ.ದಿವಾಕರ್, ಸಂಘದ ಹಾಲು ಪರೀಕ್ಷಕ ಬಿ.ಪಿ.ಮಹೇಶ್, ಗುಮಾಸ್ತ ಬಿ.ಎನ್.ಮಹೇಶ್, ಸಹಾಯಕಿ ಹೂವಮ್ಮ ಸೇರಿದಂತೆ ಷೇರುದಾರರು ಗ್ರಾಮಸ್ಥರು ಹಾಜರಿದ್ದರು.

ಸಹಕಾರ ಸಂಘದಿಂದ ಸಂಕಷ್ಟದಲ್ಲಿರುವ ಶಿಕ್ಷಕರಿಗೆ ಸಹಾಯ

ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಕೃಷ್ಣಪ್ಪ



ವಾರ್ಷಿಕ ಮಹಾಸಭೆಯನ್ನು ಗಣ್ಯರು ಉದ್ಘಾಟಿಸಿದರು.

ಕೆ.ಆರ್.ನಗರ, ಸೆ.19– ಸಹಕಾರ ಸಂಘ ಆರ್ಥಿಕ ಸಂಕಷ್ಟದಲ್ಲಿರುವ ಶಿಕ್ಷಕರಿಗೆ ಸಹಾಯ ಮಾಡುವ, ಶೈಕ್ಷಣಿಕವಾಗಿ ಚರ್ಚಿಸುವ ಜೊತೆಗೆ ಶಿಕ್ಷಕರ ಕ್ಷೇತ್ರ ಬೆಳವಣಿಗೆ ಹೊಂದಲು ಸಾಧ್ಯವಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಕೃಷ್ಣಪ್ಪ ತಿಳಿಸಿದರು.

ಪಟ್ಟಣದ ಸರ್ಕಾರಿ ನೌಕರರ ಭವನದ ಸಭಾಂಗಣದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಘಗಳು ಆರ್ಥಿಕ ಬೆಳವಣಿಗೆಯಾಗಬೇಕೆ ಹೊರತು ಚರ್ಚೆ ಮತ್ತು ಮನಸ್ತಾಪಗಳ ಮಾಡುವ ಸಂಘದ ಅಭಿವೃದ್ಧಿ ಕುಂಠಿತವಾಗಬಾರದು ಎಂದರು.

ಸಹಕಾರ ಸಂಘದ ಅಭಿವೃದ್ಧಿಗೆ ಶಿಕ್ಷಣ ಇಲಾಖೆ ಉತ್ತೇಜನ ನೀಡಲು ಸದಾ ಸಿದ್ಧವಾಗಿದೆ ಎಂದ ಅವರು, ಸಂಘ ಉತ್ತಮವಾಗಿ ಅಭಿವೃದ್ಧಿ ಹೊಂದಿದ್ದು, ಜೊತೆಗೆ ಸಂಘಟನೆ ಬಹಳ ಚೆನ್ನಾಗಿ ಮಾಡಿರುವುದರಿಂದ ನಿಮ್ಮನ್ನು ಅಭಿನಂದಿಸುತ್ತೇನೆ ಎಂದರು.

ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್ ಮಾತನಾಡಿ, ಸರ್ಕಾರಿ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದ್ದು, ಈ ಸಂಘಕ್ಕೆ ನಾನು 10 ಲಕ್ಷ ಠೇವಣಿ ಇಡುವ ಜೊತೆಗೆ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತ ಶಿಕ್ಷಕರಿಗೆ ಅಭಿನಂದನೆ ಸಲ್ಲಿಸುವ ಜೊತೆಗೆ ನಿಮ್ಮ ಜೊತೆ ಸದಾ ನಾನಿರುತ್ತೇನೆ ಎಂದು ಭರವಸೆ ನೀಡಿದರು.

ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಶಿಕ್ಷಕರಿಂದ ಕಲಿಯಬೇಕಾಗಿದೆ. ಸಂಘ ಅಭಿವೃದ್ಧಿ ಹೊಂದಲು ಒಗ್ಗಟ್ಟು ಮುಖ್ಯವಾಗಿದ್ದು, ಎಲ್ಲರೂ ಒಂದಾಗಿ ಸಂಘವನ್ನು ಮುನ್ನಡೆಸಲು ಸಹಕಾರ ನೀಡುವ ಜೊತೆಗೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಜಾತ್ಯಾತೀತವಾಗಿ ಸಮಾನ ನಮಸ್ಕಾರ ಸಂಘವನ್ನು ಸದೃಢವಾಗಿ ಕಟ್ಟಲು ನನ್ನ ಸಹಕಾರ ಸದಾ ನಿಮ್ಮ ಜೊತೆ ಇರುತ್ತದೆ ಎಂದರು.

ಸಂಘದ ಅಧ್ಯಕ್ಷ ತೊಳಸಿ ರಾಮನಾಯಕ ಮಾತನಾಡಿ, ಸಹಕಾರ ಇಲಾಖೆ ಮತ್ತು ಆರ್‌ಬಿಐ ನಿರ್ದೇಶನದಂತೆ ಸಂಘದ ಆದಾಯದಲ್ಲಿ ಪ್ರತಿಯೊಬ್ಬ ಸದಸ್ಯನಿಗೂ ಶೇ.5ರಂತೆ ಡಿವಿಡೆಂಟ್ ನೀಡಲಿದ್ದು, ಹೆಚ್ಚುವರಿ ಷೇರು ಹಣಕ್ಕೆ ವಾರ್ಷಿಕ ಶೇ.4ರಂತೆ ಆದಾಯದ ಹಣವನ್ನು ಆ ಷೇರುದಾರರ ಖಾತೆಗೆ ವರ್ಗಾಯಿಸಲಾಗುವುದು ಎಂದರು.

ಪ್ರಸಕ್ತ ಸಾಲಿನಲ್ಲಿ ಸಂಘ 2.5 ಲಕ್ಷ ನಿವ್ವಳ ಆದಾಯ ಗಳಿಸಿದ್ದು, ಸಂಘದಲ್ಲಿ ಒಟ್ಟು 28 ಲಕ್ಷಕ್ಕೂ ಹೆಚ್ಚು ಹಣವಿದೆ. ಸುಮಾರು 80 ಲಕ್ಷಕ್ಕೂ ಹೆಚ್ಚು ವಹಿವಾಟು ನಡೆಸಿ ಸಂಘ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ಇದಕ್ಕೆ ಸಹಕಾರ ನೀಡಿದ ಎಲ್ಲಾ ಆಡಳಿತ ಮಂಡಳಿ ನಿರ್ದೇಶಕರಿಗೆ, ಸದಸ್ಯರಿಗೂ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಈ ವೇಳೆ ನಿವೃತ್ತ ನೌಕರರು, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳು, ತಾಲೂಕಿನಲ್ಲಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಬಿಆರ್‌ಸಿ ವೆಂಕಟೇಶ್, ಉಪಾಧ್ಯಕ್ಷ ಕುಮಾರ್, ನಿರ್ದೇಶಕರಾದ ಶಂಕರೇಗೌಡ, ನಾಗೇಶ್, ದೇವೇಂದ್ರ, ಕಾಂತರಾಜ್, ಮಂಜೇಗೌಡ, ಸ್ವಾಮಿ, ಮನು, ಕುಮಾರ, ರುಕ್ಮಿಣಿ, ರಾಧಾ ಇನ್ನಿತರರಿದ್ದರು.

ಇಂದು ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಜಯಂತಿ



ಸರಗೂರು, ಸೆ.19– ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ಸಹಯೋಗದಲ್ಲಿ ಸೆ.20 ರಂದು ಪಟ್ಟಣದಲ್ಲಿ ಡಾ.ಶ್ರೀಶಿವರಾತ್ರಿ ರಾಜೇಂದ್ರ ಶ್ರೀಗಳ ಜಯಂತಿ ನಡೆಯಲಿದೆ.

ಪಟ್ಟಣದ ಜೆಎಸ್‌ಎಸ್ ಶಾಲಾವರಣದಲ್ಲಿ ಬೆಳಗ್ಗೆ 8 ಗಂಟೆಗೆ ಶ್ರೀಗಳ ಪುತ್ಥಳಿಯನ್ನು ಬೆಳ್ಳಿರಥದಲ್ಲಿರಿಸಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು. ಅಲ್ಲದೇ ಬೆಳಗ್ಗೆ 11 ಗಂಟೆಗೆ ಶ್ರೀಶಿವರಾತ್ರೀಶ್ವರ ಶಿವಾನುಭವ ಮಂದಿರದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ. ಹಂಚೀಪುರ ಪಟ್ಟದ ಮಠದ ಚನ್ನಬಸವ ಸ್ವಾಮೀಜಿ, ದಡದಹಳ್ಳಿ ಪಟ್ಟದ ಮಠದ ಷಡಕ್ಷರ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಜೆಎಸ್‌ಎಸ್ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಸುಧಾ, ಜಿ.ಎಲ್.ತ್ರಿಪುರಾಂತಕ, ಮಹಾಸಭಾ ತಾಲೂಕು ಅಧ್ಯಕ್ಷ ನಟರಾಜು, ಮಾಜಿ ಅಧ್ಯಕ್ಷ ಡಿ.ಜಿ.ಶಿವರಾಜು, ಟೌನ್ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಟ ಡಾ.ವಿಷ್ಣುವರ್ಧನ್ ಹುಟ್ಟುಹಬ್ಬ



ನಂಜನಗೂಡು ತಾಲೂಕಿನ ಕೆಂಪಿಸಿದ್ದನಹುಂಡಿಯಲ್ಲಿ ನಟ ಡಾ.ವಿಷ್ಣುವರ್ಧನ್ ಅವರ ಹುಟ್ಟು ಹಬ್ಬವನ್ನು ಅನ್ನ ಅಂತರ್ಪಣೆ ಮಾಡುವ ಮೂಲಕ ಆಚರಿಸಲಾಯಿತು. ಈ ವೇಳೆ ಡೈರಿ ಮಹೇಶ್, ಧರ್ಮ, ಅಭಿಮಾನಿಗಳಾದ ನಂಜಯ್ಯ, ಪಿ.ಕುಮಾರ, ಸಿದ್ದರಾಜು, ಕೆಂಪಣ್ಣ ಸೇರಿದಂತೆ ಇನ್ನಿತರರಿದ್ದರು.

ಹನಗೋಡಲ್ಲಿ ಸ್ವಚ್ಛತೆ ಕಡೆಗೆ ದಿಟ್ಟ ಹೆಜ್ಜೆ ಅಭಿಯಾನ



ಹನಗೋಡಲ್ಲಿ ಸ್ವಚ್ಛತೆ ಕಡೆಗೆ ದಿಟ್ಟ ಹೆಜ್ಜೆ ಅಭಿಯಾನ ನಡೆಯಿತು.

ಹನಗೋಡು, ಸೆ.19– ಮೈಸೂರು ಜಿಪಂ, ಹುಣಸೂರು ತಾಪಂ, ಹನಗೋಡು ಗ್ರಾಪಂ ಹಾಗೂ ಸರ್ಕಾರಿ ಪ್ರೌಢಶಾಲೆ ಹನಗೋಡು, ಔಟ್ ರೀಚ್ ಸಂಸ್ಥೆ ಸಂಸ್ಥೆ ಸಹಯೋಗದಲ್ಲಿ ಗ್ರಾಮದಲ್ಲಿ ಸ್ವಚ್ಛತೆ ಕಡೆಗೆ ದಿಟ್ಟ ಹೆಜ್ಜೆ ಅಭಿಯಾನ ನಡೆಯಿತು.

ಸ್ವಭಾವ ಸ್ವಚ್ಛತೆ, ಸಂಸ್ಕಾರ ಸ್ವಚ್ಛತೆ, ಸ್ವಚ್ಛತೆಯೇ ಸೇವೆ ಎಂಬ ಪರಿಕಲ್ಪನೆಯೊಂದಿಗೆ ಅ.2ರ ಗಾಂಧಿ ಜಯಂತಿವರೆಗೆ ವಿವಿಧ ಕಾರ್ಯಕ್ರಮಗಳ ಮೂಲಕ ಜನರಲ್ಲಿ, ವಿದ್ಯಾರ್ಥಿಗಳಲ್ಲಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವ ಜೊತೆಗೆ ಸ್ವಚ್ಛ ಭಾರತ ಅಭಿಯಾನ ಆಚರಿಸಲಾಗುತ್ತಿದೆ.

ಇದೇ ವೇಳೆ ಶಾಲಾವರಣದಲ್ಲಿ ಮಕ್ಕಳಿಗೆ ಸ್ವಚ್ಛತೆ ಬಗ್ಗೆ ಪ್ರತಿಜ್ಞಾವಿಧಿ ಭೋದಿಸಲಾಯಿತು. ಅಲ್ಲದೇ ಮಾನವ ಸರಪಳಿ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು. ತ್ಯಾಜ್ಯದಿಂದ ಕಲೆ ಮತ್ತು ಚಿತ್ರಕಲೆ ಸ್ಪರ್ಧೆಯನ್ನು ವಿದ್ಯಾರ್ಥಿಗಳಿಗೆ ನಡೆಸಲಾಯಿತು.

ಸೈಕಲ್ ಜಾಥಾ ಮೂಲಕ ತಾಯಿ ಹೆಸರಿನಲ್ಲಿ ಒಂದು ಸಸಿ ನೆಡುವ ಕಾರ್ಯಕ್ರಮ ಹಾಗೂ ವಿಶೇಷ ಗ್ರಾಮ ಸಭೆ ಆಯೋಜಿಸಿ ಸ್ವಭಾವ ಸ್ವಚ್ಛತೆ, ಸಂಸ್ಕಾರ ಸ್ವಚ್ಛತೆ, ವೈಯಕ್ತಿಕ ಸ್ವಚ್ಛತೆಗೆ ಆದ್ಯತೆ ನೀಡುವಂತೆ ತಿಳಿಸಲಾಯಿತು. ಪ್ರಮುಖ ಬೀದಿಗಳಲ್ಲಿ ಜಾಥ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಲಾಯಿತು.

ಗ್ರಾಪಂ ಅಧ್ಯಕ್ಷ ಚೆನ್ನಯ್ಯ, ಉಪಪ್ರಾಚಾರ್ಯ ಸಂತೋಷ್ ಕುಮಾರ, ಸದಸ್ಯ ಈಶ್ವರ, ಶಿವಣ್ಣ, ಛಾಯಾ, ಸಂತೋಷ್, ಮಹದೇವನಾಯಕ, ರತ್ನ, ಶ್ರೀಧರ್, ಪಿಡಿಒ ಅನಿತಾ, ಔಟ್‌ರಿಚ್ ಸಂಸ್ಥೆ ಜಗದೀಶ್, ಮನೋಜ್, ಆನಂದ್, ಶಿಕ್ಷಕರಾದ ವೀರಣ್ಣ ಕರಡಿ, ಭಾನುಮತಿ, ಜಯಂತಿ, ಪ್ರಸನ್ನ, ರಘುಪತಿ, ಸೌಮ್ಯ, ಜಯಲಕ್ಷ್ಮಿ, ಅರ್ಚನಾ, ನಿಹಾರಿಕಾ ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸೆ.22, ವಿಶ್ವಕರ್ಮ ಯುವ ಬ್ರಿಗೇಡ್‌ನಿಂದ ಪ್ರತಿಭಾ ಪುರಸ್ಕಾರ



ಸುದ್ದಿಗೋಷ್ಠಿಯಲ್ಲಿ ಬಿ.ನಿಂಗರಾಜ್ ಆಚಾರ್ ಮಾತನಾಡಿದರು.

ಹೆಚ್.ಡಿ.ಕೋಟೆ, ಸೆ.19– ತಾಲೂಕು ವಿಶ್ವಕರ್ಮ ಯುವ ಬ್ರಿಗೇಡ್ ವತಿಯಿಂದ ಸೆ.22 ರಂದು ಬೆಳಗ್ಗೆ ನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬ್ರಿಗೇಡ್‌ನ ಅಧ್ಯಕ್ಷ ಬಿ.ನಿಂಗರಾಜ್ ಆಚಾರ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಕಾರ್ಯಕ್ರಮದಲ್ಲಿ ಎಸ್‌ಎಸ್ ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿಶ್ವಕರ್ಮ ಸಮುದಾಯದ ಸುಮಾರು 90ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಅಭಿನಂದಿಸಲಾಗುವುದು ಎಂದರು.

ಕಾರ್ಯಕ್ರಮವನ್ನು ಶಾಸಕ ಅನಿಲ್ ಉದ್ಘಾಟಿಸಲಿದ್ದು, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಜಂಟಿ ಆಯುಕ್ತ ಮಾಳಿಗಾಚಾರ್ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ. ಖಾಸಗಿ ವಾಹಿನಿ ನಿರೂಪಕ ಅರುಣ್ ಸಿ. ಬಡಿಗೇರ್ ಮುಖ್ಯ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಯಾಗಿ ನಿವೃತ್ತ ಚುನಾವಣಾ ಆಯುಕ್ತ ಪಿ.ಎನ್. ಶ್ರೀನಿವಾಸಚಾರಿ, ಮಾಜಿ ಎಂಎಲ್‌ಸಿ ಕೆ.ಪಿ.ನಂಜುಂಡಿ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಮಹಾಪೌರ ರಾಮಪ್ಪ ಕೃಷ್ಣಪ್ಪ ಬಡಿಗೇರ್, ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಅಧ್ಯಕ್ಷ ಕಿರಣ್, ಕಾರ್ಯದರ್ಶಿ ವಿನೋದ್ ಕುಮಾರ್, ಖಜಾಂಚಿ ವಸಂತ್‌ಕುಮಾರ್, ನಿರ್ದೇಶಕರಾದ ಶೇಖರ್, ಜನಾರ್ಧನ್ ಇದ್ದರು.

ಮೈಮುಲ್ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಿ

ವಿಸ್ತರಣಾಧಿಕಾರಿ ಶ್ರೀಕಾಂತ್



ಈಚೂರು ಡೈರಿ ವಾರ್ಷಿಕ ಮಹಾಸಭೆಯಲ್ಲಿ ಹೆಚ್ಚು ಹಾಲು ಸರಬರಾಜು ಮಾಡಿದ ಉತ್ಪಾದಕರಿಗೆ ಬಹುಮಾನ ನೀಡಿ ಗೌರವಿಸಲಾಯಿತು.

ಬೆಟ್ಟದಪುರ, ಸೆ.19– ಮೈಸೂರು ಜಿಲ್ಲಾ ಹಾಲು ಒಕ್ಕೂಟದಿಂದ ಸಬ್ಸಿಡಿ ದರದಲ್ಲಿ ಮೇವು ಕತ್ತರಿಸುವ ಯಂತ್ರ, ಹಾಲು ಕರೆಯುವ ಯಂತ್ರ, ರಬ್ಬರ್ ಮ್ಯಾಟ್ ಸೇರಿದಂತೆ ಅನೇಕ ಸೌಲಭ್ಯಗಳು ಸಿಗುತ್ತಿದ್ದು, ಅವುಗಳನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮೈಮುಲ್ ವಿಸ್ತರಣಾಧಿಕಾರಿ ಶ್ರೀಕಾಂತ್ ತಿಳಿಸಿದರು.

ಇಲ್ಲಿಗೆ ಸಮೀಪದ ಈಚೂರು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಹಾಲು ಉತ್ಪಾದಕರು ಒಕ್ಕೂಟ ನೀಡುವ ಸೌಲಭ್ಯಗಳನ್ನು ಸರಿಯಾದ ರೀತಿ ಬಳಸಿಕೊಂಡು ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಹಾಗೂ ಗುಣಮಟ್ಟದ ಹಾಲು ಸರಬರಾಜು ಮಾಡಬೇಕು ಎಂದರು.

ಸಂಘದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಬಿ.ಎ.ಜ್ಯೋತಿ ಮಾತನಾಡಿ, ಈ ಬಾರಿ ಸಂಘ 6 ಲಕ್ಷ ನಿವ್ವಳ ಆದಾಯ ಗಳಿಸಿದೆ ಎಂದರು. ಕಾರ್ಯಕ್ರಮದಲ್ಲಿ ಹೆಚ್ಚು ಹಾಲು ಸರಬರಾಜು ಮಾಡಿದ ಉತ್ಪಾದಕರಿಗೆ ಬಹುಮಾನ ನೀಡಿ ಗೌರವಿಸಲಾಯಿತು.

ಈ ವೇಳೆ ಗ್ರಾಮದ ಮಹಿಳೆಯರಾದ ಈರಮ್ಮ, ಹೊನ್ನಮ್ಮ, ರತ್ನಮ್ಮ, ಸೋಮಣ್ಣ, ಚಂದ್ರಮ್ಮ, ರಾಧಮ್ಮ, ಜಯಮ್ಮ, ಕಮಲಮ್ಮ, ಸಣ್ಣೇಗೌಡ, ರಾಜೇಗೌಡ, ಪಾಪಣ್ಣ, ಮಹದೇವಪ್ಪ, ಕಾಳೇಗೌಡ, ಚೇತನ್ ಕುಮಾರ್, ಸಿದ್ದಲಿಂಗಣ್ಣ, ಕಾಂತರಾಜು, ರಘು, ಮನೋಜ್, ಜ್ಯೋತಿ, ತಾಯಮ್ಮ, ಹಾಲು ಪರೀಕ್ಷಕ ಆರ್.ನಾರಾಯಣಸ್ವಾಮಿ, ಸಹಾಯಕ ಲಕ್ಷ್ಮಮ್ಮ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

ಚಿಕ್ಕವಡ್ಡರಗುಡಿ ಪಿಎಸಿಎಸ್‌ಗೆ 8.48 ಲಕ್ಷ ಲಾಭ

ಕೆ.ಆರ್.ನಗರ, ಸೆ.19– ಪ್ರಸಕ್ತ ಸಾಲಿನಲ್ಲಿ ಸಹಕಾರ ಸಂಘ 8.48 ಲಕ್ಷ ಲಾಭ ಗಳಿಸಿದೆ ಎಂದು ಚಿಕ್ಕವಡ್ಡರಗುಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರಂಗೇಗೌಡ ತಿಳಿಸಿದರು.

ಸಂಘದ ಆವರಣದಲ್ಲಿ ಗುರುವಾರ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘದ ವ್ಯಾಪ್ತಿಗೆ ಕಂಚಿನಕೆರೆ, ಬೊಮ್ಮೇನಹಳ್ಳಿ, ಗಂಧನಹಳ್ಳಿ, ಗಂಧನಹಳ್ಳಿ ಕೊಪ್ಪಲು, ಕಾಕನಹಳ್ಳಿ ಮತ್ತು ಚಿಕ್ಕವಡ್ಡರ ಗುಡಿ ಗ್ರಾಮಗಳು ಒಳಪಡಲಿದ್ದು, ಸರ್ಕಾರದಿಂದ ಸಿಗುವ ಎಲ್ಲಾ ಸವಲತ್ತುಗಳನ್ನು ಸದಸ್ಯರಿಗೆ ಸಕಾಲದಲ್ಲಿ ತಲುಪಿಸಲಾಗುತ್ತಿದೆ. ಸಂಘದಲ್ಲಿ 1716 ಸದಸ್ಯರಿದ್ದು, ಆದ್ಯತೆ ಮೇರೆಗೆ ಎಲ್ಲರಿಗೂ ಸಾಲ ನೀಡಲಾಗುತ್ತಿದೆ. ವಸೂಲಾತಿಯಲ್ಲಿಯೂ ಉತ್ತಮ ಸಾಧನೆ ಮಾಡುತ್ತಿದ್ದೇವೆ ಎಂದು ಮಾಹಿತಿ ನೀಡಿದರು. ಸಂಘದ ವ್ಯಾಪ್ತಿಗೆ ಒಳಪಡುವ ಗ್ರಾಮದ ರೈತರು ಸದಸ್ಯರಾಗಿ ಸರ್ಕಾರದಿಂದ ದೊರೆಯುವ ಬಡ್ಡಿರಹಿತ ಸಾಲ ಮತ್ತು ಇತರ ಅನುಕೂಲಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಸದಸ್ಯರಾದ ಕೆ.ಹೆಚ್.ಬುಡೀಗೌಡ, ಜಿ.ಎನ್.ರಾಜೇಗೌಡ, ಬಸವರಾಜು, ಜಗದೀಶ್, ಜಿ.ಆರ್.ಮಹದೇವ್, ಸ್ವಾಮೀಗೌಡ, ಸಿ.ಕೆ.ಧನಪಾಲ್, ಎಸ್.ರಾಮು ಮಾತನಾಡಿ, ಹಲವು ಸಲಹೆ ಮತ್ತು ಮಾರ್ಗದರ್ಶನ ನೀಡಿದರು. ಸಂಘದ ಉಪಾಧ್ಯಕ್ಷ ಮಹದೇವನಾಯಕ ಮಾತನಾಡಿದರು.

ನಿರ್ದೇಶಕರಾದ ಜಿ.ಆರ್.ಕೃಷ್ಣೇಗೌಡ, ನಾಗಮ್ಮ, ಕಾಮಾಕ್ಷಮ್ಮ, ನಾರಾಯಣ, ಕೆಂಪೇಗೌಡ, ಜೆ.ಜೆ.ಮಹದೇವ, ನಿಂಗಾಜೋಗಿ, ರಮೇಶ್‌ಬಾಬು, ವೀರಭದ್ರಸ್ವಾಮಿ, ಪದ್ಮಮ್ಮ, ಬಸವರಾಜು, ಸಿಇಒ ಎಸ್.ಭಾಸ್ಕರ್, ಸಿಬ್ಬಂದಿಗಳಾದ ಕೆ.ಎಂ. ಜಯರಾಮ್, ಕೆ.ವಿ.ನಂದೀಶ್, ಈಶ್ವರಾಚಾರ್ ಸೇರಿದಂತೆ ಸದಸ್ಯರು ಹಾಜರಿದ್ದರು.

ವಾಲಿಬಾಲ್: ರಾಜ್ಯ ಮಟ್ಟಕ್ಕೆ ಆಯ್ಕೆ



ಹುಣಸೂರಿನ ಟ್ಯಾಲೆಂಟ್ ಕಾಲೇಜಿನಲ್ಲಿ ನಡೆದ ಜಿಲ್ಲಾ ಮಟ್ಟದ ಪಿಯು ಕಾಲೇಜುಗಳ ಬಾಲಕಿಯರ ವಾಲಿಬಾಲ್ ಪಂದ್ಯಾವಳಿಯಲ್ಲಿ ಹೆಚ್.ಡಿ.ಕೋಟೆ ತಾಲೂಕಿನ ತುಂಬಸೋಗೆ ಎಂಎಂಕೆ ಕಾಲೇಜು ವಿದ್ಯಾರ್ಥಿನಿಯರು ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದು, ಈ ವೇಳೆ ವಿದ್ಯಾರ್ಥಿನಿಯರು ಹಾಗೂ ಪೋಷಕರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲ ಎಸ್.ಪಿ.ಪ್ರಕಾಶ್, ಸಂಸ್ಥೆ ಅಧ್ಯಕ್ಷ ಕೆ.ಆರ್.ಸತೀಶ್, ನಿರ್ದೇಶಕರಾದ ಎಸ್.ಪಿ.ಪವನ್, ಸಿಡಿಸಿ ಸದಸ್ಯ ಸಕಲೇಶ್, ಮೋಹನ್, ಶ್ರೀನಿವಾಸ್ ಇನ್ನಿತರರಿದ್ದರು.

ನಿವ್ವಳ ಲಾಭದತ್ತ ತಿ.ನರಸೀಪುರ ಟಿಎಪಿಸಿಎಂಎಸ್

ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ಮಾಹಿತಿ



ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ಮಾತನಾಡಿದರು.

ತಿ.ನರಸೀಪುರ, ಸೆ.19– ಸುಮಾರು 80 ಲಕ್ಷ ರೂ. ನಷ್ಟದಲ್ಲಿದ್ದ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘವನ್ನು 12 ವರ್ಷಗಳ ನಿರಂತರ ಶ್ರಮದಿಂದ ನಿವ್ವಳ ಲಾಭದತ್ತ ಕೊಂಡೊಯ್ಯಲಾಗಿದೆ ಎಂದು ಸಂಘದ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ತಿಳಿಸಿದರು.

ಪಟ್ಟಣದ ವ್ಯವಸಾಯೋತ್ಪನ್ನ ಸಹಕಾರ ಸಂಘದ ಆವರಣದಲ್ಲಿ ಗುರುವಾರ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾವು ಅಧಿಕಾರ ವಹಿಸಿಕೊಂಡ ಆರಂಭದಲ್ಲಿ ಸಂಘ 70 ರಿಂದ 80 ಲಕ್ಷ ನಷ್ಟದಲ್ಲಿತ್ತು. ನಂತರದ ದಿನಗಳಲ್ಲಿ ಸರ್ವ ಸದಸ್ಯರ ಸಹಕಾರದೊಂದಿಗೆ ನಷ್ಟದಲ್ಲಿದ್ದ ಸಂಘವನ್ನು ತಹಬದಿಗೆ ತಂದು ಲಾಭದತ್ತ ಕೊಂಡೊಯ್ದಿದ್ದೇನೆ. ಕ್ರೋಢಿಕೃತ ನಷ್ಟ ಸರಿಪಡಿಸಲು 10 ರಿಂದ 12 ವರ್ಷಗಳೇ ಬೇಕಾಯಿತು ಎಂದು ತಿಳಿಸಿದರು.

ಕಳೆದ ಬಾರಿ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಕ್ಕೆ ನಡೆದ ಆಡಳಿತ ಮಂಡಳಿ ಚುನಾವಣೆಗೆ 10,52,000 ರೂ. ವೆಚ್ಚವಾದ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಸಂಘ ಹೆಚ್ಚಿನ ಲಾಭ ಗಳಿಸಲು ಸಾಧ್ಯವಾಗಿಲ್ಲ. ಆದರೆ ಮುಂಬರುವ ಆರ್ಥಿಕ ವರ್ಷದಲ್ಲಿ ಹೆಚ್ಚಿನ ಲಾಭ ಗಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಸಹಕಾರ ಸಂಘ ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ 1,10,35,086 ರೂ. ನಿಶ್ಚಿತ ಠೇವಣಿ ಇಟ್ಟಿದೆ. ಚಾಲ್ತಿ ಖಾತೆಯಲ್ಲಿ 26 ಲಕ್ಷ ರೂ. ಇದ್ದು, ಸಂಘದಲ್ಲಿ ಹಾಲಿ 36 ಮಳಿಗೆ, 10 ಗೋದಾಮುಗಳಿದ್ದು ಇವುಗಳನ್ನು ಬಾಡಿಗೆಗೆ ನೀಡಲಾಗಿದೆ ಎಂದರು. ಸಂಘದಿಂದ ಸಾರ್ವಜನಿಕರ ಹಾಗೂ ರೈತರ ಅನುಕೂಲಕ್ಕಾಗಿ ಶವ ಸಾಗಿಸುವ ವಾಹನ ಖರೀದಿ ಮಾಡಲು ನಿರ್ಧರಿಸಲಾಗಿದೆ. ಅಲ್ಲದೇ ಪ್ರಸಕ್ತ ಸಾಲಿನಲ್ಲಿ 3 ಸಾವಿರ ರೂ.ಗಳಿದ್ದ ಮರಣ ನಿಧಿ ಹೆಚ್ಚಿಸಲು ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ನಿರ್ಧಾರಕ್ಕೆ ಬರಲಾಗುತ್ತದೆ ಎಂದರು.


ಸಂಘದ ಕಾರ್ಯದರ್ಶಿ ಜಿ.ರಘುನಂದನ್ ಸಂಘದ ವಾರ್ಷಿಕ ವರದಿ ಮಂಡಿಸಿ ಸಂಘ ಪ್ರಸಕ್ತ ಸಾಲಿನಲ್ಲಿ ಎಲ್ಲಾ ಶಾಖೆಗಳಿಂದ ಒಟ್ಟು ಖರ್ಚು ವೆಚ್ಚ ಕಳೆದು 5.21 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ನಿರ್ದೇಶಕರಾದ ಟಿ.ವಾಸುದೇವ, ಬಿ.ಎಸ್. ಮಹೇಶ್, ವೈ.ಎನ್.ಶಂಕರೇಗೌಡ, ಎಂ.ಎಸ್. ಬಸವರಾಜು, ಎಂ.ಎಂ. ಜಯಣ್ಣ, ವೈ.ಎಸ್. ರಾಮಸ್ವಾಮಿ, ಎಂ.ಕೆ. ಮಹೇಶ್, ಕೆ.ಎಂ. ಸುನೀಲ್, ಡಿ. ಕೋಮಲ ಕುಮಾರಸ್ವಾಮಿ, ಎಸ್. ನಿರ್ಮಲ ರಂಗಸ್ವಾಮಿ, ಸರ್ಕಾರದ ನಾಮಿನಿ ಸದಸ್ಯ ಶಿವಲಿಂಗೇಗೌಡ, ಮುಖಂಡರಾದ ಫಣೀಶ್ ಕುಮಾರ್, ಬೆ.ಗು. ಶಿವಸ್ವಾಮಿ, ಅಂಗಡಿ ಮೋಹನ್, ತಿರುಮಕೂಡಲು ಲಕ್ಷ್ಮಣ, ಕುಮಾರ ಸ್ವಾಮಿ, ಕಾವೇರಿಪುರ ಸತೀಶ್, ಎಲ್. ಮಹದೇವಪ್ಪ ಸಿ.ಮಹದೇವು, ಅತ್ತಹಳ್ಳಿ ರಾಜು, ಡೈರಿ ಅಧ್ಯಕ್ಷ ಡಿ.ಎಲ್.ಮಹ ದೇವಪ್ಪ, ಹಣ್ಣಿನ ನಾಗರಾಜು, ಟಿ.ಎಸ್. ಸ್ವಾಮಿ, ಸಹಕಾರ ಸಂಘದ ಪ್ರಥಮ ದರ್ಜೆ ಸಹಾಯಕಿ ಟಿ.ಜಿ.ಸುಮಿತ್ರಾ, ಎನ್. ಮಹೇಶ್, ಡಿ.ಪಿ.ಸಂದೇಶ್, ಶ್ರೀಧರ ಸ್ವಾಮಿ ಸೇರಿದಂತೆ ಷೇರುದಾರರು ಹಾಜರಿದ್ದರು.

> "ಮುಂಬರುವ ಆರ್ಥಿಕ ವರ್ಷದಲ್ಲಿ ಸಂಘದ ಪೂರ್ವ ಭಾಗದಲ್ಲಿ ಮಳಿಗೆಗಳನ್ನು ನಿರ್ಮಿಸುವ ಉದ್ದೇಶ ಹೊಂದಲಾಗಿದೆ. ಇದರಿಂದ ಸಂಘದ ಆದಾಯ ಹೆಚ್ಚಾಗಿ ರೈತರಿಗೆ ಅನುಕೂಲ ಕಲ್ಪಿಸಲು ಸಾಧ್ಯವಾಗುತ್ತದೆ. ಈ ಹಿಂದೆ ಇದೇ ಜಾಗದಲ್ಲಿ ಪೆಟ್ರೋಲ್ ಬಂಕ್ ನಿರ್ಮಿಸಲು ಉದ್ದೇಶಿಸಲಾಗಿತ್ತಾದರೂ, ಈಗ ಮಳಿಗೆ ನಿರ್ಮಾಣ ಮಾಡುವ ಅಭಿಪ್ರಾಯಕ್ಕೆ ಆಡಳಿತ ಮಂಡಳಿ ಬಂದಿದೆ.
>
> – ಟಿ.ಪಿ.ಸುಬ್ರಹ್ಮಣ್ಯ, ಟಿಎಪಿಸಿಎಂಎಸ್ ಅಧ್ಯಕ್ಷ.

ಸಾಹಿತ್ಯೇತರ ವ್ಯಕ್ತಿ ಮಂಡ್ಯ ಮಹಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಸುವ ಹೇಳಿಕೆಗೆ ವ್ಯಾಪಕ ಖಂಡನೆ

ಹಂತ ಹಂತವಾಗಿ ಪ್ರತಿಭಟನೆ ಎಚ್ಚರಿಕೆ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಗುರುವಾರ ಹಿರಿಯ ಸಾಹಿತಿ ಸಿಪಿಕೆ ನೇತೃತ್ವದಲ್ಲಿ ಕನ್ನಡ ಪರ ಸಂಘಟನೆ ಪ್ರತಿನಿಧಿಗಳ ಸಭೆ ನಡೆಯಿತು

ಮೈಸೂರು, ಸೆ.19(ಎಸ್‌ಬಿಡಿ)– ಮಂಡ್ಯದಲ್ಲಿ ನಡೆಯಲಿರುವ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಸಾಹಿತ್ಯೇತರ ವ್ಯಕ್ತಿಯನ್ನೂ ಆಯ್ಕೆ ಮಾಡುವುದು ಬೇಡ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಆಗ್ರಹಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಗುರುವಾರ ಸಂಜೆ ನಡೆದ ಕನ್ನಡ ಪರ ಸಂಘಟನೆಗಳ ತುರ್ತು ಸಭೆಯಲ್ಲಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಅವರು ಸಾಹಿತ್ಯೇತರ ವ್ಯಕ್ತಿಯನ್ನು ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರನ್ನಾಗಿ ಮಾಡುವ ಹೇಳಿಕೆ ನೀಡಿರುವುದು ಹಾಸ್ಯಾಸ್ಪದವಾಗಿದೆ ಯಾವುದೇ ಕಾರಣಕ್ಕೂ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದವರೇ ಅಧ್ಯಕ್ಷರಾಗಬೇಕು ಎಂದರು.

ಕನ್ನಡ ಸಮಾವೇಶ ಅಥವಾ ಕನ್ನಡ ಸಮ್ಮೇಳನದಂತಹ ಸಮಾರಂಭಗಳಿಗೆ ಯಾವುದೇ ಕ್ಷೇತ್ರದವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಳ್ಳಲಿ. ಆದರೆ ಕನ್ನಡ ಸಾಹಿತ್ಯ ಸಮ್ಮೇಳನಕ್ಕೂ ಈ ರೀತಿಯ ಚಿಂತನೆ ವ್ಯಕ್ತಪಡಿಸಿರುವುದು ಮೂರ್ಖತನವಾಗುತ್ತದೆ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಸಾಹಿತಿಗಳನ್ನು ಆಯ್ಕೆ ಮಾಡದಿದ್ದರೆ ಇನ್ಯಾವ ಪುರುಷಾರ್ಥಕ್ಕೆ ಸಮ್ಮೇಳನ ನಡೆಸಬೇಕು. ಅದಕ್ಕಾಗಿ ಕೋಟ್ಯಾಂತರ ರೂ. ಸರ್ಕಾರದ ಹಣವನ್ನು ಏಕೆ ವ್ಯಯಿಸಬೇಕು ಎಂದು ಪ್ರಶ್ನಿಸಿದರು.

ಕನ್ನಡ ಕಾವಲು ಪಡೆ ಅಧ್ಯಕ್ಷ ಮೋಹನ್ ಕುಮಾರ ಗೌಡ ಮಾತನಾಡಿ, ಮಹೇಶ್ ಜೋಶಿ ಅವರ ಹೇಳಿಕೆ ಕೇಳಿ ಆಶ್ಚರ್ಯ ಹಾಗೂ ಆಘಾತವಾಯಿತು. ನೆಲ–ಜಲ, ಭಾಷೆಗೆ ಎದುರಾಗಿರುವ ಆಪತ್ತುಗಳಿಂದ ಕನ್ನಡಿಗರು ಚೇತರಿಸಿಕೊಳ್ಳುವುದೇ ಕಷ್ಟವಾಗಿರುವ ಸಂದರ್ಭದಲ್ಲಿ ಕನ್ನಡ ಸಾಹಿತ್ಯವನ್ನು ರಕ್ಷಿಸಿ, ಪೋಷಿಸಬೇಕಾದ ಪರಿಷತ್ತಿನ ರಾಜ್ಯಾಧ್ಯಕ್ಷರು ಈ ರೀತಿ ಮಾತಾಡುತ್ತಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕುವೆಂಪು ವಿಶ್ವ ಮಾನವ ವಿದ್ಯಾರ್ಥಿ ಯುವ ವೇದಿಕೆ ಅಧ್ಯಕ್ಷ ಎಂ.ಜೆ.ಸುರೇಶ ಗೌಡ ಮಾತನಾಡಿ, ಕನ್ನಡದಲ್ಲಿ ಸಾಹಿತಿಗಳೇ ಇಲ್ಲ. ಅದಕ್ಕಾಗಿ ಬೇರೆ ಕ್ಷೇತ್ರದವರನ್ನು ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರನ್ನಾಗಿ ಮಾಡಲಾಗುತ್ತಿದೆ ಎನ್ನುವಂತೆ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷರು ಹೇಳಿಕೆ ನೀಡಿದ್ದಾರೆ. ಇದು 8 ಜ್ಞಾನಪೀಠ ಪ್ರಶಸ್ತಿ ಮುಡಿಗೇರಿಸಿಕೊಂಡಿರುವ ಕನ್ನಡ ಸಾಹಿತ್ಯ ಸರಸ್ವತಿಗೇ ಮಾಡಿದ ಅವಮಾನ ಎಂದರು.


ಮಂಡ್ಯದವರನ್ನೇ ಆಯ್ಕೆ ಮಾಡಿ: ಮೈಸೂರು ಪತ್ರಿಕಾ ವಿತರಕರ ಸಂಘದ ಪ್ರಧಾನ ಕಾರ್ಯದರ್ಶಿ ರವಿಕುಮಾರ್, ಸಾಹಿತ್ಯೇತರ ವ್ಯಕ್ತಿಯನ್ನು ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಮಾಡುವ ನಿರ್ಧಾರ ಕೈ ಬಿಟ್ಟು, ಮಂಡ್ಯದವರೇ ಆದ ಕರ್ನಾಟಕ ಸಂಘದ ಡಾ.ಜಯಪ್ರಕಾಶ್ ಗೌಡ, ಸಾಹಿತಿ ರಾಗೌ ಅಥವಾ ಮಂಡ್ಯ ಮೂಲದ ಕವಯತ್ರಿ ಡಾ.ಲತಾ ರಾಜಶೇಖರ್ ಅವರಂತಹ ಸಾಹಿತಿಗಳನ್ನು ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರನ್ನಾಗಿ ಮಾಡಬೇಕು ಎಂದು ಆಗ್ರಹಿಸಿದರು.

ರಾಜಕಾರಣ ಬೇಡ: ಲೇಖಕ ಎಸ್. ಪ್ರಕಾಶ್ ಬಾಬು ಮಾತನಾಡಿ, ರಾಜಕಾರಣ ಪ್ರವೇಶಿಸಿ ಕನ್ನಡ ಸಾಹಿತ್ಯ ಕ್ಷೇತ್ರವನ್ನೇ ಹಾಳು ಮಾಡುವ ಕೆಟ್ಟ ವಾತಾವರಣ ನಿರ್ಮಾಣವಾಗಿದೆ ಇದರ ದುಷ್ಪರಿಣಾಮದಿಂದಾಗಿಯೇ ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಲು ಈಗಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಮುಂದಾಗಿದ್ದಾರೆ. ಇದರ ವಿರುದ್ಧ ಕನ್ನಡಿಗರೆಲ್ಲ ಒಗ್ಗಟ್ಟಾಗಿ ಪ್ರತಿಭಟಿಸಬೇಕೆಂದು ಮನವಿ ಮಾಡಿದರು.

ಕಸಾಪ ಮುಂದೆ ಪ್ರತಿಭಟನೆಗೆ ನಿರ್ಧಾರ

ಮಂಡ್ಯ ಸಾಹಿತ್ಯ ಸಮ್ಮೇಳನಕ್ಕೆ ಸಾಹಿತ್ಯೇತರ ವ್ಯಕ್ತಿಗಳನ್ನು ಅಧ್ಯಕ್ಷರನ್ನಾಗಿ ಆಯ್ಕೆ ಚಿಂತನೆಯನ್ನು ಕೈಬಿಡದಿದ್ದರೆ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಅವರ ವಿರುದ್ಧ ಜಿಲ್ಲಾ ಮಟ್ಟದಲ್ಲಿ ನಂತರ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಕಚೇರಿ ಬಳಿ ಬೃಹತ್ ಪ್ರತಿಭಟನೆ ನಡೆಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ‘40% ಕಮಿಷನ್’ ಆರೋಪ ಮಾಡಿದ್ದ
ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಇನ್ನಿಲ್ಲ



ಬೆಂಗಳೂರು, ಸೆ.19– ಬಿಜೆಪಿ ಸರ್ಕಾರದ ಆಡಳಿತಾವಧಿಯಲ್ಲಿ 40 ಪರ್ಸೆಂಟ್ ಕಮಿಷನ್ ಆರೋಪ ಮಾಡಿ, ದೊಡ್ಡ ಮಟ್ಟದಲ್ಲಿ ಸುದ್ದಿಯಾಗಿದ್ದ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಇಂದು ನಿಧನರಾಗಿದ್ದಾರೆ.

ಈ ಹಿಂದೆ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ಆಡಳಿತದಲ್ಲಿ 40% ಕಮಿಷನ್ ನಡೆದಿದೆ ಎಂದು ಆರೋಪಿಸಿದ್ದ ಕೆಂಪಣ್ಣ ಅವರು ಇದೊಂದು ಸುದ್ದಿ ಮೂಲಕವೇ ರಾಜ್ಯದ ಜನತೆಯ ಗಮನ ಸೆಳೆದಿದ್ದರು. 84 ವರ್ಷ ವಯಸ್ಸಿನವರಾಗಿದ್ದ ಕೆಂಪಣ್ಣ ಇಂದು ಬೆಂಗಳೂರಿನ ಜ್ಯೋತಿಪುರದಲ್ಲಿರುವ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ಕೊನೆಯುಸಿರೆಳೆದರು.

ಇತ್ತೀಚೆಗಷ್ಟೇ ತೀವ್ರ ಅನಾರೋಗ್ಯದ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಲಾಗಿ, ಚಿಕಿತ್ಸೆ ಪಡೆದು ಮನೆಗೆ ಹಿಂತಿರುಗಿದ್ದ ಕೆಂಪಣ್ಣ, ಇಂದು ಬೆಳಗ್ಗೆ 10 ಗಂಟೆ ಸುಮಾರಿಗೆ ಹೃದಯಾಘಾತಕ್ಕೆ ತುತ್ತಾಗಿ ಇಹಲೋಕ ತ್ಯಜಿಸಿದ್ದಾರೆ.

ಸಿಎಂ ಸಂತಾಪ: ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣನವರ ನಿಧನ ವಾರ್ತೆ ನೋವುಂಟು ಮಾಡಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ದೇಶಾದ್ಯಂತ ಸುದ್ದಿ ಮಾಡಿದ್ದ 40% ಕಮಿಷನ್ ಹಗರಣವನ್ನು ಹೊರತಂದು, ಗುತ್ತಿಗೆ ಕಾಮಗಾರಿಗಳಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರದ ವಿರುದ್ಧ ಸೆಟೆದು ನಿಂತಿದ್ದರು ಎಂದು ಸ್ಮರಿಸಿದ್ದಾರೆ.

ವಿಜೃಂಭಣೆಯಿಂದ ನಡೆದ ಶ್ರೀ ವಿಶ್ವಕರ್ಮ ಮೂರ್ತಿ ಉತ್ಸವ



ಮೈಸೂರು, ಸೆ.19(ಜಿಎ)–ಶ್ರೀ ವಿಶ್ವಕರ್ಮ ಜಯಂತಿ ಮಹೋತ್ಸವದ ಅಂಗವಾಗಿ ಶ್ರೀ ವಿಶ್ವಕರ್ಮ ಜಯಂತಿ ಪೂಜಾ ಮಹೋತ್ಸವ ಸಮಿತಿ ವತಿಯಿಂದ ಭಗವಾನ್ ಶ್ರೀ ವಿಶ್ವಕರ್ಮ ಮೂರ್ತಿ ಉತ್ಸವವನ್ನು ಮೈಸೂರಲ್ಲಿ ವಿಜೃಂಭಣೆಯಿಂದ ನಡೆಸಲಾಯಿತು.

ನಗರದ ಕೆ.ಟಿ.ರಸ್ತೆಯಲ್ಲಿರುವ ಶ್ರೀ ಕಾಳಿಕಾಂಬ ಕಮಠೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ವಿಶ್ವಕರ್ಮ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್, ದೇವಸ್ಥಾನದ ಅಧ್ಯಕ್ಷ ರಾಜಾರಾಂ ನೇತೃತ್ವದಲ್ಲಿ ಹೊರಟು ಮೈಸೂರಿನ ರಾಜ ಬೀದಿಗಳಲ್ಲಿ ಮಂಗಳ ವಾದ್ಯ, ವೀರಗಾಸೆ ಕುಣಿತ, ಡೊಳ್ಳು ಕುಣಿತ, ಪೂಜಾ ಕುಣಿತ ಸೇರಿದಂತೆ ವಿವಿಧ ಕಲಾತಂಡಗಳನ್ನೊಳಗೊಂಡ ಮೆರವಣಿಗೆ ಮೂಲಕ ಕೆ.ಆರ್.ಆಸ್ಪತ್ರೆಯ ರಸ್ತೆಯಲ್ಲಿರುವ ಹಸರಿವಾಣಿ ಚಪ್ಪರದ ಬಳಿ ತಲುಪಿತು. ನಂತರ 2 ಗಂಟೆಗೆ ಶ್ರೀ ವಿಶ್ವಕರ್ಮ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ, ಪ್ರಸಾದ ವಿತರಿಸಲಾಯಿತು.

ಈ ವೇಳೆ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಚಿನ್ನಿ ಸೇರಿದಂತೆ ಸಮುದಾಯದ ಮುಖಂಡರು ಪಾಲ್ಗೊಂಡಿದ್ದರು.

ಇಂದು ಕೇಂದ್ರ ರೇಷ್ಮೆ ಮಂಡಳಿ ಅಮೃತ ಮಹೋತ್ಸವ

ಮೈಸೂರು,ಸೆ.19(ಆರ್‌ಕೆ)–ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ನಾಳೆ(ಸೆ.20) ಕೇಂದ್ರ ರೇಷ್ಮೆ ಮಂಡಳಿಯ ಅಮೃತ ಮಹೋತ್ಸವ ಕಾರ್ಯಕ್ರಮ ನಡೆಯಲಿದೆ. ಶುಕ್ರವಾರ ಬೆಳಿಗ್ಗೆ 10ಗಂಟೆಗೆ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ, ಜವಳಿ ಸಚಿವ ಗಿರಿರಾಜ ಸಿಂಗ್, ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ವಿದೇಶಾಂಗ ಸಚಿವೆ ಪವಿತ್ರಾ ಮಾರ್ಗರಿಟ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ರೇಷ್ಮೆ ಕೃಷಿ ಸಚಿವ ಕೆ.ವೆಂಕಟೇಶ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಟಿಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ ಅವರು ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಎಸ್.ಆರ್.ರವಿಕುಮಾರ್‌ಗೆ ಹುಟ್ಟುಹಬ್ಬದ ಸಂಭ್ರಮ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ನಿರ್ದೇಶಕ ಎಸ್.ಆರ್.ರವಿಕುಮಾರ್ ಅವರ ಹುಟ್ಟುಹಬ್ಬವನ್ನು ಮೈಸೂರಿನ ನಜರ್‌ಬಾದ್‌ನ ಇರ್ವಿನ್ ರಸ್ತೆಯಲ್ಲಿ ಅವರ ಸ್ನೇಹ ಬಳಗದಿಂದ ಕೇಕ್ ಕತ್ತರಿಸಿ, ಸಿಹಿ ವಿತರಿಸಿ, ಆಚರಿಸಲಾಯಿತು. ಇದೇ ವೇಳೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅವರನ್ನು ಸನ್ಮಾನಿಸಲಾಯಿತು. ಸುಹಾಸ್ ಗೌಡ, ಶ್ರೇಯಸ್ ಗೌಡ, ದರ್ಶನ್ ಗೌಡ, ಭರತ್ ಗೌಡ, ಅರುಣ್, ಮನು, ಅರುಣ, ಜಾವೀದ್, ಸತೀಶ್, ಮೊಹಲ್ಲಾದ ಮುಖಂಡರು ಉಪಸ್ಥಿತರಿದ್ದರು.

ಪ್ರಜ್ವಲ್ ರೇವಣ್ಣ ಜಾಮೀನು; ತೀರ್ಪು ಕಾಯ್ದಿರಿಸಿದ ಹೈಕೋರ್ಟ್



ಬೆಂಗಳೂರು, ಸೆ19– ತಮ್ಮ ವಿರುದ್ಧ ಮನೆ ಕೆಲಸದ ಮಹಿಳೆ ಹಾಗೂ ಇತರ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ನಡೆಸಿದ ಆರೋಪ ಸಂಬಂಧದ ಎರಡು ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು ಮತ್ತು ಒಂದು ಪ್ರಕರಣದಲ್ಲಿ ರೆಗ್ಯೂಲರ್ ಜಾಮೀನು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ನೇತೃತ್ವದ ಏಕಸದಸ್ಯ ಪೀಠ ನಡೆಸಿತು. ಕೆಲ ಕಾಲ ವಾದ–ಪ್ರತಿವಾದ ಆಲಿಸಿದ ಬಳಿಕ ನ್ಯಾಯಪೀಠ, ತೀರ್ಪು ಕಾಯ್ದಿರಿಸಿತು.

ಪ್ರಜ್ವಲ್ ಪರ ವಾದ ಮಂಡಿಸಿದ ಹಿರಿಯ ನ್ಯಾಯವಾದಿ ಪ್ರಭುಲಿಂಗ ನಾವಡಗಿ, ಇಡೀ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದರೆ ಸಂತ್ರಸ್ತೆ ಮಹಿಳೆ ಮೊದಲು ಅರ್ಜಿದಾರರ ತಂದೆ (ಎಚ್.ಡಿ.ರೇವಣ್ಣ) ವಿರುದ್ಧ ಅತ್ಯಾಚಾರ ಆರೋಪದಡಿ ದೂರು ದಾಖಲಿಸಿದ್ದರು. ತನಿಖಾಧಿಕಾರಿಗಳ ಮುಂದೆ ಮುಂದುವರಿದ ಹೇಳಿಕೆ ನೀಡುವಾಗ ಅರ್ಜಿದಾರ (ಪ್ರಜ್ವಲ್ ರೇವಣ್ಣ) ವಿರುದ್ಧ ಅತ್ಯಾಚಾರ ಆರೋಪ ಮಾಡಿದ್ದಾರೆ. ಅಷ್ಟಕ್ಕೂ ನಾಲ್ಕು ವರ್ಷಗಳ ಹಿಂದೆ ನಡೆದಿರುವ ಘಟನೆ ಸಂಬಂಧ ಈಗ ದೂರು ನೀಡಲಾಗಿದೆ. ಇಷ್ಟು ವಿಳಂಬ ಏಕೆ ಮಾಡಲಾಗಿದೆ ಎಂದು ಪ್ರಶ್ನಿಸಿದರು.

ಅದು ಒಪ್ಪಿತ ಕ್ರಿಯೆ: ಅದಕ್ಕೆ ನ್ಯಾಯಪೀಠ, ‘ಘಟನೆ ನಡೆದೇ ಇಲ್ಲವೇ’ ಎಂದು ಪ್ರಶ್ನಿಸಿತು. ಆಗ ವಕೀಲರು, ಘಟನೆ ನಡೆದೇ ಇಲ್ಲ ಎಂಬುದು ನಮ್ಮ ವಾದವಲ್ಲ ಘಟನೆ ನಡೆದಿದ್ದರೆ ಅದು ಒಪ್ಪಿತ ಲೈಂಗಿಕ ಕ್ರಿಯೆ ಆಗಿರಲಿದೆ ಎಂದು ವಾದಿಸಿದರು. ಅಲ್ಲದೆ, ದೂರುದಾರ ಮಹಿಳೆ, ಪ್ರಜ್ವಲ್ ರೇವಣ್ಣ ಅವರ ತಾಯಿಯ ಸಂಬಂಧಿಯಾಗಿದ್ದು, ತಂದೆ ಉದ್ಯೋಗ ನೀಡಿದ್ದರು. ಸುಮಾರು ನಾಲ್ಕು ವರ್ಷಗಳ ಕಾಲ ಕೆಲಸದಲ್ಲಿದ್ದು, ಈ ಸಂದರ್ಭದಲ್ಲಿ ಯಾವುದೇ ಆರೋಪ ಮಾಡಿರಲಿಲ್ಲ. ಕೆಲಸದಿಂದ ತೆಗೆದು ಹಾಕಲಾಗಿದೆ ಎಂದು ಆರೋಪಿಸಿ ದೂರು ನೀಡಿದ್ದು, ಇದೀಗ ರೇವಣ್ಣ ವಿರುದ್ಧ ಲೈಂಗಿಕ ಕಿರುಕುಳ ಆರೋಪದಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದರು.

ನಾಲ್ಕು ವರ್ಷಗಳ ಕಾಲ ಸುಮ್ಮನಿದ್ದ ಮಹಿಳೆ ಮತದಾನದ ಮುನ್ನಾ ದಿನ ದೂರು ನೀಡಿ ಬಳಿಕ ಮಾಧ್ಯಮಗಳ ಮುಂದೆ ಹೋಗಿದ್ದಾಗಿ ತಿಳಿಸಿದ್ದಾರೆ. ಆರೋಪಿತ ದೃಶ್ಯಗಳಲ್ಲಿ ಪ್ರಜ್ವಲ್ ರೇವಣ್ಣ ಮುಖವಿಲ್ಲ. ದೂರಿನಲ್ಲಿ ಮೊದಲು ಅರ್ಜಿದಾರರ ತಂದೆ ಹೆಸರನ್ನು ಹೇಳಿ ಬಳಿಕ ಅರ್ಜಿದಾರರನ್ನು ಸೇರಿಸಿದ್ದಾರೆ. ಜತೆಗೆ ವಿಡಿಯೊ ಸಂಬಂಧ ಎಫ್‌ಎಸ್‌ಎಲ್ ನೀಡಿರುವ ವರದಿಗಳು ಆರೋಪಕ್ಕೆ ಹೊಂದಾಣಿಕೆಯಾಗುತ್ತಿಲ್ಲ ಎಂದು ಪೀಠಕ್ಕೆ ವಿವರಿಸಿದರು.

ನಿರಂತರ ಬೆದರಿಕೆ: ವಿಶೇಷ ಸರಕಾರಿ ಅಭಿಯೋಜಕ ಹಿರಿಯ ವಕೀಲ ಪ್ರೊ ರವಿವರ್ಮ ಕುಮಾರ್, ಆರಂಭದಲ್ಲಿ ರೇವಣ್ಣ ವಿರುದ್ಧ ದೂರು ನೀಡಲಾಗಿದೆ. ಬಳಿಕ ಅರ್ಜಿದಾರರ ವಿರುದ್ಧದ ಆರೋಪ ಮಾಡಲಾಗಿದೆ. ಸಂತ್ರಸ್ತೆ ಮಹಿಳೆಗೆ ನಿರಂತರವಾಗಿ ಬೆದರಿಕೆ ಹಾಕಲಾಗುತ್ತಿತ್ತು. ಅದೇ ಕಾರಣದಿಂದ ಪ್ರಕರಣ ಸಂಬಂಧ ಮುಂದುವರಿದ ಹೇಳಿಕೆ ನೀಡುವ ಸಂದರ್ಭದಲ್ಲಿ ಅರ್ಜಿದಾರರ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಅಲ್ಲದೆ ಪ್ರಕರಣ ಸಂಬಂಧ ಎಲ್ಲಿಯಾದರೂ ಮಾತನಾಡಿದಲ್ಲಿ ಸಂತ್ರಸ್ತೆಯ ಗಂಡನ ಕೊಲೆ ಮಾಡುವುದಾಗಿ, ಆಕೆಯ ಮಗಳಿಗೂ ತೊಂದರೆ ನೀಡುವುದಾಗಿ ಬೆದರಿಕೆ ಹಾಕಿದ್ದಾರೆ ಹಾಗಾಗಿ, ದೂರು ನೀಡಲು ವಿಳಂಬವಾಗಿದೆ ಎಂದು ನ್ಯಾಯಪೀಠಕ್ಕೆ ವಿವರಿಸಿದರು. ಅಲ್ಲದೆ, ಅರ್ಜಿದಾರರ ಮಗಳೊಂದಿಗೆ ಆರೋಪಿ ಮಾತನಾಡಿರುವುದು ಸಾಕ್ಷಿಯನ್ನಾಗಿ ಪರಿಗಣಿಸಿದ್ದು, ಅದು ಎಫ್‌ಎಸ್‌ಎಸ್ ವರದಿಯಲ್ಲಿ ದೃಢಪಟ್ಟಿದೆ. ಒಂದು ವಿಡಿಯೊದಲ್ಲಿ ಮಾತ್ರ ಮಹಿಳೆಯ ಚಿತ್ರ ಸ್ಪಷ್ಟವಾಗಿಲ್ಲ ಉಳಿದ ವಿಡಿಯೊಗಳಲ್ಲಿ ಸ್ಪಷ್ಟವಾಗಿದೆ. ಅರ್ಜಿದಾರರು ಚುನಾವಣೆ ನಡೆದ ಮರು ದಿನವೇ ದೇಶವನ್ನು ತೊರೆದಿದ್ದರು. ಅವರು ಬಳಕೆ ಮಾಡುತ್ತಿದ್ದ ಫೋನ್ ಅನ್ನು ವಿಚಾರಣೆ ಮತ್ತು ಎಫ್‌ಎಸ್‌ಎಲ್‌ಗೆ ಕಳುಹಿಸಬೇಕಾಗಿದೆ. ಹಾಗಾಗಿ ಜಾಮೀನು ನೀಡಬಾರದು ಎಂದರು.

ಆ ಫೋನ್ ಪ್ರಜ್ವಲ್ ಅವರದ್ದಲ್ಲ: ಅರ್ಜಿದಾರ ಪ್ರಜ್ವಲ್ ಅವರ ಫೋನ್‌ನಿಂದ ಯಾವುದೇ ವಿಡಿಯೊ ಸಂಗ್ರಹ ಮಾಡಿಲ್ಲ. ಬದಲಾಗಿ ಅವರ ಕಾರು ಚಾಲಕ (ಕಾರ್ತಿಕ್)ರನ್ನು ವಿಚಾರಣೆ ನಡೆಸಿ ಅವರ ಫೋನ್‌ನಲ್ಲಿದ್ದ ಕೆಲವು ಛಾಯಾಚಿತ್ರಗಳು ಮತ್ತು ವಿಡಿಯೊಗಳನ್ನು ಪಡೆದುಕೊಳ್ಳಲಾಗಿದೆ. ಆದರೆ, ಆ ಫೋನ್ ಪ್ರಜ್ವಲ್‌ದು ಎಂದು ಚಾಲಕ ಹೇಳಿಕೆ ನೀಡಿದ್ದಾನೆ ಆದರೆ, ಎಫ್‌ಎಸ್‌ಎಲ್ ವರದಿಯಲ್ಲಿ ಇದು ದೃಢಪಟ್ಟಿಲ್ಲ. ಅಲ್ಲದೆ, ಫೋನ್ ಅನ್ನು ಏಪ್ರಿಲ್ 30ರಂದು ವಶಕ್ಕೆ ಪಡೆದುಕೊಂಡು ಮೇ 30ರಂದು ತನಿಖೆಗಾಗಿ ಎಫ್‌ಎಸ್‌ಎಲ್‌ಗೆ ರವಾನಿಸಲಾಗಿದೆ ಈ ಸಂದರ್ಭದಲ್ಲಿ ಫೋನ್‌ನಲ್ಲಿದ್ದ ಮಾಹಿತಿಗಳನ್ನು ತಿರುಚುವ ಸಾಧ್ಯತೆಯಿದೆ. ಅಷ್ಟಕ್ಕೂ ಫೋನ್ ಚಾಲಕನದ್ದಾಗಿದ್ದು, ಅದಕ್ಕೂ ಪ್ರಜ್ವಲ್‌ಗೂ ಸಂಬಂಧವಿಲ್ಲ. ನ್ಯಾಯಾಲಯ ಜಾಮೀನು ನೀಡಲು ಯಾವುದೇ ಷರತ್ತು ವಿಧಿಸಿದರೂ ಅದನ್ನು ಪಾಲಿಸಲು ಸಿದ್ಧ ಎಂದು ಪ್ರಜ್ವಲ್ ಪರ ವಕೀಲರು ತಿಳಿಸಿದರು.

ನನ್ನ ಅವಧಿಯಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಆದ್ಯತೆ

ಶಾಸಕ ಜಿ.ಟಿ.ದೇವೇಗೌಡರ ಭರವಸೆ



ಮೈಸೂರು ತಾಲೂಕು ಮಂಡಕಳ್ಳಿ ಗ್ರಾಮದ ಸರ್ಕಾರಿ ಶಾಲೆ ಆವರಣದಲ್ಲಿ ಲಯನ್ಸ್ ಸಂಸ್ಥೆ ವತಿಯಿಂದ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು.

ಮೈಸೂರು, ಸೆ.19(ಎಸ್‌ಬಿಡಿ)– ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಆದ್ಯತೆ ನೀಡುವುದಾಗಿ ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಮಂಡಕಳ್ಳಿ ಗ್ರಾಮದ ಸರ್ಕಾರಿ ಶಾಲೆಯ ನೂತನ ಕೊಠಡಿ ಉದ್ಘಾಟನೆ ಹಾಗೂ ಲಯನ್ಸ್ ಸಂಸ್ಥೆ ವತಿಯಿಂದ ನಿರ್ಮಿಸಲುದ್ದೇಶಿಸಿರುವ ಕಾಂಪೌಂಡ್, ಶೌಚಾಲಯ ಹಾಗೂ ಕುಡಿಯುವ ನೀರಿನ ಘಟಕಕ್ಕೆ ಭೂಮಿ ಪೂಜೆ ನೆರವೇರಿಸಿದ ಅವರು, ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲೆ ಹಾಗೂ ಕಾಲೇಜುಗಳ ಸುತ್ತ ಕಾಂಪೌಂಡ್ ನಿರ್ಮಾಣ ಸೇರಿದಂತೆ ಸಮಗ್ರ ಅಭಿವೃದ್ಧಿಗೆ ಕ್ರಮ ವಹಿಸಲಾಗುವುದು ಎಂದರು.

ಸರ್ಕಾರಿ ಶಾಲೆಗಳ ಅಭಿವೃದ್ಧಿಯಲ್ಲಿ ಶಿಕ್ಷಕರ ಸಹಕಾರವೂ ಬಹಳ ಮುಖ್ಯ. ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಲೆಕ್ಕಾಧಿಕಾರಿ ಹಾಗೂ ಆಯಾಯ ಶಾಲೆಗಳ ಮುಖ್ಯೋಪಾಧ್ಯಾಯರು ಸಮನ್ವಯತೆಯಿಂದ ಅಗತ್ಯ ಅಭಿವೃದ್ಧಿ ಕಾರ್ಯಗಳ ಪಟ್ಟಿ ಮಾಡಬೇಕು. ಯಾವುದೇ ನಿರ್ಮಾಣ ಮಾಡುವ ಜಾಗದ ಬಗ್ಗೆ ಯಾವುದೇ ತಕರಾರು ಉಂಟಾಗದಂತೆ ಮುಂಜಾಗ್ರತಾ ಕ್ರಮ ವಹಿಸಬೇಕು. ಗ್ರಾಮಸ್ಥರು ತಮ್ಮೂರಿನ ಶಾಲೆ ಅಭಿವೃದ್ಧಿ ಸಂಬಂಧ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಮನವರಿಕೆ ಮಾಡಿಕೊಡಬೇಕು ಎಂದು ಸಲಹೆ ನೀಡಿದರು.

ನಾನು ರಾಜ್ಯದ ಉನ್ನತ ಶಿಕ್ಷಣ ಸಚಿವನಾಗಿದ್ದಾಗ ಪದವಿ ಪೂರ್ವ ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಅಭಿವೃದ್ಧಿಗೆ ಗಮನಹರಿಸಿದ್ದೆ. 393 ಪ್ರಾಂಶುಪಾಲರ ನೇಮಕಾತಿ ಸೇರಿದಂತೆ ಕಟ್ಟಡ, ಶೌಚಾಲಯ, ಗ್ರಂಥಾಲಯ, ಸಭಾಂಗಣಗಳನ್ನು ನಿರ್ಮಾಣ ಮಾಡಲಾಗಿತ್ತು ರಾಜ್ಯದ ಬಹುತೇಕ ಕಾಲೇಜುಗಳು ಸುಸಜ್ಜಿತ ಕಟ್ಟಡಗಳನ್ನು ಹೊಂದುವಂತೆ ಮಾಡಿದ್ದು ನನಗೆ ಸಮಾಧಾನ ತಂದಿದೆ. ಜಿಪಂ ಸದಸ್ಯನಾಗಿದ್ದಾಗಿನಿಂದಲೂ ಶಿಕ್ಷಣಕ್ಕೆ ಒತ್ತು ನೀಡುತ್ತಾ ಬಂದಿದ್ದೇನೆ. ಶಿಕ್ಷಣ ಹಾಗೂ ಅಭಿವೃದ್ಧಿ ವಿಚಾರದಲ್ಲಿ ತಾರತಮ್ಯದ ರಾಜಕೀಯ ಮಾಡಿಲ್ಲ ಎಂದು ತಿಳಿಸಿದರು.

ಹಣವಂತರು ತಮ್ಮ ಮಕ್ಕಳನ್ನು ದೊಡ್ಡ ದೊಡ್ಡ ಖಾಸಗಿ ಶಾಲೆಗಳಿಗೆ ಕಳುಹಿಸುತ್ತಾರೆ. ಆದರೆ ಬಡವರ ಮಕ್ಕಳು ಸರ್ಕಾರಿ ಶಾಲೆಗಳಲ್ಲೇ ಓದಬೇಕು. ಆದ್ದರಿಂದ ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳೆಂದೇ ಭಾವಿಸಿ, ವಿದ್ಯಾರ್ಜನೆ ನೀಡಬೇಕು. ಶಿಕ್ಷಕರೇ ಪೋಷಕರಂತೆ ಮಕ್ಕಳ ಉತ್ತಮ ಭವಿಷ್ಯಕ್ಕೆ ಅಡಿಪಾಯ ಹಾಕಬೇಕು. ಜನಪ್ರತಿನಿಧಿಗಳಿಗೆ ಜನಸೇವೆಗೆ ಅವಕಾಶ ಸಿಕ್ಕಿರುವಂತೆ ಮಕ್ಕಳ ಸೇವೆಗೆ ಶಿಕ್ಷಕರಿಗೆ ಅವಕಾಶವಿದೆ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ, ಅವರ ಬದುಕಿಗೆ ಸನ್ಮಾರ್ಗ ತೋರಿಸುವುದೇ ದೈವ ಪೂಜೆ ಎಂದು ಭಾವಿಸಬೇಕು ಎಂದು ಸಲಹೆ ನೀಡಿದರು.

ಕ್ಷೇತ್ರದಲ್ಲಿರುವ ಶಾಲೆಗಳಿಗೆ ಕ್ರೀಡಾಂಗಣ, ಆಟದ ಮೈದಾನ, ಶೌಚಾಲಯ, ಕುಡಿಯುವ ನೀರಿನ ಘಟಕ ಸೇರಿದಂತೆ ಎಲ್ಲಾ ರೀತಿಯ ಸೌಕರ್ಯಗಳನ್ನು ಹಂತ ಹಂತವಾಗಿ ಕಲ್ಪಿಸಲಾಗುತ್ತಿದೆ. ಕರ್ನಾಟಕ ಪಬ್ಲಿಕ್ ಶಾಲೆ ಮಾದರಿಯಲ್ಲಿ ಮೇಲ್ದರ್ಜೆಗೇರಿಸಲು ಬೇಕಾದ ಕ್ರಮವನ್ನು ಕೈಗೊಳ್ಳಲಾಗುವುದು. ಲಯನ್ ಸಂಸ್ಥೆಯವರು ಮಂಡಕಳ್ಳಿ ಶಾಲೆ ಅಭಿವೃದ್ಧಿಗೆ ಮುಂದಾಗಿರುವುದು ಸಂತಸದ ಸಂಗತಿ. ಕಾಂಪೌಂಡ್, ಕುಡಿಯುವ ನೀರಿನ ಘಟಕ, ಶೌಚಾಲಯ ಜೊತೆಗೆ ಮಕ್ಕಳ ಆಟೋಟಕ್ಕೆ ಅಗತ್ಯ ಉಪಕರಣಗಳನ್ನು ಕಲ್ಪಿಸುತ್ತಿರುವುದು ಮಾದರಿಯಾಗಿದೆ. ಗಿಡಗಳನ್ನು ನೆಟ್ಟು ಸುಂದರ ವಾತಾವರಣ ನಿರ್ಮಾಣಕ್ಕೆ ಶಿಕ್ಷಕರು ಕ್ರಮ ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಡಿಡಿಪಿಐ ಜವರೇಗೌಡ, ಮುಖಂಡರಾದ ಲೋಕೇಶ್, ಬೀರೇಗೌಡ, ರಾಮೇಗೌಡ, ಚಂದ್ರಶೇಖರ್, ಲಯನ್ಸ್ ಸಂಸ್ಥೆಯ ಮಮತಾ, ಸುಬ್ರಹ್ಮಣ್ಯ, ಮೂರ್ತಿ, ಜಯಕುಮಾರ್, ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗೋಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಯುದ್ಧ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಂಗೋಟಿ ಮ್ಯಾನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಂಗೋಟಿ ಮ್ಯಾನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಯುದ್ಧ (ಹಿಂ)	4 ಪ್ರದರ್ಶನಗಳು
ಸಂಗಂ	
ಹಗ್ಗ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ಖೈದಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಟ್ರಾನ್ಸ್‌ಫಾರ್ಮರ್ಸ್ ಒನ್ (3ಡಿ) (ಇಂ): ಬೆ.11.20ಕ್ಕೆ, ರಾ.7.40ಕ್ಕೆ, ರಾ.9.55ಕ್ಕೆ, ಹಗ್ಗ (ಕ): ಮ.1.35ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.4.15ಕ್ಕೆ.
ಸ್ಕ್ರೀನ್ 2	ಲಂಗೋಟಿ ಮ್ಯಾನ್ (ಕ): ಬೆ.10.30ಕ್ಕೆ, ಲಬ್ಬರ್ ಪಾಂಡು (ತ): ಮ.1.40ಕ್ಕೆ, ನಂದನ್ (ತ): ಸಂ.4.35ಕ್ಕೆ, ಕಹಾನ್ ಶುರು ಕಹಾನ್ ಕಥಂ (ಹಿಂ): ರಾ.7.15ಕ್ಕೆ, ತುಂಬ್ಬಾಡ್ (ಹಿಂ): ರಾ.9.55ಕ್ಕೆ.
ಸ್ಕ್ರೀನ್ 3	ಉಪೇಂದ್ರ (ಕ): ಬೆ.10.50ಕ್ಕೆ, ಕರ್ಕಿ ನಾನು ಬಿಎ ಎಲ್‌ಎಲ್‌ಬಿ (ಕ): ಮ.1.35ಕ್ಕೆ, ಅನ್ನ (ಕ): ಸಂ.4.35ಕ್ಕೆ, ಯುದ್ರ (ಹಿಂ): ರಾ.7.15ಕ್ಕೆ, ಕಿಷ್ಕಿಂಧಾ ಖಂಡಂ (ಮ): ರಾ.10.10ಕ್ಕೆ.
ಸ್ಕ್ರೀನ್ 4	ಸ್ತ್ರೀ 2 (ಹಿಂ): ಬೆ.10.05ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ, ರಾ.7.10ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಸಂ.4.05ಕ್ಕೆ, ಯುದ್ರ (ಹಿಂ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಧ್ರುವತಾರೆ (ಕ): ಮ.1.05ಕ್ಕೆ, ಕರ್ಕಿ ನಾನು ಬಿಎ ಎಲ್‌ಎಲ್‌ಬಿ (ಕ): ಸಂ.4.10ಕ್ಕೆ, ಹಗ್ಗ (ಕ): ರಾ.7.05ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ರಾ.9.35ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.1.10ಕ್ಕೆ, ಲಂಗೋಟಿ ಮ್ಯಾನ್ (ಕ): ಸಂ.4.10ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7.15ಕ್ಕೆ.
ಸ್ಕ್ರೀನ್ 3	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.15ಕ್ಕೆ, ಕೋಳಿಪಣ್ಣೈ ಚೆಲ್ಲದುರೈ (ತ): ರಾ.9.40ಕ್ಕೆ.
ಸ್ಕ್ರೀನ್ 4	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ರಾ.9.30ಕ್ಕೆ, ನಂದನ್ (ತ): ಸಂ.4.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಸಂ.6.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

6ನೇ ದಿನ, ಶುಕ್ರವಾರ, 20–9–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಸಿದ್ದಪುರ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 2.00ಕ್ಕೆ
1. ಪೆಟಿ ಲೌವ್ 2. ಸ್ಯಾಂಡ್ ಕ್ಯಾಸ್ಟಲ್ 3. ಒನ್ ಡೈಮಂಡ್

II. ಪಂಚಾಗ್ನಿ ಪ್ಲೇಟ್ ಡಿII–1200 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಮ.2.30ಕ್ಕೆ
1. ಅಂಕುಶ್ 2. ಫರ್ಫೆಕ್ಟ್ ಆರ್ಟ್ 3. ಪ್ರಿಯಾ

III. ಸೈಚಿಕ್ ಸ್ಟ್ರೆಂಥ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಮಧ್ಯಾಹ್ನ 3.00ಕ್ಕೆ
1. ನ್ಯಾಚುರಲ್ ಒನ್ 2. ಫ್ರೀ ಸ್ಪಿರಿಟೆಡ್ 3. NRI ಟಚ್

IV. M.A.M. ಡಾ. ರಾಮಸ್ವಾಮಿ ಟ್ರೋಫಿ –1600 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.3.30ಕ್ಕೆ
1. ಗಲಹ್ಯಾಡ್ 2. ಮಿಸ್ಟಿಕ್ ಬಾಂಡ್ 3. ಫಿಲಾಸಫಿ

V. ಮೈಸೂರ್ 1000 ಗಿನ್ನಿಸ್ –1600 ಮೀ. 3 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ಎಕ್ಸಲೆಂಟ್ ಲ್ಯಾಸ್ 2. ಚೋಟಿಪಾರಿ

VI. ಒರಿಜಿನಲ್ ವೇಲ್ ರೇಸಿಂಗ್ ಟ್ರೋಫಿ –1200 ಮೀ. ರೇಟೆಡ್ 40 ರಿಂದ 65. (ಮೈಸೂರು ಬೇಸ್ಡ್ ಹಾರ್ಸ್). ಸಂ.4.30ಕ್ಕೆ
1. ಸಿಯೋಲ್ ಫಾರ್ ಬುಲೆಟ್ 2. ಸ್ಪಾರ್ಕ್‌ಲಿಂಗ್ ನೈಟ್ 3. ಟ್ರಂಪ್ ಬೇಬಿ

VII. ಪಂಚಾಗ್ನಿ ಪ್ಲೇಟ್ ಡಿI–1200 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1. ಕೂರ್ಗ್ ಜನರಲ್ 2. ಇನ್‌ಫಿನಿಟಿ ಪಾಸಿಬಿಲಿಟಿ 3. ರಿವೆಲಾಟರ್

ದಿನದ ಅತ್ಯುತ್ತಮ	ಎಕ್ಸಲೆಂಟ್ ಲ್ಯಾಸ್
ಡಬ್ಬಲ್	ಗಲಹ್ಯಾಡ್, ಸಿಯೋಲ್ ಫಾರ್ ಬುಲೆಟ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜಿಸಿ

Newly Constructed House For Sale

Two Storey, 2 BHK on each floor with interiors built on 20x30 Site.
At Sathagalli B Zone.
Opp. VTU College
Price: 80 lakhs
(Slightly negotiable)
Contact: 82966 58879

SITE FOR SALE

40x60 South facing site is for sale in Kaveri Circle, Hebbal 2nd Stage. Price 1.40 cr
8884616461
8073300783

SITE FOR SALE

30x40 site is available for sale in Vishwaprajna attached layout in Hale Kesare, Mysore. Just 2 km from Manipal Hospital. Price is 33 lakh
8884616461 | 8073300783

ಸಾರ್ವಜನಿಕ ತಿಳುವಳಿಕೆ ನೋಟೀಸು

ಈ ಕೆಳಗೆ ಎ ಮತ್ತು ಬಿ ಷೆಡ್ಯೂಲ್‌ಗಳಲ್ಲಿ ವಿವರಿಸಿರುವ ಸ್ವತ್ತುಗಳನ್ನು, ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳ ಮಾಲೀಕರಾದ ಶ್ರೀಮತಿ. ಅನ್ನಪೂರ್ಣ.ಹೆಚ್.ಎಸ್, ಕೋಂ. ನಟರಾಜು. ಹೆಚ್.ಆರ್, ವಾಸ: ರಾಜ್ ಕುಮಾರ್ ರಸ್ತೆ, ಕಪಿಲ ಬಡಾವಣೆ, ಹುಲ್ಲಹಳ್ಳಿ ಗ್ರಾಮ ಮತ್ತು ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ ರವರ ಸಂಪೂರ್ಣ ಹಕ್ಕಿಗೂ, ಮಾಲೀಕತ್ವಕ್ಕೂಳಪಟ್ಟ ಹಾಗೂ ಯಾವುದೇ ಋಣ ಭಾರಗಳಿಲ್ಲದ ಎ ಮತ್ತು ಬಿ ಷೆಡ್ಯೂಲ್ ಸ್ವತ್ತುಗಳನ್ನು ಸದರಿ ಶ್ರೀಮತಿ. ಅನ್ನಪೂರ್ಣ.ಹೆಚ್.ಎಸ್‌ರವರಿಂದ ಕ್ರಯಕ್ಕೆ ಪಡೆಯಲು ಹೊರಟಿರುತ್ತಾರೆ. ಸದರಿ ಸ್ವತ್ತುಗಳ ಮೇಲೆ ಯಾರಿಗಾದರೂ ಯಾವುದೇ ವಿಧವಾದ ಹಕ್ಕು, ಬಾಧ್ಯತೆ, ಆಕ್ಷೇಪಣೆಗಳೇನಾದರೂ ಇದ್ದ ಪಕ್ಷದಲ್ಲಿ ಸದರಿ ಹಕ್ಕು, ಬಾಧ್ಯತೆ, ಆಕ್ಷೇಪಣೆಗಳನ್ನು ಪುಷ್ಟೀಕರಿಸುವಂತಹ ಸೂಕ್ತ ದಾಖಲಾತಿಗಳೊ ಂದಿಗೆ ಈ ನೋಟೀಸು ಪ್ರಕಟವಾದ ಹತ್ತು ದಿನಗಳ ಒಳಗೆ ಕೆಳಕಂಡ ವಕೀಲರ ಕಛೇರಿಗೆ ಸಲ್ಲಿಸತಕ್ಕದ್ದು ನಂತರ ಬರುವ ಆಕ್ಷೇಪಣೆಗಳು ನಮ್ಮ ಕಕ್ಷಿದಾರರರನ್ನು ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ದೃಢಪಡಿಸಿರುತ್ತದೆ.

"**ಎ ಷೆಡ್ಯೂಲ್ ಸ್ವತ್ತಿನ ವಿವರ**: ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಚಾಮನಮಾದನಹಳ್ಳಿ ಗ್ರಾಮಕ್ಕೆ ಸೇರಿದ ತರಿ ಸರ್ವೆ ನಂ. 42/1 (ನಲವತ್ತೆರಡು ಸಬ್ ನಂಬರ್ ಒಂದು) ರ ವಿಸ್ತೀರ್ಣ 2.00.00.00 (ಎರಡು ಎಕರೆ ಸೊನ್ನೆ ಗುಂಟೆ) ಆಕಾರ 6 ರೂ. 32 ಪೈಸೆವುಳ್ಳದ್ದರ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ಸರ್ವೆ ನಂ. 17, (ಗ್ರಾಮ ನಕಾಷೆಯಂತೆ ಕೆರೆ ಹಾಗೂ ಆರ್.ಟಿ.ಸಿ ಯಂತೆ ರಾಜಶೇಖರ ರವರ ಜಮೀನು), ಪಶ್ಚಿಮಕ್ಕೆ : ಹುಲ್ಲಹಳ್ಳಿ ರಸ್ತೆ, ಉತ್ತರಕ್ಕೆ : ಸರ್ವೆ ನಂ. 41/3 ರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ. 42/2 ಪ್ರಕಾಶ್ ರವರ ಜಮೀನು.

"**ಬಿ ಷೆಡ್ಯೂಲ್ ಸ್ವತ್ತಿನ ವಿವರ** : ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಚಾಮನಮಾದನಹಳ್ಳಿ ಗ್ರಾಮಕ್ಕೆ ಸೇರಿದ ತರಿ ಸರ್ವೆ ನಂ. 41/3 (ನಲವತ್ತೊಂದು ಸಬ್ ನಂಬರ್ ಮೂರು) ರ ಒಟ್ಟು ವಿಸ್ತೀರ್ಣ 1.04.08.00 ಫೂಟ್ ಖರಾಬ್ (ಬ) 0.02.00.00 ಗುಂಟೆ, ಜಾತಾ ಉಳಿಕೆ ವಿಸ್ತೀರ್ಣ 1.02.08.00 (ಒಂದು ಎಕರೆ ಎರಡೂವರೆ ಗುಂಟೆ) ಆಕಾರ 3 ರೂ 36 ಪೈಸೆವುಳ್ಳದ್ದರ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ :ಸರ್ವೆ ನಂ. 17, (ಗ್ರಾಮ ನಕಾಷೆಯಂತೆ ಕೆರೆ ಹಾಗೂ ಆರ್.ಟಿ.ಸಿ ಯಂತೆ ರಾಜಶೇಖರ ರವರ ಜಮೀನು), ಪಶ್ಚಿಮಕ್ಕೆ : ಹುಲ್ಲಹಳ್ಳಿ ರಸ್ತೆ, ಉತ್ತರಕ್ಕೆ : ಸರ್ವೆ ನಂ. 41/2 ರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ. 42/1 ರ ಜಮೀನು. ಈ ಮೇಲ್ಕಂಡ ಎರಡೂ ಐಟಂ ಜಮೀನುಗಳ ಒಟ್ಟು ವಿಸ್ತೀರ್ಣ 3.02.08.00 (ಮೂರು ಎಕರೆ ಎರಡೂವರೆ ಗುಂಟೆ) ತರೀ ಜಮೀನು

ಸಹಿ/– ಎ.ಸಿ.ನಟರಾಜ್.ಬಿ.ಎಸ್ಸಿ, ಎಂ.ಎಲ್
ಎ.ಎನ್.ಲಿಂಗರಾಜೇ ಅರಸ್, ಬಿ.ಎಸ್ಸಿ., ಬಿ.ಎಲ್.
ವಕೀಲರು, " ಲಾ ಛೇಂಬರ್ಸ್ " #33/1, 2 & 3, ಜೆ.ಎಲ್.ಬಿ ರಸ್ತೆ, ತಗಡೂರು ರಾಮಚಂದ್ರ ರಾವ್ ವೃತ್ತ, ವಿದ್ಯಾರಣ್ಯಪುರಂ,ಮೈಸೂರು –570008, ಮೊ : 9448439192
ದಿನಾಂಕ : 19.09.2024


4ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ **4** ವರ್ಷ ವಾದರೂ ನಿಮ್ಮ ನೆನಪು ಅಮರ
– ಗೋವಿಂದರಾಜು, PWD ಕ್ಲಾಸ್ 1 ಕಂಟ್ರಾಕ್ಟರ್, ಜಯ ನಗರ, ಕೆ.ಜಿ.ಕೊಪ್ಪಲು ಹಾಗೂ ಕುಟುಂಬದವರು.

ಶ್ರೀಮತಿ ಚನ್ನಮ್ಮ
ದಿ॥ ಕರಿಯಪ್ಪ ಚಾಮಯ್ಯನ ದೇವಣ್ಣರವರ ಪತ್ನಿ

6ನೇ ವರ್ಷದ ಸವಿನೆನಪು



ಶಂಕರ
ರೈಲ್ವೆ ನಿವೃತ್ತರು
ಮರಣ : 20.9.2018

ದುಃಖತಪ್ತರು : ತಾಯಿ ಲಕ್ಷ್ಮಮ್ಮ, ಹೆಂಡತಿ ಲಕ್ಷ್ಮಿದೇವಿ, ಗಂಡು ಮಕ್ಕಳು, ಸೊಸೆಯಂದಿರು, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ತಮ್ಮಂದಿರು ಹಾಗೂ ಬಂಧುಮಿತ್ರರು.

ಕಾರ್ಯಕ್ರಮಗಳು ಹಾಗೂ ಸಭೆಗಳಿಗೆ

ವೈದ್ಯರ ಸಮುದಾಯ ಭವನ



ಆಲನಹಳ್ಳಿ, ಟಿ.ನರಸೀಪುರ ರಸ್ತೆ, ರಿಂಗ್ ರಸ್ತೆ ಜಂಕ್ಷನ್, ಮೈಸೂರು

ಸುಸಜ್ಜಿತ ಸಭಾಂಗಣ, ಡೈನಿಂಗ್ ಹಾಲ್, ಜನರೇಟರ್, ಪಾರ್ಕಿಂಗ್ ಸ್ಥಳ, ಇತ್ಯಾದಿ.

Call : 96111 72148, 94495 61722, 98451 29002
Office time 11 am to 6.00 pm on all days

ಬೇಕಾಗಿದೆ

ಕ್ರಯಕ್ಕೆ 4 ಮತ್ತು ಮೇಲ್ಪಟ್ಟ ಎಕರೆ ತೆಂಗಿನ ತೋಟ ಕೃಷಿ ಭೂಮಿ ಬೇಕಾಗಿದೆ.
ಮೈಸೂರಿನ ಸುತ್ತಮುತ್ತ
8296023550
No Brokers

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಬಸವರಾಜು
ಆರೋಗ್ಯ ಇಲಾಖೆ

ಇವರು ದಿ: 10.09.2024ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ **ಉತ್ತರ ಕ್ರಿಯಾದಿ ಕಾರ್ಯವನ್ನು** ದಿ. 20.09.2024 ಶುಕ್ರವಾರ ಸಂಜೆ 7 ಗಂಟೆಗೆ ಸ್ವಗೃಹ ನಂ.1368, 3ನೇ ಕ್ರಾಸ್, ಕುರುಬಾರಹಳ್ಳಿ ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಭೋಜನ: ಸಂಜೆ 7 ಗಂಟೆಗೆ

ದುಃಖತಪ್ತರು: ಶ್ರೀಮತಿ ಲೀಲಾವತಿ ಟಿ., ಮಕ್ಕಳಾದ ರವಿಕಿರಣ್, ವಿಕಾಸ್ ಹಾಗೂ ಚಿಕ್ಕಗೌಡರ ಕುಟುಂಬವರ್ಗದವರು

MUDA APPROVED SITES FOR SALE

30X40
last 3 East Facing Available
Location:
Adjacent J P Nagar, Mysuru
Price @ Rs 74 lakhs onwards
Call: 96200 99122

ನಿವೇಶನಗಳು ಮಾರಾಟಕ್ಕಿವೆ

ಸೈನಿಕ ನಗರ ಬಡಾವಣೆ

ಡೆವಲಪರ್– ARAMANE NAGARA DEVELOPERS
ಇಲವಾಲದಿಂದ ಕೇವಲ 5 ಕಿ.ಮೀ., NH-275 ಗೆ ಹೊಂದಿಕೊಂಡಿದೆ.
ಪ್ರತಿ ಚದರ ಅಡಿಗೆ ಕೇವಲ ರೂ.699/- & ರೂ.999/-
ಉಚಿತ ನಿವೇಶನ ಭೇಟಿ ಲಭ್ಯವಿರುತ್ತದೆ.
ಆಸಕ್ತರು ಕರೆ ಮಾಡಿ : **95131 57993, 74062 84792**

WE ARE HIRING

For a leading Real Estate Company
Open Position
SITE ENGINEERS - 6 nos (M)
SALES EXECUTIVES - 4 nos (M)
Send your resume to
hiremenow235@gmail.com

ಕಳೆದಿದೆ

ಮೈಸೂರು ಜಿಲ್ಲೆ, ನಂಜನಗೂಡು ಟೌನ್, ನೀಲಕಂಠನಗರ, ಗೌತಮ ರಸ್ತೆ, #4585/6 ರಲ್ಲಿ ವಾಸವಾಗಿರುವ ಎನ್.ರಿಯಾಜ್ ಅಹಮ್ಮದ್ ರವರ ಮಗಳು ಅರ್ಷಿಯಾ.ಎನ್.ಆರ್ ಆದ ನಾನು ದಿನಾಂಕ 20.03.2015 ರಂದು ಮಹಮ್ಮದ್ ಉಮ್ಮರ್ ರವರಿಂದ ದೇಬೂರು ಗ್ರಾಮಕ್ಕೆ ಸೇರಿದ್ದ ಸರ್ವೆ ನಂಬರ್ 272/2ಬಿ ನಂಬರ್‌ನ 1 ಎಕರೆ 6 ಗುಂಟೆ & 273/1 ನಂಬರ್‌ನ 1 ಎಕರೆ 12 ಗುಂಟೆ ಒಟ್ಟು 2 ಎಕರೆ 18 ಗುಂಟೆ ಜಮೀನನ್ನು ಖರೀದಿಸಿದ್ದು ನೋಂದಾಯಿತ ಕ್ರಯ ಪತ್ರವನ್ನು ಉಪ ನೋಂದಣಾಧಿಕಾರಿಗಳ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ಸಂಖ್ಯೆ ಎನ್.ಜಿ.ಜಿ-1- 07660-2014-15 ರಲ್ಲಿ ನನ್ನ ಹೆಸರಿಗೆ ಕ್ರಯ ಮಾಡಿ ಕ್ರಯ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 09.09.2024 ರಂದು ಮಧ್ಯಾಹ್ನ 02.00 ಗಂಟೆ ಸಮಯದಲ್ಲಿ ಹಳೇ ಸರ್ಕಾರಿ ಬಸ್ ನಿಲ್ದಾಣದ ಬಳಿ ಜೆರಾಕ್ಸ್ ಮಾಡಿಸುವ ಸಲುವಾಗಿ ತೆಗೆದುಕೊಂಡು ಹೋಗಿದ್ದು, ಈ ಸಮಯದಲ್ಲಿ ನನ್ನ ಮೂಲ ದಾಖಲಾತಿ ಕ್ರಯ ಪತ್ರವು ಕಳೆದು ಹೋಗಿರುತ್ತದೆ. ಎಲ್ಲಾ ಕಡೆ ಹುಡುಕಿದರೂ ಎಲ್ಲೂ ಪತ್ತೆಯಾಗಿರುವುದಿಲ್ಲ. ಸಿಕ್ಕವರು ಸಂಪರ್ಕಿಸಿ
8951721109



ಹಸಿರು ನಮ್ಮ ಉಸಿರು

GRANITE

20.mm Granite
available at
Rs. 50/- to 65/-
in all Colours*
Galaxy Black available
Call : 97434 56615

Dubai 5 Nights 6 Days

Ex Mysore to Mysore Airport pickup and drop.
Ex Bangalore Round trip Emirates flight
Only 6 seats are available
Last date for Booking 26th Sep 2024
PACKAGE COST: Rs.1,06,900/-
DEPARTURE DATE Oct 23rd 2024



For More Details Contact :
994 5242 427

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.

2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಸೂಚನಾ ಪತ್ರ

ಒಕ್ಕೂಟದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ: 23.09.2024ನೇ ಸೋಮವಾರ ಬೆಳಗ್ಗೆ 11.00 ಗಂಟೆಗೆ ಪಡುವಾರಹಳ್ಳಿ (ವಿನಾಯಕ)ಗ್ರಾಮಾಭ್ಯುದಯ ಟ್ರಸ್ಟ್ (ರಿ.), ವಿನಾಯಕನಗರ (ಪಡುವಾರಹಳ್ಳಿ), ಮೈಸೂರು ಇಲ್ಲಿ ಒಕ್ಕೂಟದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಆರ್. ಚಲುವರಾಜು ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದ್ದು, ಸದಸ್ಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಪ್ರತಿನಿಧಿಗಳು ಸಭೆಗೆ ಸಕಾಲದಲ್ಲಿ ಹಾಜರಾಗಬೇಕಾಗಿ ಕೋರಿದೆ. ಪೂರ್ಣ ವಿವರಗಳನ್ನೊಳಗೊಂಡ ಸಭಾ ಸೂಚನಾ ಪತ್ರವನ್ನು ಎಲ್ಲಾ ಸದಸ್ಯ ಸಂಘಗಳಿಗೂ ಮುದ್ದಾಂ ನೀಡಲಾಗಿದೆ.

ಸ್ಥಳ : ಮೈಸೂರು
ದಿನಾಂಕ: 08.09.2024

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/–
ಸುರೇಶ ನಾಯ್ಕ್ .ಕೆ.ಎನ್
ವ್ಯವಸ್ಥಾಪಕ ನಿರ್ದೇಶಕರು

COMMERCIAL SPACE FOR RENT

- Ground Floor, First Floor & Second Floor - 1500 Sqft Each @ Siddartha Layout
- Co-working space 14 seater with Conference Room (Multipurpose) for Rent

CONTACT 9611211001

REPLY TO PUBLIC NOTICE

(REPLY TO THE PUBLIC NOTICE GOT PUBLISHED BY SRI.JAYATHEERTHA, ADVOCATE UNDER THE CAPTION

ಸಾರ್ವಜನಿಕ ಪ್ರಕಟಣೆ

The General Public are hereby informed that, this reply to public notice is being issued under the instructions of my client Sri. Rakesh Bhat. V son of Late.R.Venkatarama Bhat, aged about 59 years, residing at No. 905/113, 4th Main, 6th Cross, Vidyaranyapuram, Mysore, as a reply to the public notice got published by Sri. Jayatheertha, Advocate under the caption ಸಾರ್ವಜನಿಕ ಪ್ರಕಟಣೆ.

The General public are hereby informed that my client is the sole and absolute owner of the property bearing survey number 105 situated at Jantagalli Village, Mysore Taluk and District and the said property was acquired by the father of my client Sri. Venkatarama Bhat and the said Venkatarama Bhat died on 06.08.1986 at Mysore. Upon the death of sri. Venkatarama Bhat, my client being his legal heir, has stepped into his shoes and he has become absolute owner of the schedule property.

Further, my client denies all the allegations made in the aforesaid public notice alleging that the Late. Sri. Venkatarama Bhat is trying to alienate the above said property etc.., as the same is false, incorrect and concocted and made with a oblique and malafide motive to gain wrongfully and to cause wrongful loss to our client and also to malign our client in the esteem of General public.

Therefore, the General Public are hereby informed and put on notice NOT TO MISLEAD by the aforesaid notice dated 30.08.2024 under the caption "ಸಾರ್ವಜನಿಕ ಪ್ರಕಟಣೆ ", got published by Sri.Jayatheertha, Advocate and also note that at present my client has no intention to alienate his acquired and possessed above mentioned property.

Dated: 16th Day of September 2024, Mysuru

Sd/- SRINIDHI, Advocate and Law Consultant
Office at No.1037, CH 5/1, Devaparthiva Road,
Chamarajapuram, Mysuru - 570005, Mo:+91 9482584824

ವಾಣಿವಿಲಾಸ ಮೊಹಲ್ಲಾ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

(ನೋಂದಣಿ ಸಂಖ್ಯೆ: 870 ಡಿ.ಆರ್.ಎಂ 64–65) ದೂ.0821–2512258
ನಂ.1789, ಹಂಪಿವೃತ್ತ, 2ನೇ ಹಂತ, ಹೆಬ್ಬಾಳ್ (ವಿಜಯನಗರ), ಮೈಸೂರು–570017

59ನೇ ಸಂಘದ ವಾರ್ಷಿಕ ಮಹಾಸಭೆಯ ಪ್ರಕಟಣೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 22–09–2024 ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಸಂಘದ 59ನೇ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀಯುತ ಹೆಚ್.ಲಂಕೇಗೌಡ ರವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಈಗಾಗಲೇ ಸದಸ್ಯರುಗಳಿಗೆ ಅಂಚೆ ಮೂಲಕ ಆಹ್ವಾನ ಪತ್ರಿಕೆ ಕಳುಹಿಸಿದ್ದು ಆಹ್ವಾನ ಪತ್ರಿಕೆ ತಲುಪದೆ ಇದ್ದವರು ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ಸಭೆಗೆ ಸಕಾಲಕ್ಕೆ ತಪ್ಪದೇ ಹಾಜರಾಗಬೇಕೆಂದು ಈ ಮೂಲಕ ವಿನಂತಿ ಮಾಡಲಾಗಿದೆ.

ವಂದನೆಗಳೊಂದಿಗೆ,
ಸ್ಥಳ : ಐಡಿಯಲ್ ಜಾವಾ ರೋಟಿ ಶಾಲೆ ಸಭಾಂಗಣ,
ಚಾಮುಂಡಿ ಗೆಸ್ಟ್ ಹೌಸ್ ಪಕ್ಕ,
ಕೃಷ್ಣ ವಿಲಾಸ ರಸ್ತೆ, ಮೈಸೂರು

ಸಹಿ/– ಕಾರ್ಯದರ್ಶಿ
ಹೆಚ್.ಸಿ.ಚೇತನ್ ಕುಮಾರ್

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೈಟು ಬೇಕಾಗಿದೆ

20x30 E/N Face
ವಿಜಯನಗರ 4ನೇ ಹಂತ, 2ನೇ ಫೇಸ್
9448958332

BUILDING CONSTRUCTION

Starts from
1599 Rs/sqft
Call : 99885-54496

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು

"ಯಶೋಧ ಆರ್ಕೇಡ್" ನಂ–2014, ಹೊಸ ನಂ–ಡಿ 6, 2ನೇ ಮಹಡಿ, ಸೀಬಯ್ಯ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು–570001.


ಮಾನ್ಯರೇ,

2022–2023 ಹಾಗೂ 2023–2024 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 24–09–2024 ರಂದು ಮಂಗಳವಾರ ಬೆಳಗ್ಗೆ 10:30 ಗಂಟೆಗೆ ಪಂಡಿತ್ ಶ್ರೀ ನಾರಾಯಣಾಚಾರ್ಯ ಕಲ್ಯಾಣ ಮಂದಿರ, ದಿವಾನ್ಸ್ ರಸ್ತೆ, ಚಾಮರಾಜ ಜೋಡಿ ರಸ್ತೆ, (100 ಅಡಿ ರಸ್ತೆ) ಮೈಸೂರು–570024 ಇಲ್ಲಿ ಏರ್ಪಡಿಸಲಾಗಿದೆ. ಮಹಾಸಭೆಯ ನೋಟಿಸ್ಸನ್ನು ಈಗಾಗಲೇ ಸಂಘದ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿಕೊಡಲಾಗಿದೆ. ಒಂದು ವೇಳೆ ನೋಟಿಸ್ಸು ತಲುಪದಿದ್ದರೆ ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ತಪ್ಪದೇ ಹಾಜರಾಗಲು ಕೋರಿದೆ.

ಸಹಿ/– (ಡಿ ವೀಣಾ) ಮುಖ್ಯಕಾರ್ಯನಿರ್ವಹಣಾಧಿಕಾರಿ

100% NEEM PLYWOOD

@ FACTORY DEPOT RATES
NEEM BOND PLATINUM®
ISI
10 YEARS WARRANTY



9901291267, 9845426862

ಸ್ಥಾಪನೆ: 1916 ದೂರವಾಣಿ: 0821–2448947
ನೋಂದಣಿ ಸಂಖ್ಯೆ: 937,R.C.S, 31//01-11-1916 Email:tmcchsltd@gmail.com

ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ.,

ಚಾಮರಾಜ ಜೋಡಿ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು–57004

ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆ

ಮೇಲ್ಕಂಡ ಸೊಸೈಟಿಯ 106ನೇ ಸಾಲಿನ ಸರ್ವಸದಸ್ಯರ ಸಭೆಯು 2024ನೇ ಇಸವಿ ಸೆಪ್ಟೆಂಬರ್ ಮಾಹೆ ದಿನಾಂಕ ಇಪ್ಪತ್ತೆರಡರಂದು (22–09–2024) ಭಾನುವಾರ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಸಂಘಕ್ಕೆ ಸೇರಿದ ಅಮೃತ ಮಹೋತವ ಸಭಾಂಗಣದಲ್ಲಿ ನಡೆಸಲು ಏರ್ಪಾಡು ಮಾಡಲಾಗಿರುತ್ತೆ. ನಮ್ಮ ಸೊಸೈಟಿಯ ಅಧ್ಯಕ್ಷರಾದ ಶ್ರೀ ಎನ್.ಶ್ರೀನಿವಾಸ ಬಿ.ಕಾಂ., ಎಲ್.ಎಲ್.ಬಿ., ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿರುತ್ತೆ.
ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಲಕ ಕಳುಹಿಸಲಾಗಿದ್ದು, ಒಂದು ವೇಳೆ ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ ಮಾನ್ಯ ಸದಸ್ಯರುಗಳು ಸಕಾಲಕ್ಕೆ ವಾರ್ಷಿಕ ಮಹಾಸಭೆಗೆ ಹಾಜರಾಗಬೇಕೆಂದು ಈ ಮೂಲಕ ಕೋರಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/–ಬಿ.ಎಸ್.ಶ್ರೀನಾಥ್, ಕಾರ್ಯದರ್ಶಿ

[ವಿಶೇಷ ಮನವಿ: ಸಂಸ್ಥೆಯು ಗರಿಷ್ಠ ಅವಧಿಗೆ ಸ್ವೀಕರಿಸುತ್ತಿರುವ ಖಾಯಂ ಠೇವಣಿಯ ಮೇಲೆ ಇತರೆ ಸಂಘ ಸಂಸ್ಥೆಗಳಿಗಿಂತ ಅಧಿಕ ಬಡ್ಡಿಯನ್ನು ಅಂದರೆ, 22 ತಿಂಗಳ ಅವಧಿಗೆ ಶೇ9% ರಂತೆ ಹಾಗೂ ಹಿರಿಯ ನಾಗರೀಕರು, ನೋಂದಾಯಿತ ಸಂಘ ಸಂಸ್ಥೆಗಳಿಗೆ ಶೇ.0.5% ರಷ್ಟು ಹೆಚ್ಚಿಗೆ ಬಡ್ಡಿಯನ್ನು ಪಾವತಿಸುತ್ತಿರುತ್ತೆ.]

वस्त्र मंत्रालय
MINISTRY OF TEXTILES

ಕೇಂದ್ರ ರೇಷ್ಮೆ ಮಂಡಳಿ

ಅಮೃತ ಮಹೋತ್ಸವ ಸಂಭ್ರಮಾಚರಣೆ, ಸಾಂಸ್ಕೃತಿಕ ನಗರಿ, ಮೈಸೂರು



ಸ್ಥಳ:
ಘಟಿಕೋತ್ಸವ ಸಭಾಂಗಣ,
ಕರ್ನಾಟಕ ರಾಜ್ಯ
ಮುಕ್ತ ವಿಶ್ವವಿದ್ಯಾಲಯ

ದಿನಾಂಕ:
20ನೇ ಸೆಪ್ಟೆಂಬರ್ 2024
ಬೆಳಗ್ಗೆ 10.00 ಘಂಟೆ



ಮುಖ್ಯ ಅತಿಥಿ
ಶ್ರೀ ಗಿರಿರಾಜ್ ಸಿಂಗ್
ಗೌರವಾನ್ವಿತ ಜವಳಿ ಸಚಿವರು, ಭಾರತ ಸರ್ಕಾರ

ವಿಶೇಷ ಅತಿಥಿ
ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಗೌರವಾನ್ವಿತ ಭಾರೀ ಕೈಗಾರಿಕೆಗಳು ಹಾಗೂ ಉಕ್ಕು ಸಚಿವರು, ಭಾರತ ಸರ್ಕಾರ

ಇವರ ಘನ ಉಪಸ್ಥಿತಿಯಲ್ಲಿ

ಶ್ರೀ ಪಬಿತ್ರಾ ಮಾರ್ಗರಿಟ
ಗೌರವಾನ್ವಿತ ವಿದೇಶಾಂಗ ವ್ಯವಹಾರಗಳು ಹಾಗೂ ಜವಳಿ ಖಾತೆಗಳ ರಾಜ್ಯ ಸಚಿವರು, ಭಾರತ ಸರ್ಕಾರ

ಶ್ರೀ ವಿ. ಸೋಮಣ್ಣ
ಗೌರವಾನ್ವಿತ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವರು, ಭಾರತ ಸರ್ಕಾರ

ಶ್ರೀ ಕೆ. ವೆಂಕಟೇಶ್
ಗೌರವಾನ್ವಿತ ಪಶುಸಂಗೋಪನೆ ಹಾಗೂ ರೇಷ್ಮೆ ಕೃಷಿ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್
ಗೌರವಾನ್ವಿತ ಸಂಸದರು, ಲೋಕಸಭೆ, ಮೈಸೂರು

ಡಾ. ಕೆ. ಸುಧಾಕರ್
ಗೌರವಾನ್ವಿತ ಸಂಸದರು, ಲೋಕಸಭೆ, ಚಿಕ್ಕಬಳ್ಳಾಪುರ ಹಾಗೂ ಕೇಂದ್ರ ರೇಷ್ಮೆ ಮಂಡಳಿ ಸದಸ್ಯರು

ಶ್ರೀ ನಾರಾಯಣ ಕೊರಗಪ್ಪ
ಗೌರವಾನ್ವಿತ ಸಂಸದರು, ರಾಜ್ಯಸಭೆ ಹಾಗೂ ಕೇಂದ್ರ ರೇಷ್ಮೆ ಮಂಡಳಿ ಸದಸ್ಯರು

ಶ್ರೀಮತಿ ರಚನ ಶಾ
ಕಾರ್ಯದರ್ಶಿಗಳು, ಜವಳಿ ಸಚಿವಾಲಯ, ಭಾರತ ಸರ್ಕಾರ

ಶ್ರೀಮತಿ ಪ್ರಜಕ್ತ ಎಲ್. ವರ್ಮ
ಜಂಟಿ ಕಾರ್ಯದರ್ಶಿಗಳು, ಜವಳಿ ಸಚಿವಾಲಯ, ಭಾರತ ಸರ್ಕಾರ ಹಾಗೂ ಉಪಾಧ್ಯಕ್ಷರು, ಕೇಂದ್ರ ರೇಷ್ಮೆ ಮಂಡಳಿ

ತಮಗೆಲ್ಲರಿಗೂ ಸುಸ್ವಾಗತ

ಸಿ.ಎಸ್.ಬಿ. ಕಾಂಪ್ಲೆಕ್ಸ್, ಬಿ.ಟಿ.ಎಂ. ಲೇಔಟ್, ಮಡಿವಾಳ, ಬೆಂಗಳೂರು 560 068
E-mail: ms.csb@nic.in Tel: +91 80 2628 2699, 2628 2100

csbmot Central Silk Board csb_mot